ಸಂಪಾದಕರು :
ಎಂ.ಎಸ್. ವಿಕಾಸ್

ಮಂಗಳವಾರ, ಮಾರ್ಚ್ 05, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 293 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999



## ಶ್ರೀ ಗುರು ಕೊಟ್ಟೂರೇಶ್ವರ ರಥೋತ್ಸವಕ್ಕೆ ಜನಸಾಗರ

ಕೊಟ್ಟೂರು, ಮಾ.4- ಶ್ರೀ ಕ್ಷೇತ್ರ ಕೊಟ್ಟೂರಿನ ಪವಾಡ ಪುರುಷ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ಮಹಾ ರಥೋತ್ಸವವು ಸೋಮವಾರ ಸಂಭ್ರಮದಿಂದ ನೆರವೇರಿತು.

ರಾಜ್ಯದ ವಿವಿಧ ಜಿಲ್ಲೆಗಳು ಸೇರಿದಂತೆ ನೆರೆಯ ರಾಜ್ಯಗಳಿಂದ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಜಾತ್ರೆಗೆ ಆಗಮಿಸಿದ್ದರು. ತಮ್ಮ ಇಷ್ಟಾರ್ಥ ಈಡೇರಿಕೆಗೆ ಭಕ್ತರು ಕಾಲ್ನಡಿಗೆ ಮೂಲಕ ಆಗಮಿಸಿ, ಗುರು ಕೊಟ್ಟೂರೇಶ್ವರನ ಕೃಪೆಗೆ ಪಾತ್ರರಾದರು.

ರಥೋತ್ಸವಕ್ಕೂ ಮೊದಲು ಸ್ವಾಮಿಯ ಮೂರ್ತಿಯನ್ನು ಬೆಳ್ಳಿ ಪಲ್ಲಕ್ಕಿಯಲ್ಲಿ ಕೂರಿಸಿ ಮೆರವಣಿಗೆ ಮಾಡಲಾಗುತ್ತದೆ. ದಿನವಿಡೀ ಉಪವಾಸ ಇರುವ ದಲಿತ ಮಹಿಳೆಯಿಂದ ಪಲ್ಲಕ್ಕಿಯಲ್ಲಿರುವ ಸ್ವಾಮಿಗೆ ಕಳಸದಾರತಿ, ಧೂಪದಾರತಿ ಮಾಡಲಾಗುತ್ತದೆ. ನಂತರ ಪಲ್ಲಕ್ಕಿ ಉತ್ಸವ ತೇರು ಬಜಾರ್ ಮೂಲಕ ಸಾಗಿ ರಥೋತ್ಸವ ಜರುಗುವ ಸ್ಥಳಕ್ಕೆ ಬರುತ್ತದೆ.

ಸಮಾಳ, ನಂದಿಕೋಲು ಸೇರಿದಂತೆ ಮತ್ತಿತರೆ ವಾದ್ಯಗಳು ರಥೋತ್ಸವಕ್ಕೆ ಮೆರಗು ನೀಡಿದವು. ಪಲ್ಲಕ್ಕಿಯನ್ನೂ ರಥದ ಸುತ್ತಲೂ ಐದು ಸುತ್ತು ಪ್ರದಕ್ಷಿಣೆ ಹಾಕಿದ ಬಳಿಕ ರಥದ ಒಳಗೆ ಸ್ವಾಮಿಯನ್ನು ಕೊಂಡೊಯ್ಯಲಾಗುತ್ತದೆ. ನಂತರವೇ ರಥೋತ್ಸವ ಜರುಗುತ್ತದೆ.

ರಥೋತ್ಸವಕ್ಕೆ ಚಾಲನೆ ಸಿಗುತ್ತಿದ್ದಂತೆ ಭಕ್ತರು 'ಕೊಟ್ಟೂರು ದೊರೆಯೇ, ನಿನಗಾರು ಸರಿಯೇ, ಸರಿ ಸರಿ ಅಂದವರ ಹಲ್ಲು ಮುರಿವೆ ಬಹುಪರಾಕ್' ಎಂದು ಘೋಷಣೆ ಮೊಳಗಿಸಿದರು. ಈ ಸಂದರ್ಭದಲ್ಲಿ ಭಕ್ತರು ಬಾಳೆ,ಹಣ್ಣುಗಳನ್ನು ರಥಕ್ಕೆ ಎಸೆದು ಭಕ್ತಿ ಸಮರ್ಪಿಸಿದರು.

# ಶಾಸಕರು, ಸಂಸದರ ಲಂಚಕ್ಕಿಲ್ಲ ವಿನಾಯಿತಿ : ಸುಪ್ರೀಂ ತೀರ್ಪು

ನವದೆಹಲಿ, ಮಾ. 4 – ಶಾಸನ ಸಭೆಗಳಲ್ಲಿ ಪ್ರಶ್ನೆ ಕೇಳಲು ಹಾಗೂ ಮತ ನೀಡಲು ಲಂಚ ಪಡೆಯುವವರಿಗೆ ಕಾನೂನು ಕ್ರಮದಿಂದ ವಿನಾಯಿತಿ ಇಲ್ಲ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಲಂಚ ಪಡೆದವರಿಗೆ ಕಾನೂನು ಕ್ರಮದಿಂದ ವಿನಾಯಿತಿ ಇದೆ ಎಂದು 1998ರಲ್ಲಿ ಸುಪ್ರೀಂ ಕೋರ್ಟ್‌ನ ಐವರು ಸದಸ್ಯರ ಪೀಠ ನೀಡಿದ್ದ ತೀರ್ಪನ್ನು ಈಗಿನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಸುಪ್ರೀಂ ಕೋರ್ಟ್ ಪೀಠ ಬದಲಿಸಿದೆ.

ಜನಪ್ರತಿನಿಧಿಗಳ ಭ್ರಷ್ಟಾಚಾರದಿಂದ ಭಾರತದ ಸಂಸದೀಯ ವ್ಯವಸ್ಥೆಯ ಅಡಿಪಾಯಕ್ಕೆ ಹಾನಿಯಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಪೀಠ ಅಭಿಪ್ರಾಯ ಪಟ್ಟಿದೆ.

ಜೆ.ಎಂ.ಎಂ. ಲಂಚ ಪ್ರಕರಣಕ್ಕೆ ಸಂಬಂಧಿಸಿದಂತೆ 1998ರಲ್ಲಿ 3-2 ಬಹುಮತದಿಂದ ತೀರ್ಪೊಂದನ್ನು ನೀಡಿದ್ದ ಸುಪ್ರೀಂ ಕೋರ್ಟ್, ಶಾಸನಸಭೆಗಳಲ್ಲಿ ಮಾಡಲಾಗುವ ಭಾಷಣ ಹಾಗೂ ಮತದಾನಕ್ಕೆ ಅಪರಾಧಿಕ ಪ್ರಕರಣಗಳಿಂದ ವಿನಾಯಿತಿ ಇದೆ ಎಂದು ತಿಳಿಸಿತ್ತು.

ಸೋಮವಾರ ಏಳು ಸದಸ್ಯರ ಪೀಠವು ಸರ್ವಸಮ್ಮತಿಯ ತೀರ್ಪು ನೀಡಿದ್ದು, ಜನಪ್ರತಿನಿಧಿಗಳಿಗೆ ಲಂಚ ಪ್ರಕರಣದಿಂದ ಯಾವುದೇ ವಿನಾಯಿತಿ ಇಲ್ಲ. ಜನಪ್ರತಿನಿಧಿಗಳು ಶಾಸಕಾಂಗದಲ್ಲಿ ಉತ್ತಮ ವಾತಾವರಣದಲ್ಲಿ ಚರ್ಚಿಸಬೇಕು ಎಂಬುದರ ಸಲುವಾಗಿ ಸಂವಿಧಾನದ 105 ಹಾಗೂ 194ನೇ ವಿಧಿಗಳನ್ನು ರೂಪಿಸಲಾಗಿದೆ ಎಂದು ತಿಳಿಸಿದೆ.

ಜನಪ್ರತಿನಿಧಿಗಳು ವಿಧಾನ ಮಂಡಲ ಹಾಗೂ ಸಂಸತ್ತಿನಲ್ಲಿ ನಿರ್ಭೀತ ವಾತಾವರಣದಲ್ಲಿ ಚರ್ಚಿಸಬೇಕು, ವಿಚಾರ ವಿನಿಮಯ ಮಾಡಲು ಅವಕಾಶವಿರಬೇಕು ಎಂದು ಸಂವಿಧಾನದ 105 ಹಾಗೂ 194ನೇ ವಿಧಿ ರೂಪಿಸಲಾಗಿದೆ. ಇದರಿಂದ ಸದನದ ಕಾರ್ಯನಿರ್ವಹಣೆ ಶ್ರೀಮಂತವಾಗುತ್ತದೆ. ಆದರೆ, ಸದಸ್ಯರೊಬ್ಬರು ಲಂಚ ಪಡೆದಾಗ ಈ ಉದ್ದೇಶವೇ ಮರೆಯಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಪೀಠ ಹೇಳಿದೆ.

ಶಾಸಕ ಇಲ್ಲವೇ ಸಂಸದ ಭ್ರಷ್ಟಾಚಾರ ನಡೆಸಿ ಮಾತನಾಡಿದಾಗ ಇಲ್ಲವೇ ಮತ ಚಲಾಯಿಸಿದಾಗ (4ನೇ ಪುಟಕ್ಕೆ)

# ಪಾಕ್ ಪರ ಘೋಷಣೆ : ಮೂವರ ಬಂಧನ

ಬೆಂಗಳೂರು, ಮಾ. 4 – ವಿಧಾನಸೌಧದಲ್ಲಿ ಫೆಬ್ರವರಿ 27ರಂದು ಪಾಕಿಸ್ತಾನದ ಪರವಾಗಿ ಘೋಷಣೆ ಕೂಗಿದ ಆರೋಪದ ಮೇಲೆ ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾಂಗ್ರೆಸ್ ನಾಯಕ ಸೈಯದ್ ನಾಸೀರ್ ಹುಸೇನ್ ಅವರು ರಾಜ್ಯಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದರು. ಆ ಸಂದರ್ಭದಲ್ಲಿ ಅವರ ಬೆಂಬಲಿಗರು ಪಾಕಿಸ್ತಾನ ಪರ ಘೋಷಣೆ ಕೂಗಿದ್ದರು ಎಂದು ಆರೋಪಿಸಿ ಪ್ರಕರಣ ದಾಖಲಿಸಲಾಗಿತ್ತು.

ಈ ವಿಷಯವನ್ನು ವಿಧಿ ವಿಜ್ಞಾನ ಪ್ರಯೋಗಾಲಯದ ಪರಿಶೀಲನೆಗೆ ವಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದರು. ಪ್ರಯೋಗಾಲಯದ ವರದಿ ಆಧರಿಸಿ ಮೂವರನ್ನು ಬಂಧಿಸಲಾಗಿದೆ.

ನವದೆಹಲಿ ಮೂಲದ ಇಲ್ತಾಝ್ ಅಹಮದ್, ಆರ್.ಟಿ.ನಗರದ ನಿವಾಸಿ ಮುನಾವರ್ ಹಾಗೂ ಹಾವೇರಿ ಜಿಲ್ಲೆ ಬ್ಯಾಡಗಿಯ ಮುಹಮ್ಮದ್ ಶಫಿ ನಾಶಿಪುಡಿ ಎಂಬುವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಈ ನಡುವೆ, ಖಾಸಗಿ ಪ್ರಯೋಗಾಲಯದ ಕ್ಲೂ4 ಎವಿಡೆನ್ಸ್ ಫಾರೆನ್ಸಿಕ್ ಎವಿಡೆನ್ಸ್ ಮೂಲಕ ಧ್ವನಿ ಪರೀಕ್ಷೆ ನಡೆಸಿರುವ ವರದಿಯೊಂದನ್ನು ಬಿಜೆಪಿ ಪ್ರಕಟಿಸಿದೆ. ಸಂವಾದ ಫೌಂಡೇಷನ್ ಸಂಸ್ಥೆಯ ಪರವಾಗಿ ಈ ಪರೀಕ್ಷೆ ನಡೆಸಲಾಗಿದ್ದು, ಇದರಲ್ಲಿ ಪಾಕಿಸ್ತಾನದ ಪರ ಘೋಷಣೆ ಕೂಗಿರುವುದು ಸ್ಪಷ್ಟವಾಗಿದೆ ಎಂದು ತಿಳಿಸಲಾಗಿದೆ.

ಈ ಪರೀಕ್ಷೆಗೆ ಆಕ್ಷೇಪಿಸಿರುವ ಗೃಹ ಸಚಿವ ಜಿ. ಪರಮೇಶ್ವರ್, ಯಾರ ಅನುಮತಿಯ ಮೇರೆಗೆ ಪರೀಕ್ಷೆ ನಡೆಸಲಾಗಿದೆ, ವರದಿ ನೀಡಿದ ವ್ಯಕ್ತಿ ಪ್ರಯೋಗಾಲಯ ಹೊಂದಿದ್ದಾನೆಯೇ, ಈ ರೀತಿಯ ವರದಿ ಬಹಿರಂಗ ಮಾಡಲು ಅಧಿಕಾರವಿದೆಯೇ ಎಂಬುದನ್ನು ಪರಿಶೀಲಿಸುವುದಾಗಿ (3ನೇ ಪುಟಕ್ಕೆ)

## ನಾಳೆ ಬಿಜೆಪಿ ಎರಡನೇ ಪಟ್ಟಿ : ಯಡಿಯೂರಪ್ಪ

ಬೆಂಗಳೂರು, ಮಾ. 4- ಬುಧವಾರದಂದು ಲೋಕಸಭಾ ಚುನಾವಣೆಗೆ ಬಿಜೆಪಿ ಅಭ್ಯರ್ಥಿಗಳ ಎರಡನೇ ಪಟ್ಟಿ ಪ್ರಕಟವಾಗುವ ಸಾಧ್ಯತೆ ಇದೆ ಎಂದು ಪಕ್ಷದ ಸಂಸದೀಯ ಮಂಡಳಿ ಸದಸ್ಯರೂ ಆಗಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿರುವ ಅವರು, ಬುಧವಾರದಂದು ದೆಹಲಿಯಲ್ಲಿ ಸಭೆ ನಡೆಯಲಿದೆ. ನಾನು ಅಲ್ಲಿಗೆ ತೆರಳುತ್ತಿದ್ದೇನೆ. ಕರ್ನಾಟಕದ ಅಭ್ಯರ್ಥಿಗಳೂ ಸೇರಿದಂತೆ ಎರಡನೇ ಪಟ್ಟಿ ಅಂದು ಅಂತಿಮವಾಗುವ ಸಾಧ್ಯತೆ ಇದೆ ಎಂದವರು ಹೇಳಿದ್ದಾರೆ. ಬುಧವಾರದಂದೇ ರಾಜ್ಯದ ಎಲ್ಲಾ 28 ಅಭ್ಯರ್ಥಿಗಳ ಘೋಷಣೆಯಾಗುವ ಸಾಧ್ಯತೆಯೂ ಇದೆ. ಇದರಲ್ಲಿ ಬಹುತೇಕ ವಿಳಂಬವಾಗುವುದಿಲ್ಲ ಎಂದವರು ಮತ್ತೊಂದು ಪ್ರಶ್ನೆಗೆ ಉತ್ತರಿಸಿದ್ದಾರೆ.

## ಒಡಿಶಾ : 2019ರ ಶಾಸಕನ ಆಯ್ಕೆ ಅಸಿಂಧು

ಕಟಕ್, ಮಾ. 4 – ಒಡಿಶಾದ ಕಟಕ್ - ಬಾರಾಬಾತಿ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಮೊಹಮ್ಮದ್ ಮೊಕಿಮ್ 2019ರಲ್ಲಿ ಗೆದ್ದಿದ್ದನ್ನು ಒರಿಸ್ಸಾ ಹೈಕೋರ್ಟ್ ಅಸಿಂಧುಗೊಳಿಸಿದೆ.

ಬಿ.ಜೆ.ಡಿ. ಅಭ್ಯರ್ಥಿ ದೇಬಸೀಸ್ ಸಮತ್ರೇ ಅವರು ವಿಧಾನಸಭಾ ಚುನಾವಣೆಯ ಫಲಿತಾಂಶವನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿದ್ದರು. ಮೊಕಿಮ್ ಅವರು ತಮ್ಮ ವಿರುದ್ಧದ ಅಪರಾಧಿಕ ಪ್ರಕರಣಗಳ ವಿವರಗಳನ್ನು ಏಪ್ರಿಲ್ 2019ರಲ್ಲಿ ಚುನಾವಣೆಗೆ ಸ್ಪರ್ಧಿಸುವಾಗ ಸಲ್ಲಿಸಿರಲಿಲ್ಲ. ಹೀಗಾಗಿ ಅವರ ಆಯ್ಕೆ ಅನೂರ್ಜಿತಗೊಳಿಸಿರುವುದಾಗಿ ಹೈಕೋರ್ಟ್ ಹೇಳಿದೆ.

# ಗುತ್ತಿಗೆ ಲಂಚ ಸಾಬೀತುಪಡಿಸಿದರೆ ರಾಜಕೀಯ ನಿವೃತ್ತಿ : ಸಿಎಂ ಸವಾಲು

ಬೆಂಗಳೂರು, ಮಾ. 4 - ಗುತ್ತಿಗೆದಾರರಿಂದ ಐದು ಪೈಸೆ ಲಂಚ ಪಡೆದಿದ್ದು ಸಾಬೀತುಪಡಿಸಿದರೆ, ರಾಜಕೀಯ ನಿವೃತ್ತಿ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಖಾರವಾಗಿ ನುಡಿದಿದ್ದಾರೆ.

ಬಿಜೆಪಿ ಆಡಳಿತದಲ್ಲಿ ಇದ್ದಂತೆ ಕಾಂಗ್ರೆಸ್ ಆಡಳಿತದಲ್ಲೂ 40 ಪರ್ಸೆಂಟ್ ಕಮೀಷನ್ ನಡೆಯುತ್ತಿದೆ ಎಂದು ಗುತ್ತಿಗೆದಾರರು ಆರೋಪ ಮಾಡಿದ್ದ ಹಿನ್ನೆಲೆಯಲ್ಲಿ ಸಂಘವೇ ಇಂದು ನಗರದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಅವರಿಗೇ ಮುಖ್ಯಮಂತ್ರಿ ಈ ಸವಾಲು ಹಾಕಿದ್ದಾರೆ.

ಇದೇ ವೇದಿಕೆಯಲ್ಲಿ ಉಪಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಖಾತೆ ಹೊಣೆ ಹೊತ್ತ ಡಿ.ಕೆ. ಶಿವಕುಮಾರ್ ಮಾತನಾಡಿ, ಗುತ್ತಿಗೆದಾರರು ರಾಜಕೀಯದಿಂದ ದೂರವಿರಿ. ನಿಮಗೂ ನಮಗೂ ಭ್ರಷ್ಟಾಚಾರದ ಮಸಿ ಯಾವಾಗಲೂ ಅಂಟೇ ಇರುತ್ತದೆ ಎಂದು ಮಾರ್ಮಿಕವಾಗಿ ತಿಳಿಸಿದ್ದಾರೆ.



ಅರಮನೆ ಮೈದಾನದಲ್ಲಿ ನಡೆದ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದ ಸಿದ್ದರಾಮಯ್ಯ ಅವರು, ನಾನು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸುತ್ತಿದ್ದೇನೆ. ನಾನು ನಿಮ್ಮಿಂದ ಎಲ್‌ಓಸಿಗೆ ನಯಾಪೈಸೆ ಪಡೆದಿದ್ದು ಸಾಬೀತು ಮಾಡಿದರೂ ಸಾರ್ವಜನಿಕ ಜೀವನದಿಂದ ಹಿಂದೆ ಸರಿಯುತ್ತೇನೆ. ನೀವು ಹಿಂದಿನ ಸರ್ಕಾರದ ಮೇಲೆ ಮಾಡಿದ್ದ ಭ್ರಷ್ಟಾಚಾರದ ಆರೋಪವನ್ನು ಈ ಸರ್ಕಾರಕ್ಕೂ ಮುಂದುವರೆಸಬೇಡಿ ಎಂದರು.

ಹೇಳಿಕೆ ನೀಡುವಾಗ ಜವಾಬ್ದಾರಿಯಿಂದ ವರ್ತಿಸಬೇಕು. ನಿಮ್ಮಲ್ಲಿನ ಸಣ್ಣ ಗುತ್ತಿಗೆದಾರರ ಅನುಕೂಲಕ್ಕಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 25 ಕೋಟಿ ರೂ. (4ನೇ ಪುಟಕ್ಕೆ)

## ಗಲಭೆಕೋರರಿಂದ ಆಸ್ತಿ ನಷ್ಟದ ಹಣ ವಸೂಲಿ : ಉತ್ತರಾಖಂಡದ ನಿರ್ಧಾರ

ಡೆಹ್ರಾಡೂನ್, ಮಾ. 4 - ಸಾರ್ವಜನಿಕ ಆಸ್ತಿಗಳಿಗೆ ಹಾನಿ ಮಾಡುವ ಗಲಭೆಕೋರರು ಆ ನಷ್ಟವನ್ನು ಭರಿಸಬೇಕಾಗುತ್ತದೆ ಎಂದು ಉತ್ತರಾಖಂಡ ಸರ್ಕಾರ ತಿಳಿಸಿದೆ.

ಕಳೆದ ತಿಂಗಳು ರಾಜ್ಯದ ಹಲ್ದವಾನಿಯಲ್ಲಿ ನಡೆದ ಗಲಭೆಯಲ್ಲಿ ಆರು ಜನರು ಸಾವನ್ನಪ್ಪಿದ್ದರು ಹಾಗೂ ನೂರಾರು ಜನರು ಗಾಯಗೊಂಡಿದ್ದರು. ಹಲವಾರು ವಾಹನಗಳು ಹಾಗೂ ಪೊಲೀಸ್ ಠಾಣೆಗೆ ಬೆಂಕಿ ಹಚ್ಚಲಾಗಿತ್ತು. ಗಲಭೆಗಳ ಸಂದರ್ಭದಲ್ಲಿ ಆಗುವ ನಷ್ಟವನ್ನು ಗಲಭೆಕೋರರಿಂದ ವಸೂಲಿ ಮಾಡಲು ವಿಶೇಷ ಕ್ಲೇಮುಗಳ ಟ್ರಿಬ್ಯೂನಲ್ ಒಂದನ್ನು ರಚಿಸಲೂ ಸಹ ರಾಜ್ಯ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ.

## ಈ ವರ್ಷ ಶೇ.6.8ರ ಬೆಳವಣಿಗೆ

ನವದೆಹಲಿ, ಮಾ. 4 - 2024ರಲ್ಲಿ ಭಾರತದ ಬೆಳವಣಿಗೆ ದರ ಶೇ.6.8ರಷ್ಟಿರಲಿದೆ ಎಂದು ಜಾಗತಿಕ ಶ್ರೇಯಾಂಕ ಸಂಸ್ಥೆಯಾದ ಮೂಡೀಸ್ ತಿಳಿಸಿದೆ. ನಿರೀಕ್ಷೆಗೂ ಮೀರಿ ಬೆಳವಣಿಗೆಯಾಗಲಿದ್ದು, ಭಾರತ ಜಿ20 ದೇಶಗಳ ಪೈಕಿ ಅತಿ ಹೆಚ್ಚಿನ ಬೆಳವಣಿಗೆ ಹೊಂದುವುದನ್ನು ಮುಂದುವರೆಸಲಿದೆ ಎಂದು ಮೂಡೀಸ್ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಪ್ರಸಕ್ತ ವರ್ಷದಲ್ಲಿ ನೈಜ ಜಿ.ಡಿ.ಪಿ. ಬೆಳವಣಿಗೆ ಶೇ.6-7ರಷ್ಟಿರಲಿದೆ. 2025ರಲ್ಲಿ ಜಿ.ಡಿ.ಪಿ. ಬೆಳವಣಿಗೆ ದರ ಶೇ.6.4ರಷ್ಟಿರಲಿದೆ ಎಂದು ಅಂದಾಜಿಸಲಾಗಿದೆ.

## ಸನಾತನ ಧರ್ಮ ನಿರ್ಮೂಲನೆ ಹೇಳಿಕೆಗೆ ಸುಪ್ರೀಂ ತರಾಟೆ

**ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದುರ್ಬಳಕೆ ಮಾಡಿಕೊಂಡ ನಂತರ ಕೋರ್ಟ್‌ಗೆ ಬಂದಿರುವುದೇಕೆ? ಎಂದು ಸ್ಟಾಲಿನ್‌ಗೆ ತರಾಟೆ**

ನವದೆಹಲಿ, ಮಾ. 4 – ಸನಾತನ ಧರ್ಮ ನಿರ್ಮೂಲನೆ ಮಾಡುವ ಕುರಿತು ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ನೀಡಿರುವ ಹೇಳಿಕೆಯನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

ತಮ್ಮ ವಿರುದ್ಧ ದಾಖಲಿಸಲಾದ ಹಲ ವಾರು ಎಫ್.ಐ.ಆರ್.ಗಳನ್ನು ಒಗ್ಗೂಡಿಸುವಂತೆ ಸ್ಟಾಲಿನ್ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನ ಹಾಗೂ ದೀಪಂಕರ್ ದತ್ತ ಅವರನ್ನು ಒಳ ಗೊಂಡ ಪೀಠ, (4ನೇ ಪುಟಕ್ಕೆ)

# ಮೂವರು ವಿದ್ಯಾರ್ಥಿನಿಯರ ಮೇಲೆ ಆಸಿಡ್ ದಾಳಿ

**ಕೇರಳದ ಯುವಕನಿಂದ ಮಂಗಳೂರಿನಲ್ಲಿ ದುಷ್ಕೃತ್ಯ**

ಮಂಗಳೂರು, ಮಾ. 4 – ದಕ್ಷಿಣ ಕನ್ನಡ ಜಿಲ್ಲೆಯ ಕಡಬದ ಸರ್ಕಾರಿ ಪಿ.ಯು. ಕಾಲೇಜಿನ ಮೂವರು ವಿದ್ಯಾರ್ಥಿನಿಯರ ಮೇಲೆ ಯುವಕನೋರ್ವ ಆಸಿಡ್ ದಾಳಿ ನಡೆಸಿದ್ದಾನೆ.

ಕೇರಳದ ಮಲಪ್ಪುರಂ ಜಿಲ್ಲೆಯ ನಿಳಂಬೂರಿಗೆ ಸೇರಿದ ಅಬಿನ್ ಶಿಬಿ (23) ಎಂಬಾತ ಈ ಕೃತ್ಯ ಎಸಗಿದ್ದಾನೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಈತ ಹುಡುಗಿಯೊಬ್ಬಳ ಬೆನ್ನು ಬಿದ್ದಿದ್ದ. ಹುಡುಗಿ ಈತನಿಂದ ದೂರವೇ ಇದ್ದಳು. ಇದರಿಂದ ಆಕ್ರೋಶಗೊಂಡ ಶಿಬಿ, ಆಸಿಡ್ ದಾಳಿ ನಡೆಸಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಒಬ್ಬ ಹುಡುಗಿಯ ಮೇಲೆ ದಾಳಿ ನಡೆಸಲು ಯತ್ನಿಸಿದ್ದೆ. ಆಕಸ್ಮಿಕವಾಗಿ ಇನ್ನಿಬ್ಬರ ಮೇಲೆ ಆಸಿಡ್ ಬಿದ್ದಿದೆ ಎಂದು ಶಿಬಿ ಹೇಳಿದ್ದಾನೆ. ಓರ್ವ ಹುಡುಗಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ. ಇನ್ನಿಬ್ಬರಿಗೆ ಸಣ್ಣ ಸುಟ್ಟ ಗಾಯಗಳಾಗಿವೆ. ಘಟನೆಯ ನಂತರ ಹುಡುಗಿಯರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. (3ನೇ ಪುಟಕ್ಕೆ)

# ವಿವಿಧ ಕಾಮಗಾರಿಗಳಿಗೆ ಎಸ್ಸೆಸ್ಸೆಂ ಭೂಮಿ ಪೂಜೆ



ದಾವಣಗೆರೆ, ಮಾ.4- ನಗರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಸೋಮವಾರ ಚಾಲನೆ ನೀಡಿದರು.

ಎಂ.ಸಿ.ಸಿ. ಎ ಬ್ಲಾಕ್ ರಸ್ತೆ ಅಭಿವೃದ್ಧಿ ಕಾಮಗಾರಿ, 1.50 ಕೋಟಿ ರೂ.ಗಳಲ್ಲಿ ಮೋತಿ ವೀರಪ್ಪ ಜ್ಯೂನಿಯರ್ ಕಾಲೇಜು ಆವರಣದಲ್ಲಿ 6 ಕೊಠಡಿಗಳ ನಿರ್ಮಾಣ ಕಾಮಗಾರಿ, ಜಿ.ಪಂ. ಅಧಿಕಾರಿಗಳ ವಸತಿ ಗೃಹ ಹಾಗೂ ದಾವಣಗೆರೆ ತಾ.ಪಂ. ಕಟ್ಟಡಗಳ ಉದ್ಘಾಟನೆ, ಶಿವಕುಮಾರಸ್ವಾಮಿ ಬಡಾವಣೆ ಮುಖ್ಯ ರಸ್ತೆಯ ಅಭಿವೃದ್ಧಿ ಕಾಮಗಾರಿ ಹಾಗೂ ಎವಿಕೆ ಕಾಲೇಜು ರಸ್ತೆಯ ಮಹಾತ್ಮ ಗಾಂಧಿ ವಿದ್ಯಾರ್ಥಿ ನಿಲಯ ಕೊಠಡಿ ಕಾಮಗಾರಿಗೆ ಸಚಿವರು ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳ ಜೊತೆಗೆ ಅಭಿವೃದ್ಧಿ ಕಾರ್ಯಗಳಿಗೂ ಒತ್ತು ನೀಡುತ್ತಿದೆ ಎಂದರು.

ಈಗಾಗಲೇ ಗ್ಯಾರಂಟಿಗಳ ಅನುಷ್ಠಾನ ಸಮರ್ಪಕವಾಗಿ ನಡೆದಿದ್ದು, ಜನರು ಐದೂ ಗ್ಯಾರಂಟಿಗಳ ಉಪ ಯೋಗ ಪಡೆದುಕೊಳ್ಳುತ್ತಿದ್ದಾರೆ. ಯಾರಾದರೂ ಗ್ಯಾರಂಟಿ ಯೋಜನೆಯಿಂದ ವಂಚಿತರಾದಲ್ಲಿ, ಸಂಬಂಧಿಸಿದ ಅಧಿಕಾರಿಗಳಿಗಾಗಲೀ ಅಥವಾ ತಮ್ಮ ಗಮನಕ್ಕಾಗಲೀ ತರುವಂತೆ ಸಚಿವರು ಹೇಳಿದರು.

ಎವಿಕೆ ಕಾಲೇಜು ರಸ್ತೆ ಬಳಿಯ ಆದಿ ಕರ್ನಾಟಕ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದ ಸಚಿವ ಎಸ್ಸೆಸ್ಸೆಂ, ಸ್ವಾತಂತ್ರ್ಯ ಪೂರ್ವದಲ್ಲಿಯೇ ಮಹಾತ್ಮ ಗಾಂಧೀಜಿ ಅವರು ಭೂಮಿ ಪೂಜೆ ಸಲ್ಲಿಸಿದ್ದ ಜಾಗವಿದು. ಇಲ್ಲಿನ ವಿದ್ಯಾರ್ಥಿ ನಿಲಯ ಕೊಠಡಿ ನಿರ್ಮಾಣಕ್ಕೆ ಅನುದಾನ ನೀಡುವಂತೆ ಒತ್ತಾಯಿಸಿದ ಹಿನ್ನೆಲೆಯಲ್ಲಿ 92 ಲಕ್ಷ ರೂ. ಅನುದಾನ ನೀಡಿ ಕಾಮಗಾರಿ ಆರಂಭಿಸಲಾಗುತ್ತಿದೆ ಎಂದರು.

ರಾಜ್ಯಾದ್ಯಂತ ಸರ್ಕಾರಿ ಕಾಲೇಜುಗಳಲ್ಲಿ ಉಪನ್ಯಾಸಕರು ಹಾಗೂ ಸಿಬ್ಬಂದಿಗಳ ಕೊರತೆ ಇದೆ. ಈ ವಿಷಯ ಮುಖ್ಯಮಂತ್ರಿಗಳ ಗಮನಕ್ಕೂ ಬಂದಿದ್ದು, ಕ್ಯಾಬಿನೆಟ್‌ನಲ್ಲೂ ಸಿಬ್ಬಂದಿಗಳ ನೇಮಕದ ಬಗ್ಗೆ ಚರ್ಚೆ ನಡೆದಿದೆ. ಈ ವೇಳೆ ತಿಪ್ಪೇಸ್ವಾಮಿ (4ನೇ ಪುಟಕ್ಕೆ)

## ಬಿಜೆಪಿ ಸಂಸದನ ಅಶ್ಲೀಲ ವಿಡಿಯೋ

**ಡೀಪ್‌ಫೇಕ್ ಎಂದು ದೂರು ; ಅಮಾಯಕ ಎಂದು ಸಾಬೀತಾಗುವವರೆಗೂ ಸ್ಪರ್ಧೆ ಇಲ್ಲ ಎಂದ ಸಂಸದ**

ಬಾರಾಬಂಕಿ, ಮಾ. 4 - ಉತ್ತರ ಪ್ರದೇಶದ ಬಿಜೆಪಿ ಸಂಸದ ಉಪೇಂದ್ರಸಿಂಗ್ ರಾವತ್ ಅವರ ಅಶ್ಲೀಲ ವಿಡಿಯೋ ಒಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ರಾವತ್ ಅವರು ಬಾರಾಬಂಕಿ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಎರಡನೇ ಅವಧಿಗಾಗಿ ನಿನ್ನೆಯಷ್ಟೇ ಅವರಿಗೆ ಟಿಕೆಟ್ ಪ್ರಕಟಿಸಲಾಗಿತ್ತು.

ಈ ಬಗ್ಗೆ ತನಿಖೆ ನಡೆಸಲು ಒತ್ತಾಯಿಸಿರುವ ರಾವತ್, ನಾನು ನಿರ್ದೋಷಿ ಎಂಬುದು ಸಾಬೀತಾಗುವವರೆಗೆ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದಿದ್ದಾರೆ.

ಡೀಪ್‌ಫೇಕ್ ಎ.ಐ. ತಂತ್ರಜ್ಞಾನದ ಮೂಲಕ ನನ್ನ ನಕಲಿ ವಿಡಿಯೋ ಒಂದನ್ನು ಸೃಷ್ಟಿಸಿ ವೈರಲ್ ಮಾಡಲಾಗಿದೆ. ಈ ಬಗ್ಗೆ ಎಫ್.ಐ.ಆರ್. ದಾಖಲಿಸಿದ್ದೇನೆ ಎಂದು ರಾವತ್ ತಿಳಿಸಿದ್ದಾರೆ.

ಈ ಬಗ್ಗೆ ತನಿಖೆ ನಡೆಸುವಂತೆ ಪಕ್ಷದ ಅಧ್ಯಕ್ಷರಿಗೆ ಕೋರಿಕೊಂಡಿದ್ದೇನೆ. ನಾನು ನಿರ್ದೋಷಿ ಎಂಬುದು ಸಾಬೀತಾಗುವವರೆಗೆ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದೂ ಅವರು ಹೇಳಿದ್ದಾರೆ.



**ಹಳೇಪೇಟೆ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದ ಪುನರ್ ನಿರ್ಮಾಣಕ್ಕೆ ಇಂದು ಭೂಮಿ ಪೂಜಾ ಸಮಾರಂಭ.**

ದಾವಣಗೆರೆ ಹಳೇಪೇಟೆಯಲ್ಲಿರುವ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಶ್ರೀ ಕುದುರೆ ಮಹಾಲಿಂಗಪ್ಪ ಕಲ್ಯಾಣ ಮಂಟಪವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಸಮುದಾಯ ಭವನ ನಿರ್ಮಾಣಕ್ಕೆ ಭೂಮಿ ಪೂಜಾ ಸಮಾರಂಭ.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರಾದ **ಡಾ. ಶಾಮನೂರು ಶಿವಶಂಕರಪ್ಪ** ಅವರ ಶಾಸಕರ ಅನುದಾನದಡಿಯಲ್ಲಿನ ಕರ್ನಾಟಕ ರಾಜ್ಯ ಸರ್ಕಾರದ ವಿಶೇಷ ಅನುದಾನ 3 ಕೋಟಿ ರೂ.ಗಳ ವೆಚ್ಚದಲ್ಲಿ ಈ ಸಮುದಾಯ ಭವನವನ್ನು ನಿರ್ಮಿಸಲುದ್ದೇಶಿಸಲಾಗಿದೆ.

ಭೂಮಿ ಪೂಜಾ ಸಮಾರಂಭದ ದಿನಾಂಕ : 05.03.2024ನೇ ಮಂಗಳವಾರ.
ಸಮಯ : ಮಧ್ಯಾಹ್ನ 12.30ಕ್ಕೆ.
ಸ್ಥಳ : ಹಳೇಪೇಟೆ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಎದುರು.
ಭೂಮಿ ಪೂಜೆ : ಡಾ. ಶಾಮನೂರು ಶಿವಶಂಕರಪ್ಪ
ಮುಖ್ಯ ಅತಿಥಿ : ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್,
ಗಣಿ ಮತ್ತು ಭೂ ವಿಜ್ಞಾನ ಖಾತೆ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು

**ಸರ್ವರಿಗೂ ಸುಸ್ವಾಗತ...**
ಶ್ರೀ ವೀರಭದ್ರೇಶ್ವರ ದೇವಸ್ಥಾನ ಸಮಿತಿ, ಹಳೇಪೇಟೆ, ದಾವಣಗೆರೆ.

# ಕೊಟ್ಟೂರು ಪಾದಯಾತ್ರಿಗಳಿಗೆ ಪ್ರಸಾದ ವಿತರಣೆ



ಹರಪನಹಳ್ಳಿ

ಹರಪನಹಳ್ಳಿ, ಮಾ. 4- ಬಿದ್ದ ಹನುಮಪ್ಪನಮಟ್ಟಿಯ ಶ್ರೀ ವೀರಾಂಜನೇಯ ದೇವಸ್ಥಾನ ಸಮಿತಿ ಮತ್ತು ಕೆ. ಬೇವಿನಹಳ್ಳಿ ಗ್ರಾಮಸ್ಥರ ವತಿಯಿಂದ ಕೊಟ್ಟೂರಿಗೆ ಹೋಗುವ ಪಾದಯಾತ್ರಿಗಳಿಗೆ ಉಪಹಾರ, ಪಾನಕ ಮತ್ತು ಮಜ್ಜಿಗೆ ಸೇರಿದಂತೆ ಪ್ರಸಾದ ವಿತರಿಸಿದರು.

ಕಂಚಿಕೆರೆ-ಅರಸಿಕೆರೆ ಮಾರ್ಗವಾಗಿ ಹೋಗುವ ಪಾದಯಾತ್ರಿ ಕರು ಶ್ರೀಕ್ಷೇತ್ರ ಬಿದ್ದ ಹನುಮಪ್ಪನಮಟ್ಟಿ ಶ್ರೀ ವೀರಾಂಜನೇಯ ಸ್ವಾಮಿ ದೇವಾಲಯದ ಆವರಣದಲ್ಲಿ ಪ್ರಸಾದ ಸೇವಿಸಿ ಕೆಲಹೊತ್ತು ವಿಶ್ರಾಂತಿ ಪಡೆದು ಯಾತ್ರೆ ಮುಂದುವರೆಸುತ್ತಿದ್ದರು.

ಈ ವೇಳೆ ಕೆ. ಬೇವಿನಹಳ್ಳಿ ಗ್ರಾಮದ ಜಿ.ಎಸ್. ಮಹೇಶ್ವರಪ್ಪ ಗೌಡ್ರು, ಅವರ ಕುಟುಂಬ ಮತ್ತು ಗ್ರಾಮಸ್ಥರು, ಶ್ರದ್ಧಾ ಭಕ್ತಿಯಿಂದ ದಾಸೋಹ ಸೇವೆಯಲ್ಲಿ ಪಾಲ್ಗೊಂಡಿದ್ದರು.

ಭಕ್ತಿಯೇ ಮುಕ್ತಿಗೆ ಕಾರಣ. ನಿಮ್ಮಲ್ಲಿರುವ ಅಪಾರ ಭಕ್ತಿ-ನಂಬಿಕೆ ನಿಮ್ಮನ್ನು ಗೆಲ್ಲಿಸುತ್ತದೆ ಎಂದು ಬಸವರಾಜ ಶ್ರೀಗಳು ಆಶೀರ್ವಚನ ನುಡಿದರು. ಸಂಗಪ್ಪ ತೋಟದ ಶಾಮನೂರು, ಬಿ. ಬಸವರಾಜ ಕಂಚಿಕೆರೆ, ಕೆ.ಎಂ. ಮಹೇಶಪ್ಪ, ಪಾಟೀಲ್ ಕೆಂಚನಗೌಡರು, ದುದ್ದುಗಾರ ಬಸವರಾಜಪ್ಪ, ಬಾರಿಕರ ಮಂಜಣ್ಣ, ಕೆ.ಬಿ. ಬಸವರಾಜಪ್ಪ, ಮಹಾದೇವಮ್ಮ ಮಲ್ಲಿಕಾರ್ಜುನಪ್ಪ, ಪ್ರಕಾಶ್ ಹೊಸಮನಿ ಇತರರು ಇದ್ದರು.

## ನಗರದಲ್ಲಿಂದು 'ಕಾನೂನು ಅರಿವು-ನೆರವು' ಬೀದಿ ನಾಟಕ ಪ್ರದರ್ಶನ

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಆರ್.ಎಲ್. ಲಾ ಕಾಲೇಜು ಇವರ ಸಹಯೋಗದಲ್ಲಿ ಇಂದು ಸಂಜೆ 4.30 ಕ್ಕೆ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ಆರ್.ಎಲ್. ಲಾ ಕಾಲೇಜಿನ ಐದನೇ ವರ್ಷ ಹಾಗೂ ಏಳನೇ ಸೆಮಿಸ್ಟರ್ ವಿದ್ಯಾರ್ಥಿಗಳಿಂದ 'ಕಾನೂನು ಅರಿವು-ನೆರವು' ಬೀದಿ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಹಿರಿಯ ನ್ಯಾಯಾಧೀಶರಾದ ಮಹಾವೀರ ಎಂ. ಕರೆಣ್ಣನವರ್ ಕಾರ್ಯಕ್ರಮ ಉದ್ಘಾಟಿಸುವರು. ಕಾಲೇಜಿನ ಪ್ರಾಚಾರ್ಯ ಡಾ. ಜಿ.ಎಸ್. ಸತೀಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಾ. ಎಂ.ಜಿ. ಈಶ್ವರಪ್ಪ, ದಿನೇಶ್ ಕೆ. ಶೆಟ್ಟಿ ಭಾಗವಹಿಸಲಿದ್ದಾರೆ.

# ಯಾವ ಮಗವೂ ಶಿಕ್ಷಣದಿಂದ ವಂಚಿತವಾಗಬಾರದು



ಬನ್ನಿಕೋಡು : ಶಾಲಾ ಕಟ್ಟಡ ಉದ್ಘಾಟನೆಯಲ್ಲಿ ಸಚಿವ ಮಲ್ಲಿಕಾರ್ಜುನ್ ಕಳಕಳಿ

ಮಲೇಬೆನ್ನೂರು, ಮಾ. 4- ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ಸಂಸ್ಕಾರ ನೀಡಲು ಮೊದಲ ಆದ್ಯತೆ ನೀಡಬೇಕೆಂದು ಭೂ ವಿಜ್ಞಾನ, ಗಣಿ ಮತ್ತು ತೋಟಗಾರಿಕೆ ಇಲಾಖೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು.

ಭಾನುವಾರ ಬನ್ನಿಕೋಡು ಗ್ರಾಮದಲ್ಲಿ ನಿರ್ಮಿಸಿರುವ ಕರ್ನಾಟಕ ಪಬ್ಲಿಕ್ ಶಾಲೆಯ ನೂತನ ಕಟ್ಟಡ ಸಂಕೀರ್ಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳೂ ಸಹ ಶ್ರದ್ಧೆಯಿಂದ ಓದಿ ಜೀವನದಲ್ಲಿ ಉತ್ತಮ ಪ್ರಗತಿ ಸಾಧಿಸುವ ಮೂಲಕ ತಂದೆ-ತಾಯಿಗಳಿಗೆ ಮತ್ತು ಶಾಲೆಗೆ, ಗುರುಗಳಿಗೆ ಕೀರ್ತಿ ತರಬೇಕೆಂದು ತಿಳಿಸಿದರು.

ಸರ್ಕಾರ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದ್ದು, ಸಮಾಜದಲ್ಲಿ ಯಾವ ಮಗುವೂ ಶಿಕ್ಷಣದಿಂದ ವಂಚಿತ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಪ್ರತಿಯೊಬ್ಬರೂ ತೆಗೆದುಕೊಳ್ಳಬೇಕೆಂದು ಸಚಿವ ಮಲ್ಲಿಕಾರ್ಜುನ್ ಹೇಳಿದರು.

ಶಾಲಾ ಕಟ್ಟಡವನ್ನು ಸುಂದರವಾಗಿ ಕಟ್ಟಿದ್ದು, ಶಾಲೆಗೆ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸಲು ಪ್ರಯತ್ನಿಸುತ್ತೇನೆ ಮತ್ತು ಸಿಬ್ಬಂದಿಗಳ ನೇಮಕವನ್ನೂ ಮಾಡುತ್ತೇವೆ.

ಈ ಹಿಂದೆ ಬಿ.ಹೆಚ್. ಗಿರಿಗೌಡ್ರು ಇದ್ದಾಗ ಈ ಊರಿಗೆ ತುಂಬಾ ಸಲ ನಮ್ಮನ್ನು ಕರೆತಂದಿದ್ದರು. ಅವರು ಊರಿನ ಅಭಿವೃದ್ಧಿ ಬಗ್ಗೆ ತುಂಬಾ ಆಸಕ್ತಿ ಹೊಂದಿದ್ದರೆಂದು ಸಚಿವ ಮಲ್ಲಿಕಾರ್ಜುನ್ ಸ್ಮರಿಸಿದರು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷ ಹನಗವಾಡಿ ಕುಮಾರ್, ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಮೀನಾಕ್ಷಿ ರವಿಕುಮಾರ್, ಉಪಾಧ್ಯಕ್ಷ ಕೆ.ಎಸ್. ಬಸವರಾಜ್, ಡಿಡಿಪಿಐ ಕೊಟ್ರೇಶ್, ಶಾಲೆಯ ಪ್ರಿನ್ಸಿಪಾಲ್ ಶಶಿಧರ್, ಉಪ ಪ್ರಾಚಾರ್ಯ ವಿ.ಬಿ. ಕೊಟ್ರೇಶ್, ಶಿಕ್ಷಕ ರಿಯಾಜ್ ಅಹ್ಮದ್, ಎಸ್‌ಡಿಎಂಸಿ ಉಪಾಧ್ಯಕ್ಷೆ ಹೇಮಾಕ್ಷಿ ಸಿದ್ದಪ್ಪ, ಗ್ರಾಮದ ಶಿವಣ್ಣ ಬಣಕಾರ್, ಅಂಗಡಿ ಜಯ್ಯಪ್ಪ, ಪಿಡಬ್ಲ್ಯುಡಿ ಇಇ ನರೇಂದ್ರಬಾಬು, ಎಇಇ ಶಿವಮೂರ್ತಿ, ಗುತ್ತಿಗೆದಾರ ಎಂ. ಸುನೀಲ್ ಮತ್ತು ಇತರರು ಭಾಗವಹಿಸಿದ್ದರು.

2 ಕೋಟಿ ರೂ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಈ ಶಾಲಾ ಕಟ್ಟಡ ಕಾಮಗಾರಿಗೆ ಎಸ್. ರಾಮಪ್ಪ ಶಾಸಕರಾಗಿದ್ದಾಗ ಗುದ್ದಲಿ ಪೂಜೆ ನೆರವೇರಿಸಿದ್ದರು. ಈ ನೂತನ ಕಟ್ಟಡದಲ್ಲಿ 13 ಕೊಠಡಿಗಳಿವೆ.

# ಪಲ್ಸ್ ಪೋಲಿಯೋ ಕಾರ್ಯಕ್ರಮ ನಿಲ್ಲಿಸಿ, 'ಕ್ಷಯ'ದತ್ತ ಲಕ್ಷ್ಯ ಕೊಡಿ



ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ

ರಾಣೇಬೆನ್ನೂರು, ಮಾ. 4- ದಶಕಗಳಿಂದ ಕೇಂದ್ರದ ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿಯಲ್ಲಿ ಮುನ್ನಡೆಯುತ್ತಲೇ ಇರುವ ಓಬಿರಾಯನ ಕಾಲದ, ಕಾರ್ಯಕ್ರಮ ವಾಗಿದೆ. ಪೋಲಿಯೋ ಸಂಪೂರ್ಣ ನಿರ್ಮೂಲನೆ ಆಗಿ ದಶಕಗಳೇ ಉರುಳಿವೆ. ಆದರೂ ಈ ಕಾರ್ಯಕ್ರಮವನ್ನು ಸರ್ಕಾರ ಮುಂದುವರೆಸುತ್ತಾ ಸಾವಿರಾರು ಕೋಟಿ ಲೂಟಿ ಹೊಡೆಯುತ್ತಿದೆ ಎಂದು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ಆರೋಪಿಸಿದ್ದಾರೆ.

ಮುಷ್ಟೂರು ಗ್ರಾಮದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಒಂದು ಜಾಗತಿಕ ಮಟ್ಟದ ಕಾಯಿಲೆಯ ನಿರ್ಮೂಲನೆಗೆ ಇಷ್ಟು ವರ್ಷ ತೆಗೆದುಕೊಂಡಿರುವುದು ರಾಷ್ಟ್ರೀಯ ಆರೋಗ್ಯ ಮಿಷನ್ನಿನ ಒಂದು ಅವೈಜ್ಞಾನಿಕ ನೀತಿಯಾಗಿದೆ. ಕಾಯಿಲೆ ಎಲ್ಲಿರುವುದು, ಕಾಯಿಲೆಯಿಂದ ಬಳಲುತ್ತಿರುವವರ ಸಂಖ್ಯೆ ಎಷ್ಟು? ಇದುವರೆಗೂ ಈ ಕಾರ್ಯಕ್ರಮಕ್ಕೆ ಮಾಡಿದ ಅನುದಾನ ಎಷ್ಟು? ಎಂಬುದನ್ನು ಜಿಲ್ಲಾ ಮಟ್ಟದಿಂದಲೇ ಸಾರ್ವಜನಿಕರಿಗೆ ಮಾಹಿತಿ ಒದಗಿಸಬೇಕೆಂದು ಒತ್ತಾಯಿಸಿದರು.

ವೈದ್ಯರು, ಆರೋಗ್ಯ ಇಲಾಖೆ ಅಧಿಕಾರಿಗಳು, ರಾಜಕಾರಣಿಗಳು 'ಲೂಟಿ' ಹೊಡೆಯಲೆಂದೇ, ಕಾಯಿಲೆ ಸಂಪೂರ್ಣ ನಿರ್ಮೂಲನೆ ಆಗಿದ್ದರೂ ಕೂಡಾ ಪಲ್ಸ್ ಪೋಲಿಯೋ ಹೆಸರಿನ ರಾಷ್ಟ್ರೀಯ ಆರೋಗ್ಯ ಮಿಷನ್ನಿನ ದಂಧೆ ಇದಾಗಿದೆ. ಕೂಡಲೇ ಈ ಕಾರ್ಯಕ್ರಮವನ್ನು ಸಂಪೂರ್ಣ ನಿಲ್ಲಿಸಿ ಜೀವನ್ಮರಣದ ಮಾರಣಾಂತಿಕ ಕಾಯಿಲೆ 'ಕ್ಷಯ' ರೋಗದತ್ತ ಸರ್ಕಾರ ಲಕ್ಷ್ಯ ಕೊಟ್ಟು ಕ್ಷಯ ರೋಗ ಸಂಪೂರ್ಣ ನಿರ್ಮೂಲನೆಗೆ ಒತ್ತು ನೀಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಗ್ರಾಮೀಣ ಭಾಗದಲ್ಲಿ ಅತಿ ಹೆಚ್ಚು ಜನರು ಕ್ಷಯಕ್ಕೆ ತುತ್ತಾಗುತ್ತಿದ್ದಾರೆ. ಈ ಕಾಯಿಲೆ ಪತ್ತೆ ಹಚ್ಚಲಿಕ್ಕೆಂದೇ ಇರುವ ಸಿ.ಬಿ. ನೆಟ್ ಮಿಷನ್, ಕಫ ಪರೀಕ್ಷೆ ಮಿಷನ್ ಎಲ್ಲಾ ತಾಲ್ಲೂಕು ಕೇಂದ್ರ ಮತ್ತು ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿದ್ದರೆ ಮಾತ್ರ ಈ ಕಾಯಿಲೆಯನ್ನು ಬೇಗ ಪತ್ತೆ ಹಚ್ಚಬಹುದು. ಕಳೆದ 2 ವರ್ಷಗಳ ಹಿಂದಿನ ಕೊರೊನಾ ಪರಿಸ್ಥಿತಿಯನ್ನು ಈಗ ಎಲ್ಲರೂ ಮೈ ಮರೆತಂತೆ ಕಾಣುತ್ತಿದೆ. ಆರೋಗ್ಯ ಇಲಾಖೆಯ ನಿರ್ಲಕ್ಷ್ಯತನವೆ ಲಕ್ಷಾಂತರ ಜನರ ಸಾವಿಗೆ ಕಾರಣವಾದದ್ದನ್ನು ಸ್ಮರಿಸಿ ಮುನ್ನೆಚ್ಚರಿಕೆಯಿಂದ ಇರಬೇಕಾಗಿದೆ ಎಂದರು.

ವೇದಿಕೆಯ ಮೇಲೆ ಗ್ರಾಮ ಪಂಚಾಯ್ತಿ ಉಪಾಧ್ಯಕ್ಷೆ ಚಂದ್ರಮ್ಮ ಆರ್. ಹಿರೇಮಠದ, ಎಸ್.ಡಿ.ಎಂ.ಸಿ ಅಧ್ಯಕ್ಷ ಯಲ್ಲಪ್ಪ ಓಲೇಕಾರ, ಗ್ರಾ.ಪಂ. ಸದಸ್ಯರಾದ ಬಸಮ್ಮ ತಳವಾರ, ರಾಜು ಪಾಟೀಲ, ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಹರಿಹರಗೌಡ ಪಾಟೀಲ, ಆರೋಗ್ಯ ಇಲಾಖೆಯ ಆರೋಗ್ಯ ನಿರೀಕ್ಷಣಾಧಿಕಾರಿ ಎನ್. ಕುಮಾರ, ಸಿ.ಎಚ್.ಸಿ. ಟಿ. ಅಶ್ವಿನಿ ಮತ್ತು ಇತರರು ಉಪಸ್ಥಿತರಿದ್ದರು.

## ವಾರಣಾಸಿ : ಶಿವಲಿಂಗ ಪೂಜೆಯ ಅರ್ಜಿ ಎಂಟು ವಾರಗಳಲ್ಲಿ ಇತ್ಯರ್ಥಕ್ಕೆ ಸೂಚನೆ

ಪ್ರಯಾಗ್‌ರಾಜ್, ಮಾ. 4 – ಜ್ಞಾನವಾಪಿ ಸಂಕೀರ್ಣದಲ್ಲಿರುವ 'ಶಿವಲಿಂಗ' ಪೂಜಿಸಲು ಅನಿರ್ಬಂಧಿತ ಹಕ್ಕಿರಬೇಕು ಎಂದು ಕೋರಿ ದಾಖಲಾಗಿರುವ ಅರ್ಜಿಯನ್ನು ಎಂಟು ವಾರಗಳಲ್ಲಿ ಇತ್ಯರ್ಥಪಡಿಸುವಂತೆ ವಾರಣಾಸಿ ನ್ಯಾಯಾಲಯಕ್ಕೆ ಅಲಹಾಬಾದ್ ಹೈಕೋರ್ಟ್ ನಿರ್ದೇಶನ ನೀಡಿದೆ.

ಮೇ 16, 2022ರಂದು ನ್ಯಾಯಾಲಯದ ಆದೇಶದ ಮೇಲೆ ವಾರಣಾಸಿಯ ಕಾಶಿ ವಿಶ್ವನಾಥ ದೇವಾಲಯದ ಪಕ್ಕದಲ್ಲಿರುವ ಜ್ಞಾನವಾಪಿ ಸಂಕೀರ್ಣದ ಸಮೀಕ್ಷೆ ನಡೆಸಲಾಗಿತ್ತು. ಆಗ ವಜುಖಾನಾದಲ್ಲಿ ಶಿವಲಿಂಗ ಪತ್ತೆಯಾಗಿದೆ ಎಂದು ಹಿಂದೂ ಕಕ್ಷಿದಾರರು ಹೇಳಿದ್ದರು. ಇದು ಕಾರಂಜಿ ಎಂದು ಮುಸ್ಲಿಂ ಕಕ್ಷಿದಾರರು ವಾದಿಸಿದ್ದರು.

ವಾರಣಾಸಿ ಸಿವಿಲ್ ನ್ಯಾಯಾಧೀಶ (ಹಿರಿಯ ವಿಭಾಗ) ಈ ಬಗ್ಗೆ ವಿಚಾರಣೆ ನಡೆಸುತ್ತಿದೆ. ವಿವೇಕ್ ಸೋನಿ ಹಾಗೂ ಇನ್ನೊಬ್ಬರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿ, ತ್ವರಿತವಾಗಿ ವಿಷಯ ಇತ್ಯರ್ಥಪಡಿಸುವಂತೆ ನಿರ್ದೇಶನ ನೀಡಬೇಕೆಂದು ಕೋರಿದ್ದರು. ಶಿವಲಿಂಗದ ಪೂಜೆಯಲ್ಲಿ ಅಂಜುಮನ್ ಇಂತೆಜಾಮಿಯಾ ಮಸೀದಿ ಯಾವುದೇ ರೀತಿಯಲ್ಲೂ ಮಧ್ಯ ಪ್ರವೇಶಿಸದಂತೆ ಶಾಶ್ವತ ತಡೆಯಾಜ್ಞೆ ನೀಡಬೇಕು ಎಂದೂ ಅರ್ಜಿದಾರರು ಕೋರಿದ್ದರು.

## ನಗರದ ಬಿಇಎ ಶಿಕ್ಷಣ ವಿದ್ಯಾಲಯದಲ್ಲಿ ಇಂದು ವಿದ್ಯಾರ್ಥಿ ಸಂಘದ ಉದ್ಘಾಟನೆ

ಬಿ.ಇ.ಎ. ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭ ಇಂದು ಬೆಳಿಗ್ಗೆ 11 ಗಂಟೆಗೆ ಮಹಾವಿದ್ಯಾಲಯದ ಸಭಾಂಗಣದಲ್ಲಿ ನಡೆಯಲಿದೆ. ದಾವಣಗೆರೆ ವಿವಿ ಪ್ರಭಾರಿ ಕುಲಸಚಿವ (ಆಡಳಿತ) ಪ್ರೊ. ವೆಂಕಟರಾವ್ ಎಂ. ಪಲಾಟೆ ಕಾರ್ಯಕ್ರಮ ಉದ್ಘಾಟಿಸುವರು. ಪ್ರಾಚಾರ್ಯರಾದ ಡಾ. ಎ.ಜೆ. ನೀತಾ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಆತಿಥಿಗಳಾಗಿ ಮಹಾವಿದ್ಯಾಲಯದ ಆಡಳಿತಾಧಿಕಾರಿ ಪ್ರೊ. ವೈ. ವೃಷಭೇಂದ್ರಪ್ಪ, ಹಿರಿಯ ಉಪನ್ಯಾಸಕಿ ಆರ್.ಎಲ್. ಶೈಲಜಾ, ಐಕ್ಯೂಎಸಿ ಘಟಕದ ಸಂಯೋಜಕ ಕೆ. ಮುರುಗೇಶಿ ಭಾಗವಹಿಸಲಿದ್ದಾರೆ.

## 9ರಂದು ಶಿಬಾರದಲ್ಲಿ ಶ್ರೀಗಳ ರಥೋತ್ಸವ

ಚಿತ್ರದುರ್ಗ, ಮಾ.4- ಸಮೀಪದ ಶಿಬಾರದಲ್ಲಿ ಇದೇ 9ರಂದು ಸಂಜೆ 5.30ಕ್ಕೆ ಶ್ರೀ ಜಗದ್ಗುರು ಗುರುಪಾದ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಹಾಗು 'ಶ್ರೀ ಮೈಲಾರ ಲಿಂಗೇಶ್ವರ ಸ್ವಾಮಿಗಳ ಸ್ಮರಣಾರ್ಥವಾಗಿ ರಥೋತ್ಸವ ಜರುಗಲಿದೆ. ಇದೇ ದಿನಾಂಕ 10 ರಿಂದ 23 ರವರೆಗೆ ದನಗಳ ಜಾತ್ರೆ ನಡೆಯಲಿದೆ.

## 11ರಂದು ಮಹಿಳಾ ದಿನಾಚರಣೆ : ಸ್ಪರ್ಧೆ

ದಾವಣಗೆರೆ, ಮಾ.4- ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ನಮ್ಮ ಕದಳಿ ಮಹಿಳಾ ವೇದಿಕೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಇದೇ ದಿನಾಂಕ 11ರ ಸೋಮವಾರ ವಿವಿಧ ಸಂಘ, ಸಂಸ್ಥೆಗಳು ಮತ್ತು ಸಮಾಜಗಳ ಸದಸ್ಯರಿಗೆ ಹಾಗೂ ಕದಳಿ ಸದಸ್ಯರಿಗೆ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸೌಮ್ಯ ಸತೀಶ್ (9449422357), ನಂದಿನಿ ಗಂಗಾಧರ್ (7899542949) ಅವರುಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಕದಳಿ ವೇದಿಕೆಯ ಕಾರ್ಯದರ್ಶಿ ಚಂದ್ರಿಕಾ ಮಂಜುನಾಥ್ ತಿಳಿಸಿದ್ದಾರೆ.

## ಹೈನುಗಾರಿಕೆ ತರಬೇತಿ

ದಾವಣಗೆರೆ, ಮಾ. 4 - ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಆಧುನಿಕ ಹೈನುಗಾರಿಕೆ ತರಬೇತಿಯು ನಾಡಿದ್ದು ದಿನಾಂಕ 6 ಮತ್ತು 7 ರಂದು ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.



ಹಂದರಕಂಬ ಪೂಜೆ

## ಮಲೇಬೆನ್ನೂರಿನಲ್ಲಿ ಅಮ್ಮನ ಹಬ್ಬಕ್ಕೆ ಸಿದ್ಧತೆ

ಮಲೇಬೆನ್ನೂರು, ಮಾ.4- ಪಟ್ಟಣದ ಗ್ರಾಮ ದೇವತೆಗಳಾದ ಶ್ರೀ ಏಕನಾಥೇಶ್ವರಿ, ಶ್ರೀ ಕೋಡಿ ಮಾರೇಶ್ವರಿ, ಶ್ರೀ ದುರ್ಗಮ್ಮ ಜಾತ್ರೋತ್ಸವಕ್ಕೆ ಭಾನುವಾರ ಹರಳಹಳ್ಳಿ ರಸ್ತೆಯ ಶ್ರೀ ಏಕನಾಥೇಶ್ವರಿ ದೇವಸ್ಥಾನ ಬಳಿ ಹಂದರಕಂಬ ಪೂಜೆ ನೆರವೇರಿಸುವುದರೊಂದಿಗೆ ಜಾತ್ರೆಗೆ ಚಾಲನೆ ನೀಡಲಾಯಿತು.

ಇದೇ ದಿನಾಂಕ 19 ರಿಂದ 22 ರವರೆಗೆ 4 ದಿನಗಳ ಕಾಲ ಅಮ್ಮನ ಹಬ್ಬ ಅದ್ಧೂರಿಯಾಗಿ ನಡೆಯಲಿದೆ ಎಂದು ಕೆ.ಜಿ.ಪರಮೇಶ್ವರಪ್ಪ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿ ಅರ್ಚಕ ಪ್ರಕಾಶ್, ಓ.ಜಿ. ಶಿವಕುಮಾರ್, ಓ.ಜಿ. ರೇವಣಸಿದ್ದಪ್ಪ, ಸಿರಿಗೆರೆ ರಂಗನಾಥ್, ಉಡೇದರ ರೇವಣಸಿದ್ದಪ್ಪ, ಎ.ಕೆ. ನರಸಿಂಹಪ್ಪ, ಓ.ಜಿ. ವಿಜಯ್, ಬಿ. ಮಂಜುನಾಥ್, ಹೋಳಿಯಪ್ಪ ಈ ವೇಳೆ ಹಾಜರಿದ್ದರು.

## ನಗರದಲ್ಲಿ ಇಂದು ಪಾಲಿಕೆಗೆ ಮುತ್ತಿಗೆ

ಆಂಗ್ಲಭಾಷಾ ನಾಮಫಲಕ ತೆರವುಗೊಳಿಸಲು ವಿಫಲವಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ ನಾರಾಯಣ ಗೌಡ ಬಣ) ವತಿಯಿಂದ ಇಂದು ಬೆಳಿಗ್ಗೆ 11.30 ಕ್ಕೆ ಮಹಾನಗರ ಪಾಲಿಕೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸುವುದಾಗಿ ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ತಿಳಿಸಿದ್ದಾರೆ.

# ಈಶ್ವರ ದೇವಸ್ಥಾನದ ಕಳಸಾರೋಹಣ



ಯಕ್ಕನಹಳ್ಳಿ

ಹೊನ್ನಾಳಿ, ಮಾ. 4- ತಾಲ್ಲೂಕಿನ ಯಕ್ಕನಹಳ್ಳಿ ಗ್ರಾಮದಲ್ಲಿ ಇದೇ ದಿನಾಂಕ 7ರಂದು ಬೆಳಿಗ್ಗೆ 11.30ಕ್ಕೆ ಈಶ್ವರ ದೇವಸ್ಥಾನದ ಕಳಸಾರೋಹಣ, ಕಾಳಿಕಾಂಬ ದೇವಿಯ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ನಡೆಯಲಿದೆ ಎಂದು ಬಸವೇಶ್ವರ ಹಾಗೂ ಈಶ್ವರ ದೇವಸ್ಥಾನ ಸೇವಾ ಟ್ರಸ್ಟಿನ ಅಧ್ಯಕ್ಷ ಎಸ್.ಎಂ. ನಾಗರಾಜಪ್ಪ ತಿಳಿಸಿದರು.

ಹೊನ್ನಾಳಿಯ ಪ್ರವಾಸಿ ಮಂದಿರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಸಿರಿಗೆರೆಯ ಡಾ. ಶಿವಮೂರ್ತಿ ಶಿವಾಚಾರ್ಯ ಶ್ರೀಗಳು ಸಾನ್ನಿಧ್ಯ ವಹಿಸಲಿದ್ದು, ಸಂಸದ ಜಿ.ಎಂ. ಸಿದ್ದೇಶ್ವರ ಸಮಾರಂಭವನ್ನು ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಶಾಸಕ ಡಿ.ಜಿ. ಶಾಂತನಗೌಡ, ವಿಧಾನ ಪರಿಷತ್, ವಿಪಕ್ಷ ಮುಖ್ಯ ಸಚೇತಕ ಎನ್. ರವಿಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕರಾದ ಬಿ.ಪಿ. ಹರೀಶ್, ಬಸವರಾಜ್ ಶಿವಗಂಗಾ, ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ, ಸಾಧು ವೀರಶೈವ ಸಮಾಜದ ರಾಜ್ಯಾಧ್ಯಕ್ಷ ಎಚ್.ಆರ್. ಬಸವರಾಜಪ್ಪ, ತಾಲ್ಲೂಕು ಅಧ್ಯಕ್ಷ ಎಚ್.ಎ. ಗದ್ದಿಗೇಶ್, ಜಿ.ಪಂ. ಮಾಜಿ ಅಧ್ಯಕ್ಷೆ ದೀಪಾ ಜಗದೀಶ್ ಭಾಗವಹಿಸಲಿದ್ದಾರೆ ಎಂದರು.

ಅಂದು ಬೆಳಿಗ್ಗೆ ಶ್ರೀಗಳನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸುವ ಜತೆಗೆ ಬಸವೇಶ್ವರ ದೇವಸ್ಥಾನದಿಂದ ಈಶ್ವರ ದೇವಸ್ಥಾನದವರೆಗೆ ಬೃಹತ್ ಮೆರವಣಿಗೆ ಹಮ್ಮಿಕೊಂಡಿದ್ದು, ರಾಜ್ಯದಲ್ಲಿನ ವಿವಿಧ ಕಲಾತಂಡಗಳು ಭಾಗವಹಿಸಲಿವೆ ಎಂದು ಮಾಹಿತಿ ನೀಡಿದರು.

ಧರ್ಮಸಭೆ ಕಾರ್ಯಕ್ರಮದಲ್ಲಿ ಯಕ್ಕನಹಳ್ಳಿ ಗ್ರಾಮದ ವೀರಗಾಸೆ ಕಲಾವಿದ ಜಿ.ವಿ. ತಿಪ್ಪೇಶ್, ನಿವೃತ್ತ ಯೋಧ ಯಲವಟ್ಟಿ ಶಿವಕುಮಾರ್, ದಾವಣಗೆರೆ ವಿವಿಯ ಬಿಸಿಎ ಪದವಿಯಲ್ಲಿ ಪ್ರಥಮ ಸ್ಥಾನ ಗಳಿಸಿದ ವಿದ್ಯಾರ್ಥಿನಿ ಸುಮತಿ ಮೈದೂರು ಮಂಜುನಾಥ್ ಸೇರಿದಂತೆ ಹಲವು ಸಾಧಕರಿಗೆ ಸನ್ಮಾನಿಸಲಾಗುವುದು ಎಂದರು.

**ನಾಟಕ ಪ್ರದರ್ಶನ:** ಅಂದು ಸಂಜೆ 7.30ಕ್ಕೆ ವಿಶ್ವಬಂಧು ಮರುಳಸಿದ್ಧ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಹಿರಿಯ ಮುಖಂಡರಾದ ಸಿ.ಬಿ. ಕುಬೇರಪ್ಪ, ಸಿ.ಎನ್. ಹಾಲೇಶಪ್ಪ, ಟಿ.ಎಸ್. ಜಗದೀಶ್, ಪಿ. ರಂಗಪ್ಪ, ಬಿ.ಎಂ. ಕರಿಬಸಪ್ಪ, ಎಸ್.ಬಿ. ಕೊಟ್ರೇಶ್, ಗ್ರಾಪಂ. ಮಾಜಿ ಅಧ್ಯಕ್ಷ ದಯಾನಂದ್, ರಾಮಾಂಜನೇಯ, ಸಿ. ಬಸವರಾಜ್, ಯು.ಬಿ. ಜಯಪ್ಪ ಉದ್ದಜ್ಜರ ಉಪಸ್ಥಿತರಿದ್ದರು.


॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ಜನನ : 05.03.1953

ನಿಧನ : 02.03.2024

**ಶಿಖರಪ್ಪ ಶ್ರೀ ಪಂಪಾಪತಿಯವರು**

ದಾವಣಗೆರೆ ಜಿ॥ ತಾ॥ ಎಲೆಬೇತೂರು ಗ್ರಾಮದ ವಾಸಿ
ಶ್ರೀಮತಿ ಶ್ರೀ ಶಿಖರಪ್ಪ ಸಿದ್ದಪ್ಪ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 02.03.2024ನೇ ಶನಿವಾರ ರಾತ್ರಿ 11.15ಕ್ಕೆ ನನ್ನ ತಮ್ಮನಾದ

**ಶಿಖರಪ್ಪ ಶ್ರೀ ಪಂಪಾಪತಿಯವರು**

ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ 06.03.2024ನೇ ಬುಧವಾರ ಬೆಳಿಗ್ಗೆ 10.30ಕ್ಕೆ ಶ್ರೀ ಶರಣ ಬಸವೇಶ್ವರ ಸಮುದಾಯ ಭವನ, ಬಿ. ಕಲಪನಹಳ್ಳಿಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**: ದುಃಖತಪ್ತ ಕುಟುಂಬ ವರ್ಗ :**

**ಶಿಖರಪ್ಪ ಶ್ರೀ ಮರುಳಸಿದ್ದಪ್ಪ ಮತ್ತು ಮಕ್ಕಳು**
**ಶ್ರೀಮತಿ ಮನೋಹರಮ್ಮ ಮತ್ತು ಮಕ್ಕಳು ಶ್ರೀಮತಿ ಸೌಭಾಗ್ಯಮ್ಮ ಮತ್ತು ಮಕ್ಕಳು ಶಿಖರಪ್ಪ ವಂಶಸ್ಥರು, ಎಲೆಬೇತೂರು ಹಾಗೂ ಬಂಧು-ಮಿತ್ರರು.**
**ಮೊ : 99723 16308, 99161 65788**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



**ಶ್ರೀಮತಿ ವಿಜಯಲಕ್ಷ್ಮಿ ನಿಧನ**



ದಾವಣಗೆರೆ ಪಿ.ಜೆ. ಬಡಾವಣೆ ರೈತರ ಬೀದಿ ವಾಸಿ ಕುರುಹೀನ ಶೆಟ್ಟಿ ಸಮಾಜದ ಉಪಾಧ್ಯಕ್ಷರು, ಗಣ್ಯವರ್ತಕರಾದ ಗಂಗಾವತಿ ತಿಮ್ಮಣ್ಣ ಇವರ ಧರ್ಮಪತ್ನಿ

**ಶ್ರೀಮತಿ ವಿಜಯಲಕ್ಷ್ಮಿ**

ಇವರು, ದಿನಾಂಕ : 04.03.2024ರ ಸೋಮವಾರ ಬೆಳಗಿನ ಜಾವ 5.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಮೃತರಿಗೆ 58 ವರ್ಷ ವಯಸ್ಸಾಗಿತ್ತು, ಪತಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 04.03.2024ರ ಸೋಮವಾರ ಸಂಜೆ 6 ಗಂಟೆಗೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ : ಗಂಗಾವತಿ ವಂಶಸ್ಥರು, ದಾವಣಗೆರೆ.
**ಮೊ : 97405 69252**



**ಹಾವನೂರು ಕಾಳಪ್ಪ ನಿಧನ**



ದಾವಣಗೆರೆ ಡಿ.ಸಿ.ಎಂ. ಲೇಔಟ್, 1ನೇ ಮೇನ್, 2ನೇ ಕ್ರಾಸ್, ಯಮುನಾ ಬಾಯಿ ಚೌಲ್ಪಿ ಪಕ್ಕದ ವಾಸಿ ಎ.ಪಿ.ಎಂ.ಸಿ. 'H' ಬ್ಲಾಕ್, ಎಸ್.ವಿ.ಪಿ. ಫ್ರೂಟ್ಸ್ ಮಾಲೀಕರಾದ

**ಹಾವನೂರು ಕಾಳಪ್ಪ**

ಇವರು ದಿನಾಂಕ 04.03.2024ರ ಸೋಮವಾರ ಸಂಜೆ 4.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 64 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 05.03.2024ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ :
**ಮೊ : 94484 06675, 99723 45623**


**ಮುತ್ತುಗದೂರು ಡಾ. ಕೆ. ನಟರಾಜ್ ನಿಧನ**



ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕು ಮುತ್ತುಗದೂರು ದಿ. ಸಿದ್ದಗಂಗಮ್ಮ ಮತ್ತು ದಿ. ಎಂ.ಪಿ. ಕಲ್ಲಪ್ಪನವರ ಹಿರಿಯ ಪುತ್ರ ಡಾ. ಕೆ. ನಟರಾಜ, ನಿವೃತ್ತ ಮೌಲ್ಯಮಾಪನದ ರಿಜಿಸ್ಟ್ರಾರ್, ನಿವೃತ್ತ ಸಸ್ಯ ಶಾಸ್ತ್ರದ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಅವರು ದಿನಾಂಕ 4.3.2024ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ನಿಧನರಾಗಿರುತ್ತಾರೆ. ಪತ್ನಿ ಪಾರ್ವತಿ ನಟರಾಜ ಮತ್ತು ಮಕ್ಕಳು ರೇಖಾ ಸತೀಶ್ ಪಾಟೀಲ್, ರಶ್ಮಿ ಪ್ರಸಾದ್ ಗೌಡ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.3.2024ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮವಾದ ಮುತ್ತುಗದೂರಿನಲ್ಲಿ ನೆರವೇರಲಿದೆ.

## ಪಲ್ಸ್ ಪೋಲಿಯೋ ಅಭಿಯಾನ



ಹೊಳೆಸಿರಿಗೆರೆ

ಮಲೇಬೆನ್ನೂರು, ಮಾ. 4- ಹೊಳೆಸಿರಿಗೆರೆ ಗ್ರಾಮದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಚೇತನ್ ಮತ್ತು ಕೃಷಿ ಪತ್ತಿನ ಸಹಕಾರ ಸಂಘದ ಲೆಕ್ಕಾಧಿಕಾರಿ ಮಹಾಂತೇಶ್ ಕುಂದೂರ್ ಅವರು ಮಕ್ಕಳಿಗೆ ಪಲ್ಸ್ ಪೋಲಿಯೋ ಹನಿ ಹಾಕುವ ಮೂಲಕ ಉದ್ಘಾಟಿಸಿದರು.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**☞ ನನ್ನ ಭಾರತವೇ ನನ್ನ ಪರಿವಾರ : ಮೋದಿ**
ನವದೆಹಲಿ : ದೇಶದ 140 ಕೋಟಿ ಭಾರತೀಯರೇ ನನ್ನ ಪರಿವಾರ. ದೇಶದ ಕೋಟಿ ಕೋಟಿ ಜನರು ನನ್ನನ್ನು ಸ್ವೀಕರಿಸಿದ್ದಾರೆ. ದೇಶದ ಯುವಕರು, ದೇಶದ ಹೆಣ್ಣು ಮಕ್ಕಳು, ತಾಯಂದಿರು, ಸಹೋದರಿಯರು ನನ್ನ ಪರಿವಾರ. ದೇಶದ ಕೋಟಿ ಕೋಟಿ ಮಕ್ಕಳು, ಹಿರಿಯರು ಮೋದಿಯ ಪರಿವಾರ. ಯಾರಿಗೆ ಯಾರೂ ಇಲ್ಲವೋ ಅವರು ನನ್ನ ಪರಿವಾರಕ್ಕೆ ಸೇರಿದವರು. ನನ್ನ ಭಾರತವೇ ನನ್ನ ಪರಿವಾರ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಮೋದಿ ಅವರಿಗೆ 'ಕುಟುಂಬವಿಲ್ಲ' ಎಂದು ಆರ್.ಜೆ.ಡಿ. ಅಧ್ಯಕ್ಷ ಲಾಲು ಪ್ರಸಾದ್ ಯಾದವ್ ವಾಗ್ದಾಳಿ ನಡೆಸಿದ್ದಕ್ಕೆ ಪ್ರಧಾನಿ ಮೋದಿ ಈ ತಿರುಗೇಟು ನೀಡಿದ್ದಾರೆ.

**☞ 'ಮೋದಿ ಪರಿವಾರ'ಕ್ಕೆ ಕಾಂಗ್ರೆಸ್ ಟೀಕೆ**
ನವದೆಹಲಿ : 'ಮೋದಿ ಕಾ ಪರಿವಾರ್' ಅಭಿಯಾನ ನಡೆಸುತ್ತಿರುವುದಕ್ಕೆ ಲೇವಡಿ ಮಾಡಿರುವ ಕಾಂಗ್ರೆಸ್, ನಿಜವಾದ ವಿಷಯಗಳಿಂದ ಜನರ ದಾರಿ ತಪ್ಪಿಸಲು ಈ ಅಭಿಯಾನ ನಡೆಸಲಾಗುತ್ತಿದೆ ಎಂದು ಆರೋಪಿಸಿದೆ.

**☞ ಎಂಟನೇ ಸಮನ್ಸ್‌ಗೂ ಕೇಜ್ರಿವಾಲ್ ಗೈರು**
ನವದೆಹಲಿ : ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಕಳಿಸಿದ ಎಂಟನೇ ಸಮನ್ಸ್‌ಗೂ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಗೈರಾಗಿದ್ದಾರೆ. ಮಾರ್ಚ್ 12ರಂದು ವರ್ಚುಯಲ್ ಮೂಲಕ ಹಾಜರಾಗಲು ಸಿದ್ಧವಿರುವುದಾಗಿ ಅವರು ಹೇಳಿದ್ದಾರೆ ಎಂದು ಸರ್ಕಾರಿ ಮೂಲಗಳು ತಿಳಿಸಿವೆ.

**☞ ತೆಲಂಗಾಣದಲ್ಲಿ 56 ಸಾವಿರ ಕೋಟಿ ರೂ. ಯೋಜನೆಗಳಿಗೆ ಶಿಲಾನ್ಯಾಸ, ಉದ್ಘಾಟನೆ**
ಆದಿಲಾಬಾದ್ : ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ತೆಲಂಗಾಣದಲ್ಲಿ 56 ಸಾವಿರ ಕೋಟಿ ರೂ.ಗಳ ಯೋಜನೆಗಳಿಗೆ ಶಿಲಾನ್ಯಾಸ ಹಾಗೂ ಉದ್ಘಾಟನೆ ನೆರವೇರಿಸಿದ್ದಾರೆ. ತೆಲಂಗಾಣದ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರು ಪ್ರಧಾನಿಯನ್ನು ಸ್ವಾಗತಿಸಿ ಅವರ ಜೊತೆ ವೇದಿಕೆ ಹಂಚಿಕೊಂಡರು.

**☞ ಜೂನ್ 15ರ ಒಳಗೆ ಎ.ಎ.ಪಿ. ಕಚೇರಿಗಳ ತೆರವಿಗೆ ಸುಪ್ರೀಂ ಕೋರ್ಟ್ ಆದೇಶ**
ನವದೆಹಲಿ : ಆಮ್ ಆದ್ಮಿ ಪಾರ್ಟಿಯು ಜೂನ್ 15ರ ಒಳಗೆ ದೆಹಲಿಯ ರೌಸ್ ಅವಿನ್ಯೂದಲ್ಲಿರುವ ತನ್ನ ಕಚೇರಿಗಳನ್ನು ಖಾಲಿ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಗಡುವು ನೀಡಿದೆ. ದೆಹಲಿ ಹೈಕೋರ್ಟ್ ನ್ಯಾಯಿಕ ಸೌಲಭ್ಯಗಳ ವಿಸ್ತರಣೆಗಾಗಿ ಈ ಜಾಗವನ್ನು ಕಾಯ್ದಿರಿಸಲಾಗಿತ್ತು. ಈ ಜಾಗದಲ್ಲಿ ಮುಂದುವರೆಯಲು ಪಕ್ಷಕ್ಕೆ ಹಕ್ಕಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

**☞ ಆದಿತ್ಯ ಎಲ್1 ಉಡಾವಣೆ ದಿನದಂದು ಕ್ಯಾನ್ಸರ್ ಪತ್ತೆಯಾಗಿತ್ತು : ಸೋಮನಾಥ್**
ನವದೆಹಲಿ : ಆದಿತ್ಯ ಎಲ್ 1 ಉಡಾವಣೆ ದಿನದಂದು ಕ್ಯಾನ್ಸರ್ ಸೋಂಕಿರುವುದು ಪತ್ತೆಯಾಗಿತ್ತು. ಈಗ ಗುಣಮುಖವಾಗಿರುವುದಾಗಿ ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದ್ದಾರೆ.

**☞ ತೃಣಮೂಲ ಶಾಸಕ ತಪಸ್ ರಾಯ್ ರಾಜೀನಾಮೆ**
ಕೊಲ್ಕೊತಾ : ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್ ಹಿರಿಯ ಶಾಸಕ ತಪಸ್ ರಾಯ್ ಅವರು ಪಕ್ಷ ಹಾಗೂ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಪಕ್ಷದ ನಾಯಕತ್ವದಿಂದ ತಮಗೆ ಭ್ರಮನಿರಸನವಾಗಿದೆ ಎಂದವರು ಹೇಳಿದ್ದಾರೆ.

## ಆಟೋ ಚಾಲಕರಿಗೆ ಚಾಲನಾ ಪರವಾನಿಗೆ, ನೋಂದಣಿ, ಅನುಮತಿ ಪತ್ರಗಳ ಅರಿವು

ದಾವಣಗೆರೆ, ಮಾ. 4 - ಜಿಲ್ಲಾ ಪೊಲೀಸ್ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾಗರಿಗಳ ಸಹಯೋಗ ದಲ್ಲಿ ನಗರದ ಪೊಲೀಸ್ ಕವಾಯತು ಮೈದಾನದಲ್ಲಿರುವ ಪೊಲೀಸ್ ಭವನ ದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ವಿಜಯಕುಮಾರ್ ಎಂ. ಸಂತೋಷ್ ಅವರ ಅಧ್ಯಕ್ಷತೆಯಲ್ಲಿ ಹಾಗೂ ದಾವಣ ಗೆರೆ ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಮುತೇಶ್ ಅವರ ಉಪಸ್ಥಿತಿಯಲ್ಲಿ ನಗರದ ಆಟೋ ಚಾಲಕರಿಗೆ ಚಾಲನಾ ಪರವಾನಿಗೆ ಪತ್ರ ಮತ್ತು ವಾಹನ ನೋಂದಣಿ ಪತ್ರ, ವಾಯು ಮಾಲಿನ್ಯ ಪತ್ರ, ಫಿಟ್ನೆಸ್ ಪ್ರಮಾಣ ಪತ್ರ, ಅನುಮತಿ ಪತ್ರ, ವಿಮೆ ಪತ್ರ ಮಾಡಿಸುವ ಬಗ್ಗೆ ಅರಿವು ಮೂಡಿಸುವ ಕಾರ್ಯಾ ಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಾಗಾರದಲ್ಲಿ ನಗರ ಡಿ.ವೈ. ಎಸ್.ಪಿ. ಮಲ್ಲೇಶ್ ದೊಡ್ಮನಿ, ಸಂಚಾರಿ ಪೊಲೀಸ್ ವೃತ್ತ ನಿರೀಕ್ಷಕ ಮಂಜುನಾಥ ನಲವಾಗಲು, ಆರ್.ಟಿ.ಓ ನಿರೀಕ್ಷಕ ಸತೀಶ್ ಕುಮಾರ್, ಆಟೋ ಮಾಲೀಕರು ಮತ್ತು ಚಾಲಕರು ಭಾಗವಹಿಸಿದ್ದರು.



## ಎಲೆಬೇತೂರು ಗ್ರಾಮದ ಆಯುಷ್ಮಾನ್ ಆರೋಗ್ಯ ಕೇಂದ್ರದಲ್ಲಿ ಪಲ್ಸ್ ಪೋಲಿಯೋ



ದಾವಣಗೆರೆ, ಮಾ. 4 - ಎಲೆಬೇತೂರು ಗ್ರಾಮದ ಆಯುಷ್ಮಾನ್ ಆರೋಗ್ಯ ಕೇಂದ್ರದಲ್ಲಿ ಪಲ್ಸ್ ಪೋಲಿಯೋ ಹನಿ ಕಾರ್ಯಕ್ರಮ ನಡೆಯಿತು.

ಬೇತೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಕಲ್ಪನಹಳ್ಳಿ ರೇವಣಸಿದ್ದಪ್ಪ ಮಗು ವಿಗೆ ಪೋಲಿಯೋ ಹನಿ ಹಾಕುವುದರ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಆಲೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಡಾ. ಆಶಾ ಭಾನುಪ್ರಕಾಶ್ ಮಾತನಾಡಿ, ಐದು ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಪಲ್ಸ್ ಪೋಲಿಯೋ ಲಸಿಕೆ ಹಾಕಿಸಿ ದೈಹಿಕ ನ್ಯೂನ್ಯತೆ ತೊಂದರೆಯನ್ನು ತಪ್ಪಿಸಬೇಕೆಂದು ತಿಳಿಸಿದರು.

ಗ್ರಾಮ ಪಂಚಾಯಿತಿಯ ಉಪಾಧ್ಯ ಕ್ಷರಾದ ಶ್ರೀಮತಿ ಶಾಂತಮ್ಮ ಮಂಜು ನಾಥ್, ಗ್ರಾಮ ಪಂಚಾಯಿತಿ ಸದಸ್ಯ ಎಂ.ಎಸ್. ಮಂಜುನಾಥ್, ಚೇತನ್ ಕುಮಾರ್ ಅಂಚಿನಮನಿ ಗ್ರಾಮದ ಮುಖಂಡ ಮಠದ ಬಸವರಾಜಯ್ಯ, ಎಂಪಿ ಮಂಜುನಾಥ್, ತಾಲ್ಲೂಕು ಕಸಾಪ ನಿರ್ದೇಶಕ ಷಡಕ್ಷರಪ್ಪ ಎಂ.ಬೇತೂರು, ಎ.ಕೆ. ಹನುಮಂತಪ್ಪ, ಬೇತೂರು ಸಮುದಾಯ ಆರೋಗ್ಯ ಅಧಿಕಾರಿ ಶ್ರೀಮತಿ ಗುಣಶೀಲ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಶ್ರೀಮತಿ ಶಬೀನ ಬಾನು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಸ್ಲಂ ನಿವಾಸಿಗಳಿಗೆ ವಸತಿ ಹಕ್ಕು-ಸೌಲಭ್ಯ

## ನೂತನ ಕಾಯ್ದೆ ಜಾರಿಗೆ ತರಲು ಐಸಾಕ್ ಅಮೃತ್‌ರಾಜ್ ಆಗ್ರಹ




ದಾವಣಗೆರೆ, ಮಾ. 4 - ಕೊಳಚೆ ಪ್ರದೇಶದ ನಿವಾಸಿಗಳಿಗೆ ಅವರಿರುವ ಜಾಗದ ಪೂರ್ಣ ಹಕ್ಕು ನೀಡಲು ಹಾಗೂ ಮೂಲಭೂತ ಸೌಲಭ್ಯ ಕಲ್ಪಿಸಲು ನೂತನ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಕಾಯ್ದೆ - 2023 ಜಾರಿಗೆ ತರಬೇಕು ಎಂದು ಸ್ಲಂ ಜನರ ಸಂಘಟನೆಯ ರಾಜ್ಯ ಮುಖಂಡ ಐಸಾಕ್ ಅಮೃತ್‌ರಾಜ್ ಒತ್ತಾಯಿಸಿದ್ದಾರೆ.

ನಗರದ ರೋಟರಿ ಬಾಲಭವನದಲ್ಲಿ ಸ್ಲಂ ಜನರ ಸಂಘಟನೆ - ಕರ್ನಾಟಕ ಆಕ್ಷನ್ ಏಡ್ ಅಸೋಸಿಯೇಷನ್, ನೆರಳು ಬೀಡಿ ಕಾರ್ಮಿಕರ ಯೂನಿಯನ್ ಹಾಗೂ ಜಿಲ್ಲಾ ಪ್ರಗತಿಪರ ಸಂಘಟನೆಗಳ ಒಕ್ಕೂಟಗಳ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಸ್ಲಂ ಕಾಯ್ದೆ ಕುರಿತ ಸಮಾಲೋಚನಾ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಈಗಿರುವ ಕಾಯ್ದೆಗಳಲ್ಲಿ ಸ್ಲಂ ಜನರಿಗೆ ತಾವಿರುವ ಭೂಮಿಯ ಮೇಲೆ ಹಕ್ಕಿಲ್ಲ. ಈ ಹಕ್ಕು ಕೊಡಲು ಇರುವ ತೊಡಕುಗಳನ್ನು ಜಾರಿಗೆ ತರಲು ಹೊಸ ಕಾಯ್ದೆಯ ಅಗತ್ಯವಿದೆ ಎಂದರು.

ಸ್ಲಂಗಳನ್ನು ಗುರುತಿಸುವ ಅರ್ಜಿ ಬಂದ ಆರು ತಿಂಗಳಲ್ಲಿ, ಸ್ಲಂ ಘೋಷಣೆಯಾಗಬೇಕು. ನಂತರ ಅಲ್ಲಿರುವವರಿಗೆ ಗುರುತಿನ ಚೀಟಿ ಕೊಟ್ಟು, ವಸತಿ ಭೂಮಿಯ ಸಂಪೂರ್ಣ ಹಕ್ಕು ನೀಡಬೇಕು. ಇದಕ್ಕಾಗಿ ಹೊಸ ಕಾಯ್ದೆಯ ಅಗತ್ಯವಿದೆ ಎಂದರು.

ಇದರ ಜೊತೆಗೆ ಕೊಳಚೆ ಪ್ರದೇಶಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸುವ ಹೊಣೆಯನ್ನು ಸ್ಥಳೀಯ ಆಡಳಿತ ಹಾಗೂ ಕೊಳಚೆ ಪ್ರದೇಶ ಗಳಿಗೆ ವಹಿಸಬೇಕು. ಕೊಳಚೆ ಪ್ರದೇಶದ ನಿವಾಸಿ ಗಳನ್ನು ಒತ್ತಾಯದಿಂದ ಒಕ್ಕಲೆಬ್ಬಿಸಬಾರದು ಎಂದು ಅಮೃತ್‌ರಾಜ್ ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಬೆಂಗಳೂರಿನ ಆಕ್ಷನ್ ಏಡ್ ಅಸೋಸಿಯೇ ಷನ್ ಇಂಡಿಯಾದ ನಂದಿನಿ, ಈಗಿರುವ ಕರ್ನಾ ಟಕ ಕೊಳೆಗೇರಿ ಪ್ರದೇಶ (ಸುಧಾರಣೆಗಳು ಮತ್ತು ನಿರ್ಮೂಲನೆ) ಕಾಯ್ದೆಯನ್ನು ಕೊಳಚೆ ನಿವಾಸಿಗಳ ಹಿತಕ್ಕಾಗಿ ರೂಪಿಸಿಲ್ಲ. ಸ್ಲಂ ನಿವಾಸಿ ಗಳನ್ನು ನಗರದ ಹುಣ್ಣಿನಂತೆ ಕಾಣುವ ಹಾಗೂ ಸ್ಲಂಗಳನ್ನು ನಿವಾರಿಸಬೇಕೆಂಬ ಉದ್ದೇಶದಿಂದ ಈ ಕಾಯ್ದೆ ರೂಪಿಸಲಾಗಿದೆ ಎಂದರು.

ಸ್ಲಂ ಜನರನ್ನು ಹುಣ್ಣಿನಂತೆ ಕಾಣುವ ಇಲ್ಲವೇ ಅವರ ಬಗ್ಗೆ ಕರುಣೆ ತೋರುವ ಧೋರಣೆ ಬೇಕಿಲ್ಲ. ಕೊಳಚೆ ನಿವಾಸಿಗಳು ನಗರಗಳನ್ನು ಕಟ್ಟುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಅವರಿಗೆ ಸಂವಿಧಾನಿಕವಾಗಿ ಅವರ ಹಕ್ಕುಗಳನ್ನು ನೀಡುವ ಕಾಯ್ದೆ ಬೇಕಿದೆ ಎಂದು ಹೇಳಿದರು.

ಮುಂದಿನ 10-20 ವರ್ಷಗಳಲ್ಲಿ ಭಾರತ ಜಿ.ಡಿ.ಪಿ.ಯಲ್ಲಿ ವಿಶ್ವದ ಮೂರನೇ ಅತಿ ದೊಡ್ಡ ದೇಶವಾಗಲಿದೆ. ಈ ಪ್ರಗತಿಗೆ ನೆರವಾಗುತ್ತಿರುವ ಸ್ಲಂಗಳಲ್ಲಿರುವ ಶ್ರಮಿಕರನ್ನು ಸರ್ಕಾರಗಳು ಪರಿ ಗಣಿಸುತ್ತಿಲ್ಲ. ಐ.ಟಿ. - ಬಿ.ಟಿ. ಉದ್ಯಮದಲ್ಲಿರುವ ವರನ್ನೇ ತೆರಿಗೆದಾರರು ಎಂದು ಪರಿಗಣಿಸಲಾ ಗುತ್ತಿದೆ ಎಂದು ನಂದಿನಿ ವಿಷಾದಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸ್ಲಂ ಜನರ ಸಂಘಟನೆಯ ಎಂ. ಕರಿಬಸಪ್ಪ, ಇತ್ತೀಚೆ ಗಷ್ಟೇ ರಾಮಕೃಷ್ಣ ಹೆಗಡೆ ನಗರದ ನಿವಾಸಿಗಳನ್ನು ನಗರದಿಂದ 11 ಕಿ.ಮೀ. ದೂರಕ್ಕೆ ಎತ್ತಂಗಡಿ ಮಾಡಲಾಗಿದೆ. 40 ವರ್ಷಗಳಿಗೂ ಹೆಚ್ಚು ಕಾಲ ಹೆಗಡೆ ನಗರದಲ್ಲಿದ್ದವರಿಗೆ ಯಾವುದೇ ಪುನರ್ವ ಸತಿ ಕಲ್ಪಿಸಿಲ್ಲ. ಇದೇ ರೀತಿಯ ಅಪಾಯ ಇತರೆ ಕೆಲ ಸ್ಲಂಗಳಿಗೂ ಇದೆ ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಹೆಚ್. ಅರುಣ್ ಕುಮಾರ್ ಮಾತನಾಡಿ, ಪ್ರಸ್ತಾಪಿತ ಕಾಯ್ದೆಯು ಜನಮುಖಿಯಾಗಿದೆ. ಸ್ಲಂ ಜನರಿಗೆ ಅನುಕೂಲವಾಗುವ ಈ ಕಾಯ್ದೆಯನ್ನು ಆದಷ್ಟು ಶೀಘ್ರ ಸರ್ಕಾರ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ನೆರಳು ಬೀಡಿ ಕಾರ್ಮಿಕರ ಯೂನಿಯನ್ ಅಧ್ಯಕ್ಷೆ ಜಬೀನಾ ಖಾನಂ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಯಾಗಿ ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು, ಮುಖಂಡರಾದ ಬುಳ್ಳಾಪುರ ಹನುಮಂತಪ್ಪ, ಎಲ್.ಆರ್. ಚಂದ್ರಪ್ಪ, ರೇಷ್ಮಾ ಬಾನು, ಫರೀದಾ ಬಾನು ಮತ್ತಿತರರು ಉಪಸ್ಥಿತರಿದ್ದರು.

## ಕುಮಾರಸ್ವಾಮಿ ಸ್ಪರ್ಧೆ ಬಗ್ಗೆ ದೆಹಲಿಯಲ್ಲಿ ನಿರ್ಧಾರ : ದೇವೇಗೌಡ

ಬೆಂಗಳೂರು, ಮಾ. 4 - ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಕಣಕ್ಕಿಳಿಯುವ ಬಗ್ಗೆ ದೆಹಲಿಯಲ್ಲಿ ನಿರ್ಧಾರವಾಗಲಿದೆ ಎಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಮಾರಸ್ವಾಮಿ ರಾಷ್ಟ್ರ ರಾಜಕಾರಣಕ್ಕೆ ಹೋಗುತ್ತಾರೆಯೇ ಎನ್ನುವುದನ್ನು ಈಗಲೇ ಏನೂ ಹೇಳಲು ಸಾಧ್ಯವಿಲ್ಲ. ದೆಹಲಿಯಲ್ಲಿ ಉಭಯ ಪಕ್ಷದ ನಾಯಕರು ನಡೆಸುವ ಚರ್ಚೆಯಲ್ಲಿ ಬರುವ ಫಲಿತಾಂಶದ ಮೇಲೆ ತೀರ್ಮಾನವಾಗಲಿದೆ ಎಂದರು. ಇನ್ನೊಂದು ವಾರದಲ್ಲಿ ಸೀಟು ಹಂಚಿಕೆ ಬಗ್ಗೆ ತೀರ್ಮಾನ ಆಗುತ್ತದೆ. ಜೆಡಿಎಸ್ ಪಕ್ಷಕ್ಕೆ ಯಾವ ಯಾವ ಕ್ಷೇತ್ರ ಎನ್ನುವುದು ಮೋದಿ, ಅಮಿತ್ ಷಾ, ನಡ್ಡಾ, ಕುಮಾರಸ್ವಾಮಿ ಅವರು ಸಮಾಲೋಚನೆ ಮಾಡುತ್ತಾರೆ. ಅಲ್ಲಿ ಅವರು ಸ್ಪರ್ಧೆ ಮಾಡಬೇಕಾ, ಬೇಡವಾ ಎನ್ನುವ ಅಂಶವನ್ನು ಚರ್ಚೆ ಮಾಡಿ ನಿರ್ಧಾರ ಮಾಡುತ್ತಾರೆ ಎಂದರು.

ಜೆಡಿಎಸ್ ಮತ್ತು ಬಿಜೆಪಿ ನಡುವೆ ಕ್ಷೇತ್ರ ಹಂಚಿಕೆ ಅಂತಿಮ ಹಂತದಲ್ಲಿದ್ದು, ಬಹುಶಃ ಒಂದು ವಾರದೊಳಗೆ ಎಲ್ಲಾ ಪ್ರಕ್ರಿಯೆ ನಡೆಯುತ್ತದೆ ಎಂದರು.

ಸೀಟು ಹಂಚಿಕೆ ವಿಚಾರದ ಬಗ್ಗೆ ಈಗಾಗಲೇ ಬಿಜೆಪಿ ನಾಯಕರ ಜತೆ ಕುಮಾರಸ್ವಾಮಿ ಮಾತುಕತೆ ನಡೆಸಿದ್ದಾರೆ. ಬಹುಶಃ ಇನ್ನೊಮ್ಮೆ ಕೂತು ಚರ್ಚೆ ಮಾಡಿದರೆ ಅಲ್ಲಿಗೆ ಎಲ್ಲಾ ಅಂತಿಮ ಆಗುತ್ತದೆ ಎಂದು ತಿಳಿಸಿದರು.

# ಬಿಜೆಪಿ ಪಕ್ಷದಿಂದ 'ಮೋದಿ ಪರಿವಾರ' ಅಭಿಯಾನ

### ಲಾಲು ಟೀಕೆಯ ನಂತರ ಬಿಜೆಪಿಗೆ ಹೊಸ ಅಸ್ತ್ರ

ನವದೆಹಲಿ, ಮಾ. 4 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಯಾವುದೇ ಕುಟುಂಬ ಇಲ್ಲ ಎಂದು ಆರ್.ಜೆ.ಡಿ. ಅಧ್ಯಕ್ಷ ಲಾಲು ಪ್ರಸಾದ್ ಯಾದವ್ ಹೇಳಿರುವುದಕ್ಕೆ ಬಿಜೆಪಿ ನಾಯಕರು ತಿರುಗೇಟು ನೀಡಿದ್ದು, ನಾವು 'ಮೋದಿ ಪರಿವಾರದವರು' ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹೇಳಿಕೆ ನೀಡಿದ್ದಾರೆ.

ಕೇಂದ್ರ ಸಚಿವರಾದ ಅಮಿತ್ ಷಾ, ರಾಜನಾಥ್ ಸಿಂಗ್, ನಿತಿನ್ ಗಡ್ಕರಿ ಹಾಗೂ ನಿರ್ಮಲ ಸೀತಾರಾಮನ್ ಹಾಗೂ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ ದೊಡ್ಡ ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ತರು ನಾವು 'ಮೋದಿ ಕಾ ಪರಿವಾರ್' (ಮೋದಿ ಕುಟುಂಬ ದವರು) ಎಂದು ಹೇಳಿಕೊಂಡಿದ್ದಾರೆ.

ಪ್ರಧಾನಿ ಮೋದಿ ಅವರ ಹಲವಾರು ಬೆಂಬಲಿಗರೂ ಸಹ ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಮೋದಿ ಪರಿವಾರದವರು ಎಂದು ತಿಳಿಸಿದ್ದಾರೆ.

ಈ ಬಗ್ಗೆ ಪತ್ರಕರ್ತರೊಂದಿಗೆ ಮಾತನಾಡಿರುವ ಬಿಜೆಪಿ ರಾಷ್ಟ್ರೀಯ ವಕ್ತಾರ ಸುಧಾಂಶು ತ್ರಿವೇದಿ, ಪ್ರತಿಪಕ್ಷದವರು ಮೋದಿ ವಿರುದ್ಧ ವೈಯಕ್ತಿಕ ದಾಳಿ ನಡೆಸಿದ್ದಾರೆ. ಕಳೆದ 16-17 ವರ್ಷಗಳಿಂದ ಈ ರೀತಿಯ ಕ್ಷುಲ್ಲಕ ಹೇಳಿಕೆ ನೀಡುತ್ತಿದ್ದಾರೆ ಎಂದರು.

ಇದರ ಮುಂದುವರೆದ ಭಾಗವಾಗಿ ನಿನ್ನೆ ಪಾಟ್ನಾದಲ್ಲಿ ನಡೆದ ಸಮಾವೇಶದಲ್ಲಿ ಲಾಲು ಪ್ರಸಾದ್ ಯಾದವ್ ಅವರು ಪ್ರಧಾನ ಮಂತ್ರಿ ನರೇಂದ್ರ ಮೋದಿ ವಿರುದ್ಧ ಕ್ಷುಲ್ಲಕ ಹೇಳಿಕೆ ನೀಡಿದ್ದಾರೆ. ಐ.ಎನ್.ಡಿ.ಐ. ಒಕ್ಕೂಟದ ನಾಯಕರು ವೇದಿಕೆಯ ಮೇಲಿದ್ದರು. ಇಂತಹ ಹೇಳಿಕೆ ದುಃಖ ಹಾಗೂ ನೋವು ತಂದಿದೆ ಎಂದು ತ್ರಿವೇದಿ ಹೇಳಿದ್ದಾರೆ.

ಯಾದವ್ ಅವರು ಮೋದಿ ಕುಟುಂಬದ ಬಗ್ಗೆ ಮಾತನಾಡಿದ್ದಾರೆ. ಇಡೀ ದೇಶವೇ ಪ್ರಧಾನಿ ಮೋದಿ ಅವರ ಕುಟುಂಬವಾಗಿದೆ ಎಂದು ನೆನಪಿಸಲು ಬಯಸುತ್ತೇನೆ ಎಂದೂ ಅವರು ತಿಳಿಸಿದ್ದಾರೆ.

ಕಳೆದ 2019ರ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿ ಮೋದಿ ಅವರ ವಿರುದ್ಧ 'ಚೌಕಿದಾರ್ ಚೋರ್ ಹೈ' (ಚೌಕಿದಾರನೇ ಕಳ್ಳನಾಗಿದ್ದಾನೆ) ಎಂದು ಲೇವಡಿ ಮಾಡಿದ್ದರು. ನಂತರ ಬಿಜೆಪಿಯು 'ಮೇ ಭಿ ಚೌಕಿದಾರ್' ಎಂಬ ಅಭಿಯಾನ ಆರಂಭಿಸಿತ್ತು. ಬಿಜೆಪಿ ಕಾರ್ಯ ಕರ್ತರು ಹಾಗೂ ಮುಖಂಡರು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಚೌಕಿದಾರ್ ಪದವನ್ನು ವ್ಯಾಪಕವಾಗಿ ಬಳಸಿದ್ದರು.

ರಫೇಲ್ ಸಮರ ವಿಮಾನ ಒಪ್ಪಂದದಲ್ಲಿ ಹಗರಣ ನಡೆದಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಆರೋಪಿಸಿದ್ದರು. ಆದರೆ, ಮೋದಿ ವರ್ಚಸ್ಸಿನ ಮೇಲೆ ಇದರಿಂದ ಯಾವುದೇ ಪರಿಣಾಮವಾಗಲಿಲ್ಲ ಎಂಬುದು ಚುನಾವಣಾ ಫಲಿತಾಂಶದಿಂದ ಕಂಡುಬಂದಿತ್ತು.

ಪಾಟ್ನಾ ಸಮಾವೇಶ ಮುಗಿದ ತಕ್ಷಣವೇ ಬಿಜೆಪಿ ನಾಯಕರು 'ಮೋದಿ ಕಾ ಪರಿವಾರ್' ಎಂದು ತಮ್ಮ ಸಾಮಾಜಿಕ ಜಾಲತಾಣದ ಪ್ರೊಫೈಲ್‌ಗಳಲ್ಲಿ ಸೇರಿಸಿಕೊಂಡಿದ್ದರು.

## ವಿದ್ಯಾರ್ಥಿನಿಯರ ಮೇಲೆ ಆಸಿಡ್ ದಾಳಿ

**(1ನೇ ಪುಟದಿಂದ)** ದಾಳಿ ನಡೆಸಿದ ಯುವಕ ಶಾಲಾ ಸಮವಸ್ತ್ರ ಧರಿಸಿದ್ದ. ಪರೀಕ್ಷಾ ಸಿದ್ಧತೆಯಲ್ಲಿ ಶಾಲೆಯಲ್ಲಿದ್ದ ವಿದ್ಯಾರ್ಥಿನಿಯರ ಬಳಿ ಬಂದು ಆಸಿಡ್ ದಾಳಿ ನಡೆಸಿದ್ದಾನೆ. ಆತನಿಗೆ ಸಮವಸ್ತ್ರ ನೀಡಿದವರು ಯಾರೆಂಬುದರ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ. ದಾಳಿಯ ನಂತರ ಆತ ತಪ್ಪಿಸಿಕೊಳ್ಳುವ ಯತ್ನ ನಡೆಸಿದ. ಸ್ಥಳೀಯರು ಆತನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಗಾಯಗೊಂಡವರನ್ನು ಕಡಬ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ವೈದ್ಯರ ಸಲಹೆಯ ಮೇಲೆ ತೀವ್ರ ಗಾಯಗೊಂಡ ವಿದ್ಯಾರ್ಥಿನಿಯನ್ನು ಮಂಗಳೂರು ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

## ಪಾಕ್ ಪರ ಘೋಷಣೆ : ಮೂವರ ಬಂಧನ

**(1ನೇ ಪುಟದಿಂದ)** ಹೇಳಿದ್ದಾರೆ. ಈ ನಡುವೆ, ಐ.ಟಿ. - ಬಿ.ಟಿ. ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆ ನೀಡಿದ್ದು, ಬಿಜೆಪಿ ಖಾಸಗಿ ವಿಧಿ ವಿಜ್ಞಾನ ಸಂಸ್ಥೆಯ ಮೂಲಕ ಪ್ರಯೋಗ ನಡೆಸಿ ವರದಿ ಬಹಿರಂಗ ಮಾಡಿರುವುದು ದೇಶ ವಿರೋಧಿ ಕೃತ್ಯ ಎಂದು ಆರೋಪಿಸಿದ್ದಾರೆ. ಕಾಂಗ್ರೆಸ್ ವಕ್ತಾರ ಹಾಗೂ ಪಕ್ಷದ ಮಾಧ್ಯಮ ಸಂಚಾಲಕ ಎ.ಎನ್. ನಟರಾಜ ಗೌಡ ಅವರು ನಕಲಿ ವಿಧಿ ವಿಜ್ಞಾನ ವರದಿ ಪ್ರಕಟಿಸಿದ್ದಾರೆ ಎಂದು ಆರೋಪಿಸಿ ದೂರು ದಾಖಲಿಸಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಬಿಜೆಪಿ ರಾಜ್ಯ ಐ.ಟಿ. ವಿಭಾಗದ ಮುಖ್ಯಸ್ಥರ ವಿರುದ್ಧ ಅವರು ದೂರು ದಾಖಲಿಸಿದ್ದಾರೆ.

## ಆರು ತಿಂಗಳಲ್ಲಿ ಸೋರೇನ್ ಪ್ರಕರಣದ ತನಿಖೆಗೆ ಸೂಚನೆ

ನವದೆಹಲಿ, ಮಾ. 4 – ಜಾರ್ಖಂಡ್ ಮುಕ್ತಿ ಮೋರ್ಚ (ಜೆ.ಎಂ.ಎಂ.) ಅಧ್ಯಕ್ಷ ಶಿಬು ಸೊರೇನ್ ವಿರುದ್ಧದ ಅಕ್ರಮ ಆಸ್ತಿಗಳಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಯನ್ನು ಆರು ತಿಂಗಳಲ್ಲಿ ಪೂರೈಸುವಂತೆ ಸಿ.ಬಿ.ಐ.ಗೆ. ಲೋಕಪಾಲ್ ತಿಳಿಸಿದೆ.

ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರು ಆಗಸ್ಟ್ 5, 2020ರಂದು ಅರ್ಜಿ ದಾಖಲಿಸಿ, ವಿಚಾರಣೆಗೆ ಕೋರಿದ್ದರು.

## ಲಂಚ ಪ್ರಕರಣ : ಮಾವನಿಗೆ ರಕ್ಷಣೆ, ಸೊಸೆಗೆ ಸಿಗಲಿಲ್ಲ ವಿನಾಯಿತಿ



ನವದೆಹಲಿ, ಮಾ. 4 – 1998ರಲ್ಲಿ ಜೆ.ಎಂ.ಎಂ. ಲಂಚ ಪ್ರಕರಣದ ತೀರ್ಪಿನಲ್ಲಿ ಮಾಜಿ ಕೇಂದ್ರ ಸಚಿವ ಶಿಬು ಸೋರೇನ್ ಅವರು ಕಾನೂನು ಕ್ರಮದಿಂದ ರಕ್ಷಣೆ ಪಡೆದಿದ್ದರು. ಆದರೆ, ಅವರ ಸೊಸೆ ಸೀತಾ ಸೋರೇನ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಏಳು ಸದಸ್ಯರ ಪೀಠ ಹಳೆಯ ತೀರ್ಪನ್ನು ಬದಲಿಸಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಏಳು ಸದಸ್ಯರ ಪೀಠ 26 ವರ್ಷಗಳ ಹಿಂದಿನ ಸುಪ್ರೀಂ ಕೋರ್ಟ್ ತೀರ್ಪನ್ನು ಬದಲಿಸಿದೆ. ಶಾಸನಸಭೆಗಳಲ್ಲಿ ಮತ ಚಲಾವಣೆ ಹಾಗೂ ಮಾತುಗಳಿಗೆ ಲಂಚ ಕ್ರಮದಿಂದ ವಿನಾಯಿತಿ ಇದೆ ಎಂದು ಆಗ ಸುಪ್ರೀಂ ಕೋರ್ಟ್ 3-2ರ ಬಹುಮತದ ತೀರ್ಪು ನೀಡಿತ್ತು.

ಆ ಸಂದರ್ಭದಲ್ಲಿ ಜೆ.ಎಂ.ಎಂ. ನಾಯಕ ಶಿಬು ಸೋರೇನ್ ಅವರು ಲಂಚ ಪ್ರಕರಣದಲ್ಲಿ ಸಿಲುಕಿದ್ದರು. ಈಗ ಅವರ ಸೊಸೆ ಸೀತಾ ಸೋರೇನ್ ಅವರು ಲಂಚ ಪ್ರಕರಣದಲ್ಲಿ ಸಿಲುಕಿದ್ದಾರೆ.

1993ರಲ್ಲಿ ಶಿಬು ಸೋರೇನ್ ಹಾಗೂ ಅವರ ಪಕ್ಷದ ನಾಲ್ವರು ಸಂಸದರು ಲಂಚ ಪಡೆದು ಆಗಿನ ಪಿ.ವಿ. ನರಸಿಂಹ ರಾವ್ ಸರ್ಕಾರದ ವಿರುದ್ಧದ ಅವಿಶ್ವಾಸ ನಿಲುವಳಿಯಲ್ಲಿ, ಸರ್ಕಾರದ ಪರ ಮತ ಚಲಾಯಿಸಿದ್ದರು. ಇದರಿಂದಾಗಿ ರಾವ್ ಸರ್ಕಾರ ಉಳಿದುಕೊಳ್ಳಲು ಸಾಧ್ಯವಾಗಿತ್ತು. ಶಿಬು ಸೋರೇನ್ ಅವರ ಮಗ ದಿವಂಗತ ದುರ್ಗಾ ಸೋರೇನ್ ಅವರ ಪತ್ನಿ ಸೀತಾ ಸೋರೇನ್ ಅವರು 2012ರಲ್ಲಿ ರಾಜ್ಯಸಭಾ ಚುನಾವಣೆಯಲ್ಲಿ ನಿರ್ದಿಷ್ಟ ಅಭ್ಯರ್ಥಿ ಪರವಾಗಿ ಮತ ಚಲಾಯಿಸಲು ಲಂಚ ಪಡೆದಿದ್ದರು. ಆದರೆ, ಆ ಅಭ್ಯರ್ಥಿಯ ಪರವಾಗಿ ಮತ ಚಲಾಯಿಸಿರಲಿಲ್ಲ.

ಸೀತಾ ಸೋರೇನ್ ವಿರುದ್ಧ ಭ್ರಷ್ಟಾಚಾರ ಪ್ರಕರಣ ದಾಖಲಿಸಲಾಗಿತ್ತು. ಜನಪ್ರತಿನಿಧಿಗಳಿಗೆ ಭ್ರಷ್ಟಾಚಾರ ಪ್ರಕರಣದಿಂದ ವಿನಾಯಿತಿ ಇದೆ ಎಂದವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು. ಅಂತಿಮವಾಗಿ ಅವರ ಅರ್ಜಿ ತಿರಸ್ಕೃತಗೊಂಡಿದೆ.

## ಹಿಂಡಸಘಟ್ಟ ಕ್ಯಾಂಪ್‌ನಲ್ಲಿ ಇಂದು

ಮಲೇಬೆನ್ನೂರು ಸಮೀಪದ ಹಿಂಡಸಘಟ್ಟ ಕ್ಯಾಂಪಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಮಧ್ಯಾಹ್ನ 12.30ಕ್ಕೆ ಶಾರದಾ ಪೂಜೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಶಾಲಾ ಮುಖ್ಯ ಶಿಕ್ಷಕ ಬಿ. ಅರುಣ್‌ಕುಮಾರ್ ತಿಳಿಸಿದ್ದಾರೆ.

# ದಕ್ಷ ನೀರಿನ ಬಳಕೆಗೆ

## ಇನ್ನಾದರೂ ಯೋಚಿಸಬಹುದೇ....?





**ಭಾರತಕ್ಕಿಂತ ಕಡಿಮೆ ಮಳೆ ಬಂದರೂ, ಫಲವತ್ತಾದ ಮಣ್ಣಿರದೇ ಇದ್ದರೂ ಸಮೃದ್ಧಿ ಕಾಣುವ ಇಸ್ರೇಲ್‌ನಂತಹ ದೇಶಗಳು ಒಂದೆಡೆ. ಬೆಳೆಗೆ ಅಗತ್ಯವಾದ ಬಿಸಿಲು, ಮಳೆ ಹಾಗೂ ಫಲವತ್ತಾದ ಮಣ್ಣಿದ್ದರೂ ಪದೇ ಪದೇ ಸಂಕಷ್ಟಕ್ಕೆ ಗುರಿಯಾಗುವ ಭಾರತ ಮತ್ತೊಂದೆಡೆ.**

ಈ ಬಾರಿಯ ಬಿಸಿಲು ಬಿರುಸಿನಿಂದ ಕೂಡಿರಲಿದೆ ಎಂದು ಹವಾಮಾನ ಇಲಾಖೆಯ ಇತ್ತೀಚಿನ ವರದಿಗಳು ತಿಳಿಸಿವೆ. ಕಳೆದ 2024ರ ಬೇಸಿಗೆ ಯಾವುದೇ ಕಾರಣಕ್ಕೂ ಹಿತಾನುಭವ ಇಲ್ಲವೇ ಅಚ್ಛೇ ದಿನ್ ಕೊಡುವ ಗ್ಯಾರಂಟಿ ಇಲ್ಲ ಎಂದು ವಿಜ್ಞಾನಿಗಳು ಕಳೆದ ವರ್ಷದಿಂದಲೇ ಹೇಳುತ್ತಿದ್ದಾರೆ. ಇತ್ತೀಚಿನ ಹವಾಮಾನ ಇಲಾಖೆಯ ವರದಿ ಆ ಮುನ್ಸೂಚನೆಯ ಮುಂದುವರಿದ ಭಾಗವಾಗಿದೆ ಅಷ್ಟೇ.

ಆದರೆ, ಜೀವ ಜಲದ ವಿಷಯದಲ್ಲಿ ಆಡಳಿತ ಎಷ್ಟರ ಮಟ್ಟಿಗೆ ಗಂಭೀರವಾಗಿದೆ ಎಂಬುದಷ್ಟೇ ಈಗಿರುವ ಪ್ರಶ್ನೆಯಾಗಿದೆ. ಬೇಸಿಗೆ ಬೆಳೆ ಬೆಳೆಯುವುದು ದೂರದ ಮಾತಾಗಿದೆ. ದೀರ್ಘಾವಧಿ ತೋಟದ ಬೆಳೆ ಉಳಿಸಿಕೊಂಡು, ಜನ - ಜಾನುವಾರುಗಳ ಕುಡಿಯುವ ನೀರಿನ ಅಗತ್ಯ ನೋಡಿಕೊಂಡರೆ ಸಾಕೆಂಬ ಪರಿಸ್ಥಿತಿ ಇದೆ. ಅಣೆಕಟ್ಟೆ, ಕೆರೆಗಳು ಹಾಗೂ ಬೋರುಗಳಲ್ಲಿರುವ ಅಷ್ಟೋ ಇಷ್ಟೋ ನೀರನ್ನು ಜೂನ್‌ವರೆಗೆ ಬಳಕೆ ಮಾಡಿಕೊಳ್ಳುವ ಬಗ್ಗೆ ಸಮರ್ಪಕ ಯೋಜನೆ ಇಲ್ಲ ಎಂಬ ದೂರುಗಳು ಕೇಳಿ ಬರುತ್ತಿವೆ.

ಕಳೆದ 2023ರಲ್ಲಿ ಇದೇ ಭದ್ರಾ ಅವಧಿಯಲ್ಲಿ ಭದ್ರಾ ಅಣೆಕಟ್ಟೆಯಲ್ಲಿ 168 ಅಡಿ ಮಟ್ಟದ ನೀರಿತ್ತು. ಅಣೆಕಟ್ಟೆಯಲ್ಲಿದ್ದ 51 ಟಿಎಂಸಿ ನೀರಿನಲ್ಲಿ ಬಳಸಿ ಉಳಿಸಲೂ ಅವಕಾಶವಿತ್ತು. ಆದರೆ, ಜೂನ್ ವೇಳೆಗೆ ಜಲಾಶಯದ ನೀರಿನ ಮಟ್ಟ ಏನಿಲ್ಲ.. ಏನಿಲ್ಲ.. ಎಂಬ ಹಂತಕ್ಕೆ ಹೋಗಿತ್ತು. ಇದು ನಮ್ಮಲ್ಲಿ ನೀರು ಸಮೃದ್ಧವಾಗಿದ್ದಾಗ ಉಳಿಸಿಕೊಳ್ಳುವ ದೂರಾಲೋಚನೆ ಕೊರತೆ ಇರುವುದನ್ನು ತೋರಿಸುತ್ತದೆ. ಈ ಬಾರಿ ನೀರಿನ ಮಟ್ಟ 137.5 ಅಡಿಗೆ ಕುಸಿದಿದೆ. ಇರುವ 12-13 ಟಿಎಂಸಿ ನೀರನ್ನು ಮುಂದಿನ ಜೂನ್‌ವರೆಗೂ ಎಳೆಯಬೇಕಿದೆ.

ಭಾರತದ ಕೃಷಿಯು ನೆರೆ ಹಾಗೂ ಬರದ ಜೊತೆ ಹೋರಾಟ ನಡೆಸುವುದು ಹೊಸ ವಿಷಯವೇನೂ ಅಲ್ಲ. ಹವಾಮಾನ ಮುನ್ಸೂಚನೆ ಹಾಗೂ ನೀರಿನ ಅಗತ್ಯತೆಯ ಬಗ್ಗೆ ತಿಳುವಳಿಕೆ ಈಗ ಅಪಾರವಾಗಿ ಹೆಚ್ಚಾಗಿದೆ. ಆದರೂ, ನೀರಿನ ಬಳಕೆಯ ವಿಷಯದಲ್ಲಿ ಗಂಭೀರತೆಯ ಕೊರತೆ ಇದೆ. ಭಾರತದ ನಗರ ಪ್ರದೇಶಗಳಲ್ಲಿ ಉತ್ಪಾದನೆಯಾಗುವ ಕೊಳಚೆ ನೀರನ್ನು ಸಂಸ್ಕರಿಸುವ ಪ್ರಮಾಣ ಶೇ.28-30ರ ಹಂತದಲ್ಲಿದೆ ಎಂದು ವರದಿಗಳು ತಿಳಿಸುತ್ತವೆ. ಮತ್ತೊಂದೆಡೆ ಇಸ್ರೇಲ್‌ನಂತಹ ದೇಶ ತನ್ನಲ್ಲಿನ ಶೇ.90ರಷ್ಟು ನೀರನ್ನು ಮರು ಬಳಕೆ ಮಾಡಿಕೊಳ್ಳುತ್ತಿದೆ. ಜಲ ಎಂಬ ಸಂಪನ್ಮೂಲವನ್ನು ಭಾರತದಲ್ಲಿ ನಿರ್ಲಕ್ಷ್ಯದಿಂದ ಕಾಣುತ್ತಿರುವುದಕ್ಕೆ ಇದೇ ಉದಾಹರಣೆಯಾಗಿದೆ.

ಮಳೆ ಬಂದಾಗ ಸಮರ್ಪಕ ನೀರು ಒದಗಿಸುವಲ್ಲಿ ಹೆಗ್ಗಳಿಕೆಯೇನೂ ಇಲ್ಲ. ನಿಜವಾದ ಹೆಗ್ಗಳಿಕೆ - ವಿಕಸಿತ ಭಾರತ ಎಂದರೆ ಮಳೆ ಕೊರತೆಯ ಸಂದರ್ಭದಲ್ಲೂ ತಂತ್ರಜ್ಞಾನದ ಸಮರ್ಪಕ ಬಳಕೆಯಿಂದ ಪರಿಸ್ಥಿತಿ ನಿಭಾಯಿಸುವುದಾಗಿದೆ.

ನೀರಿನ ಬಳಕೆಯ ಕುರಿತ ಮನೋಭಾವ ಬದಲಾಗುವ ತುರ್ತು ಅಗತ್ಯವಿದೆ. ದೇಶದಲ್ಲಿ ಕಾನೂನು ತಗಾದೆಯಲ್ಲಿ ಸಿಲುಕದೇ ಇರುವ ನದಿಗಳೇ ಇಲ್ಲ ಎನ್ನಬಹುದು. ಅಂತರ ರಾಜ್ಯಗಳ ನಡುವೆ ಜಲ ವಿವಾದಗಳಿವೆ. ಸಾಲದು ಎಂಬಂತೆ, ರಾಜ್ಯದೊಳಗೆ ಇರುವ ಅಣೆಕಟ್ಟೆಗಳಲ್ಲಿನ ನೀರಿನ ಬಳಕೆಗೂ ತಗಾದೆಗಳು. ಬಲ - ಎಡ ದಂಡೆಗಳು, ಮೇಲ್ಭಾಗ - ಕೊನೆ ಭಾಗದ ತಕರಾರುಗಳಿಗೆ ಅಂತ್ಯವಿಲ್ಲದಂತಾಗಿದೆ.

ಹೋಗಲಿ ಭಾರತದಲ್ಲಿ ನೀರಿನ ಕೊರತೆಯೇನಾದರೂ ಇದೆಯಾ ಎಂದರೆ, ಅದೂ ಇಲ್ಲ. ಉದಾಹರಣೆಗೆ ತುಂಗಾದಲ್ಲಿ ನೀರು ಹೆಚ್ಚಾಗಿ ಆಂಧ್ರಕ್ಕೆ ಹರಿದು ಹೋಗುತ್ತಿದೆ. ಭದ್ರಾದಲ್ಲಿ ನೀರಿನ ಸಮಸ್ಯೆ ಆಗಾಗ ಕಾಡುತ್ತಲೇ ಇರುತ್ತದೆ. ಭದ್ರಾ ಮೇಲ್ದಂಡೆಯಂತಹ ಯೋಜನೆ ಜಾರಿ ಕುಂಟುತ್ತಾ ಸಾಗುತ್ತಿದೆ. ಈ ಯೋಜನೆ ಜಾರಿಗೆ ಬಂದಿದ್ದರೆ, ತುಂಗಾ ಅಣೆಕಟ್ಟೆಯಿಂದ ಭದ್ರಾ ಜಲಾಶಯಕ್ಕೆ ನೀರು ತರಲು ಸಾಧ್ಯವಾಗುತ್ತಿತ್ತು. ಆಗ ಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ನೀರಿನ ಸಮಸ್ಯೆ ಇಷ್ಟಾಗಿ ಕಾಡುತ್ತಿರಲಿಲ್ಲ.

ಭಾರತಕ್ಕಿಂತ ಕಡಿಮೆ ಮಳೆ ಬಂದರೂ, ಫಲವತ್ತಾದ ಮಣ್ಣಿರದೇ ಇದ್ದರೂ ಸಮೃದ್ಧಿ ಕಾಣುವ ಇಸ್ರೇಲ್‌ನಂತಹ ದೇಶಗಳು ಒಂದೆಡೆ. ಬೆಳೆಗೆ ಅಗತ್ಯವಾದ ಬಿಸಿಲು, ಮಳೆ ಹಾಗೂ ಫಲವತ್ತಾದ ಮಣ್ಣಿದ್ದರೂ ಪದೇ ಪದೇ ಸಂಕಷ್ಟಕ್ಕೆ ಗುರಿಯಾಗುವ ಭಾರತ ಮತ್ತೊಂದೆಡೆ.

ಬೃಹತ್ ಹೆದ್ದಾರಿ, ರೈಲು ಮಾರ್ಗ, ಸೇತುವೆ ಇತ್ಯಾದಿ ಮೂಲಭೂತ ಸಂಪರ್ಕ ಸೃಷ್ಟಿಸುವುದರಿಂದ ದೇಶದ ಅಭಿವೃದ್ಧಿಯಾಗುತ್ತದೆ. ಅದೇ ರೀತಿ ನೀರಿನ ದಕ್ಷ ಬಳಕೆಗೆ ಬೃಹತ್ ಹೂಡಿಕೆ ಮಾಡಿದರೂ ಅಭಿವೃದ್ಧಿಯಾಗುತ್ತದೆ. ಹೀಗಾಗಿ ನೀರಿನ ಸಂಗ್ರಹ, ಸಾಗಣೆ ಹಾಗೂ ಬಳಕೆಗಾಗಿ ದಕ್ಷ ಯೋಜನೆಗಳಿಗೆ ಹೂಡಿಕೆ ಮಾಡಲು ಇದು ಸಕಾಲ.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ಇಷ್ಟು ವರ್ಷಗಳಾದರೂ, ನೀರಿನ ಬಳಕೆ ಬಗ್ಗೆ ದೀರ್ಘಾವಧಿ ಯೋಜನೆ ಹಾಗೂ ಜಲ ವಿವಾದಗಳ ಇತ್ಯರ್ಥಕ್ಕೆ ಸಮರ್ಪಕ ವ್ಯವಸ್ಥೆಗಳಿಲ್ಲ. ವಿವಾದ ಗಳು ಸಂಘರ್ಷಗಳಾಗಿ, ಜಲ ಸಮರಗಳಾಗಿ ಪರಿವರ್ತನೆ ಯಾಗುವುದಕ್ಕೆ ಮುಂಚೆ ನೀರಿನ ಬಳಕೆಯ ಹಾದಿ ಬದಲಿಸಿಕೊಳ್ಳಬೇಕಿದೆ.

- ಅಸ್ಮಿತ

# ಸಾಮಾನ್ಯರಲ್ಲಿ ಸಾಮಾನ್ಯದಂತಿದ್ದು ಜಿಲ್ಲಾಡಳಿತ ಸ್ವರೂಪ ಬದಲಿಸಿದ್ದ ಕೆ.ಶಿವರಾಂ

**ದೃಶ್ಯ ಒಂದು :** ಜಿಲ್ಲಾಡಳಿತವನ್ನು ಗ್ರಾಮಗಳ ಜನತೆಯ ಬಳಿಗೆ ಕೊಂಡೊಯ್ಯುವ 'ನಮ್ಮ ನಾಡು' ಎಂಬ ರಾಜ್ಯದ ಮೊದಲ ವಿಶಿಷ್ಟ ಕಾರ್ಯಕ್ರಮವದು. ಒಂದು ಹಳ್ಳಿಯಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ಅಧಿಕಾರಿಗಳು ಆ ಹಳ್ಳಿಯವರ ಓಣಿಯಲ್ಲಿ ಅಹವಾಲುಗಳನ್ನು ಕೇಳುತ್ತಾ ಸಾಗಿದ್ದರು. ಆಗ ಜಿಲ್ಲಾಧಿಕಾರಿಗಳು ಸಾಗುವಾಗ ಗುಡಿಸಲೊಂದರ ಮುಂದೆ ಒಬ್ಬ ಬಾಲಕ ನಿಂತಿದ್ದು ಕಣ್ಣಿಗೆ ಬಿತ್ತು. ಮಾಸಲು ಬಟ್ಟೆ, ಮೈಯೆಲ್ಲಾ ಕೊಳಕಾಗಿದ್ದ ಆ ಹುಡುಗ ಮೈಯ್ಯಿಗೆ ನೀರು ತಾಗಿಸಿಕೊಂಡು ಎಷ್ಟು ದಿನಗಳಾಗಿದ್ದವೋ? ಅಷ್ಟು ಕೊಳಕಾಗಿದ್ದ!

ಜಿಲ್ಲಾಧಿಕಾರಿಗಳು ಆ ಬಾಲಕನ ಬಳಿಯೇ ಮುನ್ನಡೆದರು. ಆ ಹುಡುಗನ ತಲೆ ಸವರಿದರು, ಅಪ್ಪ - ಅಮ್ಮ ಎಲ್ಲಿ ಎಂದು ವಿಚಾರಿಸಿದರು. ಅಪ್ಪ - ಅಮ್ಮ ಕೂಲಿ ಮಾಡಲು ಹೋಗಿದ್ದಾರೆಂದು ತಿಳಿದ ಮೇಲೆ. ಅತ್ತಿತ್ತ ನೋಡಿ ಎರಡು ಬಕೆಟ್ ನೀರು ತರಿಸಿಕೊಂಡರು, ಹತ್ತಿರದ ಅಂಗಡಿಯಿಂದ ಮೈ ಸೋಪನ್ನು ತರಿಸಿಕೊಂಡು, ಆ ಬಾಲಕನ ಬಟ್ಟೆಯನ್ನು ಆ ರಸ್ತೆ ಬದಿಯಲ್ಲೇ ಕಳಚಿಬಿಟ್ಟರು ! ನೋಡ ನೋಡುತ್ತಿದ್ದಂತೆ ಆ ಹುಡುಗನ ಮೈಗೆಲ್ಲಾ ಸೋಪು ಹಚ್ಚಿ ಅವನ ಮೈ ತೊಳೆದೇ ಬಿಟ್ಟರು ! ಇಷ್ಟೆಲ್ಲಾ ಆಗುವಾಗ ಜೊತೆಗಿದ್ದ ಜಿಲ್ಲೆಯ ಎಲ್ಲಾ ಇಲಾಖೆಗಳ ಅಧಿಕಾರಿಗಳು ಮತ್ತು ಆ ಊರಿನ ಜನ ನಿಬ್ಬೆರಗಾಗಿ ನೋಡ ತೊಡಗಿದರು. ಇದು ದಾವಣಗೆರೆ ಜಿಲ್ಲೆಯಲ್ಲಿ 2001ರ ಸುಮಾರಿಗೆ ನಡೆದ ಘಟನೆ. ಆ ಜಿಲ್ಲಾಧಿಕಾರಿ ಬೇರೆ ಯಾರೂ ಅಲ್ಲ ಮೈಸೂರು ಸೀಮೆಯ ಅತ್ಯಂತ ಕಡು ಬಡತನದ ಕುಟುಂಬದಲ್ಲಿ ಜನಿಸಿ, ಡಾ.ಅಂಬೇಡ್ಕರ್ ಆಶಯದಂತೆ 'ಶಿಕ್ಷಣ, ಸಂಘಟನೆ, ಹೋರಾಟ' ಎಂಬ ಧ್ಯೇಯ ವಾಕ್ಯಗಳ ಪೈಕಿ ಶಿಕ್ಷಣದಲ್ಲಿ ಸಾಧನೆ ಗೈಯ್ಯುವ ಛಲ ದಿಂದ ಮುನ್ನಡೆದು, ಕರ್ನಾಟಕದ ಇತಿಹಾಸದಲ್ಲಿ ಮೊದಲ ಬಾರಿಗೆ ಕನ್ನಡದಲ್ಲೇ ಐಎಎಸ್ ಪರೀಕ್ಷೆ ಬರೆದು ತೇರ್ಗಡೆಯಾದ ಪ್ರಥಮ ವ್ಯಕ್ತಿ ಈ ಕೆ.ಶಿವರಾಮ್!

**ದೃಶ್ಯ ಎರಡು :** ಜಿಲ್ಲಾಧಿಕಾರಿಗಳ ಕಚೇರಿ, ನಿತ್ಯದ ಜನಜಂಗುಳಿ. ಆ ಅಧಿಕಾರಿ ಹೊರಬಂದರು. ಪ್ರತಿಯೊಬ್ಬರ ಬಳಿಯೂ ತಾವೇ ಹೋದರು. ನಿಮಗೆ ಯಾರ ಬಳಿ ಸ್ವಂತ ಮನೆ ಇಲ್ಲ ಅವರೆಲ್ಲಾ ಜಿಲ್ಲಾಧಿಕಾರಿಗಳ ಹೆಸರಲ್ಲಿ ಐದು ಸಾವಿರ ರೂಪಾಯಿಗಳ ಡಿ.ಡಿ., ಅರ್ಜಿ ತಂದುಕೊಡಿ. ನಿಮಗೆಲ್ಲ ಸ್ವಂತ ಮನೆ ಕೊಡಿಸುವೆ ಎಂದು ಹೇಳ ತೊಡಗಿದರು!


ಜನ ನಂಬುವ ಸ್ಥಿತಿಯಲ್ಲೇ ಇರಲಿಲ್ಲ. ಆದರೆ, ಪ್ರತಿನಿತ್ಯ ಮನೆ ಕೇಳುವವರ ಸಂಖ್ಯೆ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ, ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಎಸ್.ಎಸ್. ಮಲ್ಲಿಕಾರ್ಜುನ್‌ರವರ ನಿವಾಸದ ಮುಂದೆ ಪ್ರತಿನಿತ್ಯ ಸಾಲುಸಾಲು ಜನ ನೆರೆಯ ತೊಡಗಿತು. ಅದು 2000-2001ರ ಸಂದರ್ಭ.

**ದೃಶ್ಯ ಮೂರು :** ಜನರಿಂದ ಅಹವಾಲು ಕೇಳುತ್ತಿದ್ದ ಸಂದರ್ಭದಲ್ಲಿ ಹೆಣ್ಣು ಮಗಳೊಬ್ಬಳು ದಿಢೀರ್ ಕಾಲಿಗೆ ಬಿದ್ದು ಅಳತೊಡಗಿದಳು. ಸಿಬ್ಬಂದಿ ಆಕೆಯನ್ನು ಎಬ್ಬಿಸಿ ಸಮಸ್ಯೆ ಏನೆಂಬುದನ್ನು ಹೇಳುವಂತೆ ಸೂಚಿಸಿದರು. ನನ್ನ ಅಳಿಯನಿಗೆ ಕೆಲಸವಿಲ್ಲ ಲ್ಯಾಬ್ ಟೆಕ್ನೀಷಿಯನ್ ಆಗಿದ್ದಾನೆ. ಕೆಲಸವಿಲ್ಲದ ಕಾರಣ ಹೆಂಡತಿಯ ಗೋಳು ಹೊಯ್ದುಕೊಳ್ಳುತ್ತಾನೆ ಎಂದು ಅಳುತ್ತಾ ಹೇಳಿದಳಾಕೆ. ತಕ್ಷಣವೇ ತಮ್ಮ ಆಪ್ತ ಸಹಾಯಕರನ್ನು ಕರೆದು ಯಾವುದೋ ತಾಲ್ಲೂಕಿನ ಆಸ್ಪತ್ರೆಗೆ ಕೂಡಲೇ ನೇಮಕಾತಿ ಪತ್ರ ರೆಡಿ ಮಾಡುವಂತೆ ಹೇಳಿದಾಗ ಸಿನಿಮಾದಲ್ಲಿನ ವರ ಕೊಡುವ ಪೌರಾಣಿಕ ಸಿನಿಮಾದ ದೃಶ್ಯದಂತೆ ಭಾಸವಾಯಿತು.

ಅಲ್ಲೇ ಮತ್ತೊಬ್ಬ ಹೆಣ್ಣು ಮಗಳು ತನಗೆ ಕೆಲಸವಿಲ್ಲವೆಂದೂ ಮಕ್ಕಳನ್ನು ಸಲಹುದು ಕಷ್ಟ ವಾಗಿದೆಯೆಂದು ಹೇಳಿದ್ದೇ ಅಲ್ಲೇ ನಿಂತಿದ್ದ ಒಬ್ಬರನ್ನು ಕರೆದು ಆ ಹೆಂಗಸಿಗೆ ಸಂಜೆ ಒಳಗೆ ಒಂದು ಹೊಲಿಗೆ ಮಿಷಿನ್ ಕೊಡುವ ಕಟ್ಟಪ್ಪಣೆ ಮಾಡಿಬಿಟ್ಟರು ! ಇದು ಆ ದಿನಗಳಲ್ಲಿನ ಜಿಲ್ಲಾಧಿಕಾರಿಗಳ ಕಚೇರಿಯ ದಿನ ನಿತ್ಯದ ದೃಶ್ಯಗಳು. ಇಂತಹ ಹಲವರು ಘಟನೆಗಳನ್ನು ನೋಡಿದವರಿದ್ದಾರೆ, ಸ್ವತಃ ಅನುಭವಿಸಿದವರೂ ಇದ್ದಾರೆ. ಇದು 'ಶಿವರಾಮ್ ಸ್ಟೈಲ್' ನಿಸ್ಸಂದೇಹವಾಗಿ ಹೇಳಬಹುದು.

ಕರ್ನಾಟಕದಲ್ಲಿ ಎಸ್.ಎಂ.ಕೃಷ್ಣರವರ ಸರ್ಕಾರ ಅಸ್ತಿತ್ವಕ್ಕೆ ಬಂದು ವರ್ಷ ಸಮೀಪಿಸಿತ್ತು. ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾಗಿ ಪ್ರಥಮ ಬಾರಿಗೆ ಶಾಮನೂರು ಮಲ್ಲಿಕಾರ್ಜುನ್ ರವರನ್ನು ನೇಮಿಸಲಾಗಿತ್ತು. ಮಲ್ಲಿಕಾರ್ಜುನ್ ಆಗ ಉತ್ಸಾಹದ ಚಿಲುಮೆಯಾಗಿದ್ದರು.

ಜಿಲ್ಲೆಯಲ್ಲಿ ಯಾರೂ ಮಾಡಲಾರದಷ್ಟು ಕೆಲಸ ಮಾಡಬೇಕೆಂಬ ತಹತಹಿಕೆ ಅವರಲ್ಲಿ ಮನೆಮಾಡಿತ್ತು. ಅದೇ



ಸಮಯಕ್ಕೆನೆ ಕೆ.ಶಿವರಾಮ್ ಈ ಜಿಲ್ಲೆಗೆ ಜಿಲ್ಲಾಧಿಕಾರಿಯಾಗಿ ಆಗಮಿಸಿದ್ದರು.

ಕಾಕತಾಳೀಯ ಎಂಬಂತೆ ಈ ಲೇಖನ ಬರೆಯುತ್ತಿರುವ ನಾನು, ಮಲ್ಲಿಕಾರ್ಜುನ ಅವರ ಆಸಕ್ತಿ ಮತ್ತು ಕಾಳಜಿಯ ಕಾರಣ ಅವರ ವಿಧಾನ ಸಭಾ ಕ್ಷೇತ್ರದ ಆಶ್ರಯ ಸಮಿತಿಯ ಅಧ್ಯಕ್ಷನಾಗಿ ನೇಮಕಗೊಂಡಿದ್ದೆ!

ಅಂದು ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡು ಶಿವರಾಮ್ ಅವರು, ನೇರವಾಗಿ ಸಚಿವರನ್ನು ಭೇಟಿಯಾಗಲು ಅವರ ಮನೆಗೆ ಬಂದರು. ಉಭಯ ಕುಶಲೋಪರಿಯ ನಡುವೆ ಮಲ್ಲಿಕಾರ್ಜುನ್ ಅವರು ನೋಡ್ರಿ, ಬಂದಿದ್ದೀರಿ ಸಂತೋಷ. ನಾನು ಹೇಳುವುದಿಷ್ಟೆ, ನಮ್ಮ ಜಿಲ್ಲೆಯಲ್ಲಿ ಉತ್ತಮವಾದ ಕೆಲಸಗಳಾಗಬೇಕು, ನೀವೂ ನಮ್ಮ ಜೊತೆ ಕೈಜೋಡಿಸಬೇಕು ಅಷ್ಟೇ ಅಂದಿದ್ದು ನೆನಪು.ಅವರೂ ಕೂಡ ನೋಡ್ತಾ ಇರಿ ಸಾರ್ ಆ ರೀತಿಯೇ ಕೆಲಸ ಮಾಡೋಣ ಎಂದಿದ್ದರು.

ಬಂದ ಹೊಸತರಲ್ಲೇ ಶಿವರಾಮ್‌ರವರ ಆಸಕ್ತಿಯ ಕಾರಣ ಜಿಲ್ಲಾಡಳಿತದ ಸ್ವರೂಪವೇ ಬದಲಾಯಿತು. ಅಧಿಕಾರಿಗಳು, ದೊಡ್ಡ ದೊಡ್ಡ ಯೋಜನೆಗಳನ್ನು ಹೊತ್ತುಕೊಂಡು ಬರುತ್ತಿದ್ದ ಠಾಕುಠೀಕಾದ ಜನರಿಂದಲೇ ತುಂಬಿರುತ್ತಿದ್ದ ಜಿಲ್ಲಾಧಿಕಾರಿ ಕಚೇರಿ ಮಾಸಲು ಮತ್ತು ಹರಿದ ಬಟ್ಟೆಗಳ ಜನಗಳಿಂದ ತುಂಬಿ ಹೋಗುವ ಸ್ಥಿತಿಗೆ ಬದಲಾಯಿತು. ಆಟೋ ಚಾಲಕರು, ಕೈಗಾಡಿ ಎಳೆಯುವವರು, ತರಕಾರಿ ಮಾರುವ ಮಹಿಳೆಯರು ತಂಡೋಪ ತಂಡವಾಗಿ ಸರ್ಕಾರಿ ಕಛೇರಿಗಳಿಗೆ ಲಗ್ಗೆ ಇಡುವ ಪರಿಸ್ಥಿತಿಗೆ ಬದಲಾದವು.

ಅಷ್ಟೊತ್ತಿಗೆ ಎಸ್.ಎಂ.ಕೃಷ್ಣ ರ ಹೆಸರಿನ ಆಶ್ರಯ ಬಡಾವಣೆಯೊಂದರ ನಿರ್ಮಾಣ ಕಾರ್ಯ ಕುಂಟುತ್ತಲೇ ಸಾಗುತ್ತಿತ್ತು. ಅದರ ಮೇಲೆ ಮಲ್ಲಿಕಾರ್ಜುನ್ ಮತ್ತು ಶಿವರಾಮ್ ದೃಷ್ಟಿ ಬಿದ್ದಿದ್ದೇ ತಡ ಅದ ಕಾಮಗಾರಿಯು ವೇಗ ಪಡೆದು ಕೊಂಡಿತು. ಮುಂದೆ ಅದು ಪ್ರಥಮ ಬಾರಿಗೆ ಕರ್ನಾಟಕದಲ್ಲೇ 'ವಸತಿ ಕ್ರಾಂತಿ' ಯ ಹೆಸರಿನ ಮುನ್ನುಡಿ ಬರೆಯುವಲ್ಲಿ ಸಫಲವಾಯಿತು!

ಅದುವರೆಗೂ ದಾವಣಗೆರೆ ನಗರಸಭೆಯ ಹಲವಾರು ಜಮೀನುಗಳು ಅರ್ಧ ಶತಮಾನಗಳಿಂದ ಅವರಿವರ ಪಾಲಾಗಿ ಅಕ್ರಮ ಸಾಗುವಳಿದಾರರ ಹಿಡಿತದಲ್ಲಿದ್ದವು. ಅವರಿಂದ ಬಿಡಿಸಿ, ಸಾರ್ವಜನಿಕ ಉದ್ದೇಶಗಳಿಗೆ ಬಳಸುವ ಯಾವ ಪ್ರಯತ್ನಗಳೂ ಅದುವರೆಗೂ ಫಲ ಕಂಡಿರಲಿಲ್ಲ. ಇದು ಗೊತ್ತಾಗಿದ್ದೇ ತಡ ಶಿವರಾಮ್ ರವರ ಜಿಲ್ಲಾಡಳಿತ ಯಾವ ಅಡೆತಡೆ, ವಿರೋಧಗಳಿಲ್ಲದೇ ಆ ಜಮೀನುಗಳನ್ನು ವಶಕ್ಕೆ ಪಡೆದು, ಅಲ್ಲಿ ಬಡವ ಮತ್ತು ಸ್ವಂತ ಸೂರಿಲ್ಲದ ಜನರಿಗೆ ಮನೆ ನಿರ್ಮಾಣ ಮಾಡುವ ಸಾಹಸಕ್ಕೆ ಕೈ ಹಾಕಿ ಯಶಸ್ವಿಯಾದರು ! ಈ ಮರು ವಶಪಡಿಸಿಕೊಂಡ ಜಮೀನುಗಳಲ್ಲೇ ಸುಮಾರು ಮೂರು ಸಹಸ್ರಕ್ಕೂ ಹೆಚ್ಚು ಮನೆಗಳನ್ನು ನಿರ್ಮಿಸಿ, ಆಶ್ರಯ ಸಮಿತಿಯ ಮೂಲಕ ಹಂಚಿ ದಾಖಲೆ ನಿರ್ಮಿಸಲಾಯಿತು.

ಅದಾಗಲೇ ಹಲವಾರು ಕೊಳಚೆ ಪ್ರದೇಶಗಳನ್ನು ಹೊಂದಿದ್ದ ದಾವಣಗೆರೆಯ ಪ್ರದೇಶಗಳಲ್ಲೆಲ್ಲಾ ಪಾದಯಾತ್ರೆ ಮಾಡಿದ ಜಿಲ್ಲಾ ಸಚಿವರು ಮತ್ತು ಜಿಲ್ಲಾಧಿಕಾರಿಗಳ ತಂಡ, ಗುಡಿಸಲು ಮುಕ್ತ ದಾವಣಗೆರೆಯ ತಮ್ಮ ಕನಸುಗಳನ್ನು ಆಯಾ ಪ್ರದೇಶಗಳ ನಿವಾಸಿಗಳ ಜೊತೆ ಹಂಚಿಕೊಂಡು ಹಾಲಿ ವಾಸಿಸುವ ಸ್ಥಳಗಳಲ್ಲೇ ಅವರವರಿಗೆ ನಾಗರಿಕ ಸೌಕರ್ಯಗಳನ್ನು ಮನೆಗಳನ್ನು ಕಟ್ಟಿ ಕೊಡುವ ಕನಸುಗಳನ್ನು ಹಂಚಿಕೊಂಡ ಹಾಗೂ ಅದಕ್ಕೆ ಜನರೂ ಸ್ಪಂದಿಸಿದ ಕಾರಣ ಬಹುತೇಕ ಕೊಳಚೆ ಪ್ರದೇಶಗಳು, ಇಂದು ತಮ್ಮ ಪ್ರದೇಶಗಳ ಹೆಸರಿನ ಜೊತೆ ಇದ್ದ 'ಕೊಳಚೆ' ಯನ್ನು ಕಳೆದು ಕೊಂಡಿರುವುದನ್ನು ಕಾಣಬಹುದು.

ಹೀಗೆ ಹೇಳುತ್ತಾ ಹೋದರೆ ಅದೊಂದು ಪುಸ್ತಕವೇ ಆಗಬಹುದು. 'ಐಎಎಸ್' ಎಂಬ ಪದವಿ, ಭಾರತೀಯರ ಪಾಲಿಗೆ ಅದೊಂದು 'ಬಿಳಿಯಾನೆ'ಯಂತೇ ತೋರುತ್ತದೆ. ಈ ಐಎಎಸ್ ಅಧಿಕಾರಿಗಳು ಒಮ್ಮೊಮ್ಮೆ ತಾವು ಸರ್ವಜ್ಞರಂತೇ ಭಾವಿಸಿರುತ್ತಾರೆ. ತಮಗೆ ತಿಳಿದದ್ದು ಮಾತ್ರ ಸತ್ಯ ಎಂಬಂತೆ ಭಾವಿಸುವುದೂ ಉಂಟು. ಹಾಗಾಗಿ ಸಾಮಾನ್ಯ ಜನರ ಪಾಲಿಗೆ ಇವರು ವಿಶೇಷ ಮಾನವರಂತೇ ಕಾಣುತ್ತಾರೆ. ಆ ಕಾರಣಕ್ಕಾಗಿಯೇ ಸಾಮಾನ್ಯ ಜನ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಎಡ ತಾಕಲೂ ಹಿಂದೆ ಮುಂದೆ ನೋಡುತ್ತಾರೆ. ಅವರ ಪಾಲಿಗೆ ಆ ಕಛೇರಿಯೇ ದಂತ ಗೋಪುರದಂತೆ ಭಾಸವಾಗುತ್ತದೆ.

ಆದರೆ, ಶಿವರಾಮ್ ಸಾಮಾನ್ಯ ಜನರೊಂದಿಗೆ ಸಾಮಾನ್ಯನಂತೆಯೇ ವರ್ತಿಸಿ, ತಾವು ಹುಟ್ಟಿ ಬೆಳೆದ ವರ್ಗದ ಜನರಿಗೆ ನ್ಯಾಯ ಕೊಡುವ ಪ್ರಯತ್ನಗಳನ್ನು ಯಾವ ಹಮ್ಮು - ಬಿಮ್ಮುಗಳಿಗೂ ಅವಕಾಶ ನೀಡದೇ ಮಾಡಿದ್ದಾರೆ. ಮನುಷ್ಯ ಸಹಜ ದೌರ್ಬಲ್ಯಗಳೂ ಇವರಿಗೂ ಇದ್ದು, ಇವುಗಳಲ್ಲಿ ಅವರು ಸಫಲತೇ ಕಾಣಲಾಗಲಿಲ್ಲ. ಅವರ ಸಿನಿಮಾ ಅಭಿನಯದ ಹುಚ್ಚು ಅವರನ್ನು ಪ್ರಶ್ನಾರ್ಥಕ ದಾರಿಗೆ ಕೊಂಡೊಯ್ಯಿತು. ಇನ್ನು ಮತ್ತಷ್ಟು ಸಾಧಿಸಬೇಕೆಂಬ ಅವರ ಕನಸಿನ ದಾರಿ, ರಾಜಕೀಯ ಪ್ರವೇಶ ಒಂದೇ ಎಂದು ನಿರ್ಧಾರಕ್ಕೆ ಬಂದು ಬಿಟ್ಟರು. ಅವರ ಆಸಕ್ತಿಯ ಪಕ್ಷ ಸಹಜವಾಗಿ ಕಾಂಗ್ರೆಸ್ ಆಗಿತ್ತು, ಆದರೆ, ಅಲ್ಲಾಗಲೇ ಸೀಟುಗಳೆಲ್ಲಾ ಭರ್ತಿ ಯಾಗಿದ್ದವು ! ಆದರೆ, ಅಧಿಕಾರದ ಅವಸರ ಅವರನ್ನು ತಾವು ಯಾವುದನ್ನು ಕೋಮುವಾದಿ ಪಕ್ಷ ಅಂದು ಕೊಂಡಿದ್ದರೋ ಅಲ್ಲಿಗೆ ಕರೆದು ಕೊಂಡು ಹೋಯಿತು. ಅಲ್ಲೂ ಅವರೂ ಯಶಸ್ಸು ಕಾಣಲಾಗಲಿಲ್ಲ. ಹತಾಶೆ ಅವರ ಬೆನ್ನು ಹತ್ತಿತು, ರಾಜಕಾರಣದ ಸಾಗರದಲ್ಲಿ ಅವರು ಈಜಲಾಗಲಿಲ್ಲ, ಸೋತರು ಸೋತು ಸುಣ್ಣವಾದರು.

ಈಗ ಅವರು ನಮ್ಮೊಂದಿಗೆ ಇಲ್ಲ. ವಿಧಿ ಅವರನ್ನು ಬಲಿ ತೆಗೆದು ಕೊಂಡಿತು. ಭವಿಷ್ಯದಲ್ಲಿ ಅವರೇನು ಕನಸು ಕಂಡಿದ್ದರೋ ಅವುಗಳಿಗೆ ಪೂರ್ಣ ವಿರಾಮ ಬಿದ್ದಿದೆ. ಅವರು ಜಿಲ್ಲಾಧಿಕಾರಿಯಾಗಿ ಎಲ್ಲೆಲ್ಲಿ ಕಾಲಿಟ್ಟರೋ ಅಲ್ಲೆಲ್ಲಾ ಬಡವರ ಕಣ್ಣೀರು ಒರೆಸಿ, ಆಸರೆಯಾದರು. ಸರ್ಕಾರ ನಮ್ಮ ಪರವಾಗಿಯೂ ಇರಬಲ್ಲದು ಎಂಬುದನ್ನು ಶಿವರಾಮ್ ತೋರಿಸಿಕೊಟ್ಟರು ,ಈಗ ಜವರಾಯನ ತೋಳತೆಕ್ಕೆಯ ಬಂಧಿಯಾದರು ಅವರಿಗೊಂದು ಕೊನೆಯ ಸಲಾಂ.

**- ಇಮ್ತಿಯಾಜ್ ಹುಸೇನ್**, ದಾವಣಗೆರೆ

# ಸನಾತನ ಧರ್ಮ ನಿರ್ಮೂಲನೆ : ತರಾಟೆ

**(1ನೇ ಪುಟದಿಂದ)** ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದುರ್ಬಳಕೆ ಮಾಡಿಕೊಂಡ ನಂತರ ಕೋರ್ಟ್‌ಗೆ ಬಂದಿರುವುದೇಕೆ? ಎಂದು ಪ್ರಶ್ನಿಸಿತು.

ಸಚಿವ ಸ್ಥಾನದಲ್ಲಿರುವ ಸ್ಟಾಲಿನ್, ತಾವು ನೀಡುವ ಹೇಳಿಕೆಗಳಿಂದ ಆಗುವ ಪರಿಣಾಮಗಳ ಬಗ್ಗೆ ಎಚ್ಚರಿಕೆ ವಹಿಸಬೇಕು. ಸ್ಟಾಲಿನ್ ಸಂವಿಧಾನದಲ್ಲಿ ನೀಡಲಾಗಿ ರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದುರ್ಬಳಕೆ ಮಾಡಿಕೊಂ ಡಿರುವುದಾಗಿ ನ್ಯಾಯಾಲಯ ಆಕ್ಷೇಪಿಸಿತು. ಈಗ ಸುಪ್ರೀಂ ಕೋರ್ಟ್‌ನಲ್ಲಿ ನೇರವಾಗಿ ಅರ್ಜಿ ದಾಖಲಿಸುವ ಸಂವಿಧಾನದ 32ನೇ ವಿಧಿ ಹಕ್ಕನ್ನು ಬಳಸಿಕೊಳ್ಳಲು ಮುಂದೆ ಬರ ಲಾಗಿದೆ. ಆಡಿರುವ ಮಾತುಗಳ ಪರಿಣಾಮ ತಿಳಿದಿಲ್ಲವೇ? ಸ್ಟಾಲಿನ್ ಏನೂ ಸಾಮಾನ್ಯ ವ್ಯಕ್ತಿಯಲ್ಲ. ಸಚಿವ ಸ್ಥಾನದಲ್ಲಿರುವವರಿಗೆ, ಮಾತುಗಳ ಪರಿಣಾಮ ತಿಳಿದಿರಬೇಕು ಎಂದು ನ್ಯಾಯಾಲಯ ಹೇಳಿದೆ. ನ್ಯಾಯಾ ಲಯ ವಿಚಾರಣೆಯನ್ನು ಮಾರ್ಚ್ 15ಕ್ಕೆ ಮುಂದೂಡಿದೆ.

ತಮಿಳುನಾಡಿನ ಸಚಿವ ಉದಯನಿಧಿ ಸ್ಟಾಲಿನ್ ಸೆಪ್ಟೆಂಬರ್ 2023ರಲ್ಲಿ ಸಮಾವೇಶ ವೊಂದರಲ್ಲಿ ಮಾತನಾಡುತ್ತಾ ಸನಾತನ ಧರ್ಮವನ್ನು ರೋಗಗಳಿಗೆ ಹೋಲಿಸಿ ನಿರ್ಮೂಲನೆ ಮಾಡಬೇಕು ಎಂದಿದ್ದರು.

ಸ್ಟಾಲಿನ್ ಪರವಾಗಿ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, ನನ್ನ ಕಕ್ಷಿದಾರನ ಹೇಳಿಕೆಗಳನ್ನು ಸಮರ್ಥಿಸಿಕೊಳ್ಳುತ್ತಿಲ್ಲ. ಆರು ರಾಜ್ಯಗಳಲ್ಲಿ ದಾಖಲಿಸಿರುವ ಅರ್ಜಿಗಳನ್ನು ಒಗ್ಗೂಡಿಸುವಂತೆ ಕೇಳುತ್ತಿದ್ದೇನೆ ಎಂದರು.

ಈ ಬಗ್ಗೆ ಸಂಬಂಧಿಸಿದ ಹೈಕೋರ್ಟ್‌ಗಳ ಮೊರೆ ಹೋಗುವಂತೆ ಸುಪ್ರೀಂ ಕೋರ್ಟ್ ನಂತರ ತಿಳಿಸಿತು. ಪತ್ರಕರ್ತ ಅರ್ನಬ್ ಗೋಸ್ವಾಮಿ, ಬಿಜೆಪಿಯ ನೂಪುರ್ ಶರ್ಮಾ ಮತ್ತಿತರರ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ಆದೇಶ ಹೊರಡಿಸುವ ಮೂಲಕ ಎಫ್.ಐ.ಆರ್. ವಿಲೀನಗೊಳಿಸಿದ್ದನ್ನು ಸಿಂಘ್ವಿ ಪ್ರಸ್ತಾಪಿಸಿ ದರು. ವಿವಿಧೆಡೆ ದಾಖಲಿಸಿರುವ ಎಫ್.ಐ.ಆರ್.ಗಳಲ್ಲಿ ಆಗಿರುವ ಪ್ರಗತಿ ಹಾಗೂ ಆದೇಶಗಳನ್ನು ಪರಿಶೀಲಿಸಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದಿರುವ ಸುಪ್ರೀಂ ಕೋರ್ಟ್, ವಿಚಾರಣೆಯನ್ನು ಮಾರ್ಚ್ 15ಕ್ಕೆ ನಿಗದಿ ಪಡಿಸಿದೆ.

# ಸಾಬೀತುಪಡಿಸಿದರೆ ರಾಜಕೀಯ ನಿವೃತ್ತಿ

**(1ನೇ ಪುಟದಿಂದ)** ನಂತೆ 4 ಸಾವಿರ ಕೋಟಿ ರೂ. ಕಾಮಗಾರಿ ಗುತ್ತಿಗೆ ನೀಡಲು ಲೋಕೋಪಯೋಗಿ ಸಚಿವರಿಗೆ ಸೂಚಿಸಿದ್ದೇನೆ ಎಂದು ಹೇಳಿದರು.

ಗುತ್ತಿಗೆದಾರರ ಬಾಕಿ ಮೊತ್ತವನ್ನು ಹಂತ ಹಂತವಾಗಿ ಪೂರ್ತಿ ಪಾವತಿಸಲಾಗುವುದು. ನಿಮ್ಮ ಸಲಹೆಯಂತೆ ಪ್ಯಾಕೇಜ್ ಪದ್ಧತಿ ರದ್ದು ಪಡಿಸುವ ಕುರಿತೂ ಚಿಂತನೆ ನಡೆದಿದೆ ಎಂದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಉಪ ಮುಖ್ಯಮಂತ್ರಿ ಶಿವಕುಮಾರ್ ಅವರು, ಯಾವುದೇ ಸರ್ಕಾರ ಬಂದರೂ ನೀವು ರಾಜಕೀಯದವರ ಸಹವಾಸ ಮಾಡಬೇಡಿ ಎಂದರು. ನೀವು ಹತ್ತು ಹಲವು ಬೇಡಿಕೆ ಇಟ್ಟಿದ್ದೀರಿ. ಲೋಕಸಭಾ ಚುನಾವಣೆ ನಂತರ ನಿಮ್ಮ ಬೇಡಿಕೆ ಬಗ್ಗೆ ಸರ್ಕಾರ ಗಮನ ಹರಿಸುತ್ತದೆ. ನೀವು ಹೆದರಬೇಡಿ, ಮುಂದಿನ 9 ವರ್ಷಗಳ ಕಾಲ ಕರ್ನಾಟಕದಲ್ಲಿ ನಮ್ಮದೇ ಆಡಳಿತ ಎಂದು ಭವಿಷ್ಯ ನುಡಿದಿದ್ದಾರೆ.

ಈ ಬಾರಿ ಅಭಿವೃದ್ಧಿಗಾಗಿಯೇ 1.20 ಲಕ್ಷ ಕೋಟಿ ಹಣ ಮೀಸಲಿಟ್ಟಿದ್ದೇವೆ, ಆ ಹಣದಲ್ಲಿ ನಿಮ್ಮ ಬಹುತೇಕ ಬೇಡಿಕೆಗಳು ಈಡೇರುತ್ತವೆ. ಕೇಂದ್ರ ಸರ್ಕಾರ ನಮಗೆ ನೀಡಬೇಕಾದ ಹಣವನ್ನು ಕಾಲಾನುಕಾಲಕ್ಕೆ ನೀಡಿದ್ದರೆ ಇಂತಹ ಸಂಕಷ್ಟ ನಿಮಗೂ, ನಮಗೂ ಬರುತ್ತಿರಲಿಲ್ಲ ಎಂದಿದ್ದಾರೆ.

## ಅರುಣಾಚಲ : ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಬಿಜೆಪಿಗೆ

ಇಟಾನಗರ, ಮಾ. 4 – ಅರುಣಾಚಲ ಪ್ರದೇಶದ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಲೊಂಬೊ ಟಯೆಂಗ್ ಅವರು ಆಡಳಿತಾರೂಢ ಬಿಜೆಪಿಗೆ ಸೇರಿದ್ದಾರೆ.

ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಬೆನ್ನಲ್ಲೇ ಈ ಬೆಳವಣಿಗೆಯಾಗಿದೆ. 2019ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನಾಲ್ಕು ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಕಳೆದ ವಾರ ಶಾಸಕರಾದ ನಿನೊಂಗ್ ಎರಿಂಗ್ ಹಾಗೂ ವಾಂಗ್ಲಿನ್ ಲೊವಾಂಗ್ಡಾಂಗ್ ಬಿಜೆಪಿಗೆ ಸೇರಿದ್ದರು. ಈಗ ಕಾಂಗ್ರೆಸ್‌ನಲ್ಲಿ ಮಾಜಿ ಮುಖ್ಯಮಂತ್ರಿ ಹಾಗೂ ಶಾಸಕ ನಬಮ್ ಟುಕಿ ಮಾತ್ರ ಉಳಿದುಕೊಂಡಿದ್ದಾರೆ.

# ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ

**(1ನೇ ಪುಟದಿಂದ)** ಕಾಲೇಜಿಗೂ ಸಿಬ್ಬಂದಿಗಳ ನೇಮಕಕ್ಕೆ ಕ್ರಮ ವಹಿಸಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಮಾರ್ಚ್ ತಿಂಗಳ ನಂತರ ನಾನು, ನೀವೆಲ್ಲ ಆಡಳಿತ ಮಂಡಳಿಯವರೂ ಸೇರಿಕೊಂಡು, ಸಚಿವ ಡಾ.ಮಹದೇವಪ್ಪಗೆ ಭೇಟಿ ಮಾಡಿ, ಹೆಚ್ಚು ಅನುದಾನವನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸೋಣ. ಈ ಶಾಲೆಯ ಸಮಗ್ರ ಅಭಿವೃದ್ಧಿಗೆ ತಮ್ಮ ಸಲಹೆ, ಸಹಕಾರ ಸದಾ ಇದ್ದೇ ಇರುತ್ತದೆ ಎಂದು ಭರವಸೆ ನೀಡಿದರು.

ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ಅಧ್ಯಕ್ಷ ಎಲ್.ಎಂ. ಹನುಮಂತಪ್ಪ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವ ಮಲ್ಲಿಕಾರ್ಜುನ್ ಅವರು ಒದಗಿಸಿರುವ 92 ಲಕ್ಷ ರೂ. ಅನುದಾನದಲ್ಲಿ ಹಾಸ್ಟೆಲ್‌ಗೆ ಅಡುಗೆ ಮನೆ, ಭೋಜನಾಲಯ ಹಾಗೂ ಐದು ಕೊಠಡಿ ನಿರ್ಮಿಸಲಾಗುವುದು ಎಂದರು.

1934ರಲ್ಲಿ ಮಹಾತ್ಮ ಗಾಂಧೀಜಿ ಅವರು ದಾವಣಗೆರೆಗೆ ಆಗಮಿಸಿದ್ದಾಗ ಸಮಾಜದ ಮುಖಂಡರು ನಮ್ಮ ಜನಾಂಗದ ಹಾಸ್ಟೆಲ್‌ಗೆ ಜಾಗ ಕೊಡಿಸುವಂತೆ ಮನವಿ ಮಾಡಿದ್ದರು. ಆಗ ಗಾಂಧೀಜಿ ಅವರು ಜಾಗ ಕೊಡಿಸಿ, ಶಂಕುಸ್ಥಾಪನೆ ನೆರವೇರಿಸಿದ್ದು. ಈಗ ಇಲ್ಲಿ ಪಿಯು ಕಾಲೇಜು, ಎಂಜಿಎಂಆರ್ ಪ್ರೌಢಶಾಲೆ, ಎಂಜಿಎಂ ಹಿರಿಯ ಪ್ರಾಥಮಿಕ ಶಾಲೆ, ಆದಿ ಕರ್ನಾಟಕ ವಿದ್ಯಾರ್ಥಿ ನಿಲಯ, ಪ್ಯಾರಾ ಮೆಡಿಕಲ್ ಕಾಲೇಜು ನಡೆಯುತ್ತಿದ್ದು, 250ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ ಎಂದು ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ಕಾರ್ಯದರ್ಶಿ ಬಿ. ಎಚ್. ವೀರಭದ್ರಪ್ಪ ಮಾಹಿತಿ ನೀಡಿದರು.

ಪಾಲಿಕೆ ಸದಸ್ಯರಾದ ಎ. ನಾಗರಾಜ್, ಗಡಿಗುಡಾಳ್ ಮಂಜುನಾಥ್, ಬಿ.ಎಂ. ರಾಮಸ್ವಾಮಿ, ಕೆ. ಚಂದ್ರಣ್ಣ, ಬಿ.ಎಂ. ಈಶ್ವರ್, ಎಲ್.ಎಂ.ಎಚ್. ಸಾಗರ್ ಇತರರಿದ್ದರು.

# ಶಾಸಕರು, ಸಂಸದರ ಲಂಚಕ್ಕಿಲ್ಲ ವಿನಾಯಿತಿ : ಸುಪ್ರೀಂ ತೀರ್ಪು

**(1ನೇ ಪುಟದಿಂದ)** ಮೂಲ ಉದ್ದೇಶವೇ ನಾಶವಾಗುತ್ತದೆ ಎಂದು ಪೀಠ ಹೇಳಿದೆ. ತೀರ್ಪು ನೀಡಿದ ಪೀಠದಲ್ಲಿ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ, ಎಂ.ಎಂ. ಸುಂದರೇಶ್, ಪಿ.ಎಸ್. ನರಸಿಂಹ, ಜೆ.ಬಿ. ಪರ್ಡಿವಾಲ, ಸಂಜಯ್ ಕುಮಾರ್ ಹಾಗೂ ಮನೋಜ್ ಮಿಶ್ರ ಅವರಿದ್ದಾರೆ.

135 ಪುಟಗಳ ತೀರ್ಪು ನೀಡಿರುವ ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್, ಸದನದಲ್ಲಿ ಮಾತು ಇಲ್ಲವೇ ಮತದಾನಕ್ಕೆ ಸಂಬಂಧಿಸಿದಂತೆ ಭ್ರಷ್ಟಾಚಾರ ಪ್ರಕರಣದಿಂದ ವಿನಾಯಿತಿ ಇದೆ ಎಂದು ಶಾಸಕರು ಹಾಗೂ ಸಂಸದರು ಹೇಳಲಾಗದು ಎಂದಿದ್ದಾರೆ.

ಈ ರೀತಿ ಹೇಳುವುದು ಸದನದ ಕಾರ್ಯನಿರ್ವಹಣೆ ಹಾಗೂ ಜನಪ್ರತಿನಿಧಿಗಳ ಕಾರ್ಯನಿರ್ವಹಣೆ ಎರಡರ ಮೇಲೂ ಪರಿಣಾಮ ಬೀರುತ್ತದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯ ಪಟ್ಟಿದೆ.

ಪಿ.ವಿ. ನರಸಿಂಹ ರಾವ್ ಹಾಗೂ ಸಿ.ಬಿ.ಐ. ನಡುವಿನ ಪ್ರಕರಣಕ್ಕೆ ಸಂಬಂಧಿಸಿದಂತೆ 1998ರಲ್ಲಿ ಐವರು ಸದಸ್ಯರ ಸುಪ್ರೀಂ ಕೋರ್ಟ್ ಪೀಠ ಒಡಕಿನ ತೀರ್ಪು ನೀಡಿ, ಲಂಚ ಪಡೆದ ಶಾಸಕರು ಹಾಗೂ ಸಂಸದರಿಗೆ ಕಾನೂನು ಕ್ರಮದಿಂದ ವಿನಾಯಿತಿ ಇದೆ ಎಂದು ತಿಳಿಸಿತ್ತು. ಈ ಪ್ರಕರಣವು ಜೆ.ಎಂ.ಎಂ. ಲಂಚ ಹಗರಣ ಎಂದೇ ಹೆಸರಾಗಿತ್ತು.


**ಸೈಟುಗಳು ಮಾರಾಟಕ್ಕಿವೆ**
ಪೈಲ್ವಾನ್ ಚನ್ನಬಸಪ್ಪ ಲೇಔಟ್‌ನಲ್ಲಿ 30x60 (East) 60 ಅಡಿ ರಸ್ತೆಗೆ, ಶಿವಕುಮಾರ ಬಡಾವಣೆ 30x40 ಪೂರ್ವ, ಬನಶಂಕರಿ ಬಡಾವಣೆ 40x60 ಪೂರ್ವ, 30x50 ಪೂರ್ವ, ಶಿವ-ಪಾರ್ವತಿ ಲೇಔಟ್ 30x40 ಪಶ್ಚಿಮ, ಆಂಜನೇಯ ಬಡಾವಣೆ 30x40 ದಕ್ಷಿಣ.
95385 65909

**ಸೈಟುಗಳು ಮಾರಾಟಕ್ಕಿವೆ**
ಬೈಪಾಸ್ ರೋಡ್ (KHB ಕಾಲೋನಿ ಪಕ್ಕ) ಜಡ್ಜ್ ಕ್ವಾಟರ್ಸ್ ಪಕ್ಕ) ಸರ್ವೀಸ್ ರೋಡ್‌ಗೆ ಉತ್ತರ 35x35 (ಐದು ಸೈಟುಗಳು) ದಕ್ಷಿಣ 35x35 (ಐದು ಸೈಟುಗಳು), ಸರ್ಕಾರಿ ನೌಕರರ ಬಡಾವಣೆ ಪಕ್ಕದ ಬಡಾವಣೆ ಪೂರ್ವ 30x40
ಐಗೂರು ವಿಜಯಕುಮಾರ್
99457 02495

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 North, 120 ಅಡಿ ರೋಡಿಗಿದೆ, 50x80 East, 50x80 West, 50x80, 50x80 North ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಕುರಿಗಳು ಮಾರಾಟಕ್ಕಿವೆ**
ಶ್ರೀ ಮಾರುತಿ ಕುರಿ ಸಾಕಾಣಿಕೆ ಕೇಂದ್ರ
ನಮ್ಮಲ್ಲಿ ಉತ್ತಮವಾಗಿ ಸಾಕಿದ ಆರೋಗ್ಯಕರ ನಾಟಿ ಟಗರುಗಳು ಸಿಗುತ್ತವೆ. ದಾವಣಗೆರೆಯಿಂದ ಕೇವಲ 4 ಕಿ.ಮೀ. ಐಗೂರು ರಸ್ತೆ.
ಸಂಪರ್ಕಿಸಿ 70196 02944

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ ಸಂಭ್ರಮ ಹೋಟೆಲ್ ಹಿಂಭಾಗ 30x40 ಪಶ್ಚಿಮ, 30x57 ಪೂರ್ವ ಅಕ್ಕ-ಪಕ್ಕ, ಶಿವ-ಪಾರ್ವತಿ ಬಡಾವಣೆಯಲ್ಲಿ 30x50 ಪಶ್ಚಿಮ, 30x40 ಪಶ್ಚಿಮ ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಬಾಡಿಗೆಗಿದೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಿರುವ ಸಿಂಗಲ್ ಬೆಡ್‌ರೂಮ್‌ನ ಸುಸಜ್ಜಿತ ವಾಸದ ಮನೆ ಬಾಡಿಗೆಗೆ ದೊರೆಯಲಿದೆ. ಹಾಲ್, ಕಿಚನ್, ಅಟ್ಯಾಚ್ಡ್ ಬಾತ್ ರೂಮ್, ಜನರಲ್ ಟಾಯ್ಲೆಟ್, ವಾಹನ ನಿಲುಗಡೆಗೆ ಸಾಕಷ್ಟು ಸ್ಥಳಾವಕಾಶ ಹಾಗೂ ಕಿಚನ್ ಗಾರ್ಡನ್ ಮಾಡುವ ಸೌಲಭ್ಯ, ಕಾರ್ಪೊರೇಷನ್ ವಾಟರ್, ಬೋರ್‌ವೆಲ್ ನೀರಿನ ಅನುಕೂಲ ಇರುತ್ತದೆ.
99801 38966, 91360 30888

**WANTED**
Applications are invited for the post of Audit Assistant
1. Number of Vancancies : 2
2. Minimum Qualification : Any Graduation with Computer knoweldge.
Shankar & Co.
Auditor & Practitioner
Amaravathi Colony, HARIHARA.
81975 70094

**ಬಾಡಿಗೆಗೆ ಮನೆಗಳು ದೊರೆಯುತ್ತವೆ**
ಸಿದ್ದವೀರಪ್ಪ ಬಡಾವಣೆಯಲ್ಲಿ ಎಸ್.ಎಸ್. 'ಎ' ಬ್ಲಾಕ್, ಸರಸ್ವತಿ ಬಡಾವಣೆಯಲ್ಲಿ ಸಿಂಗಲ್ ಬೆಡ್ ರೂಮ್, ಡಬಲ್ ಬೆಡ್ ರೂಮ್, ಮೂರು ಬೆಡ್ ರೂಮ್.
ದಕ್ಷಿತ ಐನಳ್ಳಿ ಏಜೆಂಟ್
77955 06795

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ನಾಟಿ ಕೋಳಿ ಮೊಟ್ಟೆ ದೊರೆಯುತ್ತದೆ**
ಬೇಕಾದಲ್ಲಿ ಸಂಪರ್ಕಿಸಿ :
ಮೊ. 83105-91159

**ಶ್ರೀ ಗೃಹಶೋಭೆ GRB ಲಕ್ಷ್ಮಿ ಕೂಪನ್**
ಅರ್ಜುನ್ ಎಂಟರ್ ಪ್ರೈಸಸ್, ದಾವಣಗೆರೆ
9986660660
1ನೇ ಲಕ್ಕಿ ನಂ. 197
2ನೇ ಲಕ್ಕಿ ನಂ. 226
3ನೇ ಲಕ್ಕಿ ನಂ. 034
4ನೇ ಲಕ್ಕಿ ನಂ. 082
5ನೇ ಲಕ್ಕಿ ನಂ. 086
ಸಮಾಧಾನಕರ ಲಕ್ಕಿ ನಂ. 172
ಲಕ್ಕಿ ನಂ. 064

**Document Lost**
I, C.P. Onkarachary resident of Chiradoni Village, Channagiri Taluk, Davangere District have lost Trust related RBI Documents when travelling from Thyavanagi to Davangere on 28.02.2024. If anybody found this docuement requtested to
contact : 9739884734


**ಹೋಟೆಲ್‌ನಲ್ಲಿ ಲೇಡಿ ಕ್ಯಾಷಿಯರ್ ಬೇಕಾಗಿದ್ದಾರೆ**
ಬೆಳಿಗ್ಗೆ 9.30 ರಿಂದ ಸಂಜೆ 6.00ರವರೆಗೆ ರೊಟ್ಟಿ, ಚಪಾತಿ, ಹೋಳಿಗೆ, ಮಾಡಲು ಕೆಲಸಗಾರರು ಬೇಕಾಗಿದ್ದಾರೆ.
99012 36631

ಶ್ರೀ ದುಗ್ಗಮ್ಮದೇವಿ ಪ್ರಸನ್ನ
**ಟಗರು ಮಾರಾಟಕ್ಕಿದೆ**
ನೇರ ರೈತರಿಂದ ಮಾರಾಟ 2 ಹಲ್ಲು, 4 ಹಲ್ಲಿನ ಟಗರುಗಳು ಸಿಗುತ್ತವೆ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ.
80883 67539, 97390 63544

**ಬೇಕಾಗಿದ್ದಾರೆ**
ಆನಗೋಡು ಸಮೀಪ NH-48 ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನ 20KL ಟ್ಯಾಂಕರ್ ಲಾರಿಗೆ HAZARD LICENCE ಇರುವ ಟ್ಯಾಂಕರ್ ಲಾರಿ ಚಾಲಕರು ಬೇಕಾಗಿದ್ದಾರೆ. ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸಿ :
90082 28222, 63606 11836

**ಸೈಟು ಮಾರಾಟಕ್ಕಿದೆ**
KHB ಲೇಔಟ್‌ನಲ್ಲಿ 50×80 ಪಶ್ಚಿಮ ಹಾಗೂ ಡಾಲರ್ಸ್ ಕಾಲೋನಿಯಲ್ಲಿ (ಎರಡು 30×40 ಸೈಟ್ ಸೇರಿ ಒಟ್ಟು 3060 Sqft ಇರುವ) ಈಶಾನ್ಯ ಬೆಳೆದಿರುವ ದಕ್ಷಿಣ ಪಶ್ಚಿಮ ದಿಕ್ಕಿನ ಕಾರ್ನರ್ ಸೈಟ್ ಮಾರಾಟಕ್ಕಿರುತ್ತದೆ. (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
ನೇರವಾಗಿ ಸೈಟ್ ಓನರ್‌ಗೆ ಸಂಪರ್ಕಿಸಿ.
63621 81509

ಕರ್ನಾಟಕ ಸರ್ಕಾರ
**ತಹಶೀಲ್ದಾರ್‌ರವರ ಕಾರ್ಯಾಲಯ, ಚನ್ನಗಿರಿ ತಾಲ್ಲೂಕು, ಚನ್ನಗಿರಿ**
ದೂ.ಸಂಖ್ಯೆ:229845 ಇ–ಮೇಲ್:- tahasildarchng@gmail.com
ನಂ. ಸಿ.ಎ.ಎಲ್.ಸಿ.ಆರ್/122/2023–24 ದಿನಾಂಕ: 29.02.2024
**ಟೆಂಡರ್ ಪ್ರಕಟಣೆ**
2023–24ನೇ ಸಾಲಿಗೆ ಚನ್ನಗಿರಿ ತಾಲ್ಲೂಕನ್ನು ಬರಪೀಡಿತ ಎಂದು ಘೋಷಣೆ ಮಾಡಲಾಗಿದ್ದು ಮುಂಬರುವ ದಿನಗಳಲ್ಲಿ ಸಾರ್ವಜನಿಕರಿಗೆ ಹಾಗೂ ದನಕರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಕಂಡುಬರಬಹುದೆಂದು ಅಂದಾಜಿಸಲಾಗಿರುವ 50 ಗ್ರಾಮಗಳಲ್ಲಿ ಬೇಡಿಕೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಖಾಸಗಿ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲು ಅತ್ಯವಶ್ಯವಾಗಿರುತ್ತದೆ, ಸದರಿ ವಿಷಯದ ಕುರಿತು Mobile App Based Water Tanker Management System ಎಂಬ ತಂತ್ರಾಂಶದ ಮೂಲಕ ಶುದ್ಧ ಕುಡಿಯುವ ನೀರು ಟ್ಯಾಂಕರ್ ಮುಖಾಂತರ ಸರಬರಾಜು ಮಾಡಲು ಸರಬರಾಜುದಾರರನ್ನು ನಿಗಧಿಪಡಿಸಲು ಸ್ಥಳೀಯವಾಗಿ ದರಪಟ್ಟಿಗಳನ್ನು ಷರತ್ತುಗೊಳಪಡಿಸಿ ಅಹ್ವಾನಿಸಲಾಗಿದೆ.
(1) ಟೆಂಡರ್ ದಿನಾಂಕ: 01.03.2024 (2) ಭರ್ತಿ ಮಾಡಿದ ಮುಚ್ಚಿದ ಲಕೋಟೆಯಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 11–03–2024 ಸಂಜೆ 5.00 ಗಂಟೆಗೆ. (3) ಲಕೋಟೆಯನ್ನು ತೆರೆಯುವ ಸ್ಥಳ:– ತಾಲ್ಲೂಕು ಕಛೇರಿ ಚನ್ನಗಿರಿ ಮತ್ತು ದಿನಾಂಕ: 12–03–2024 ಬೆಳಿಗ್ಗೆ 11.00 ಗಂಟೆಗೆ. (3) ಟೆಂಡರ್ ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ:– ರೂ. 10,000/– ಡಿ.ಡಿ. ಮೂಲಕ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ತೆಗೆಯುವುದು. (4) ಕೆ.ಟಿ.ಟಿಪಿ ಕಾಯ್ದೆಯನ್ವಯ ನಿಯಮಾನುಸಾರ ನಿಗದಿಪಡಿಸಲಾದ ಮೊತ್ತ ರೂ. 5,00,000/–
ವಾಸಾಇ/ದಾವಣಗೆರೆ/672/ ಕೆಎಸ್‌ಎಂಸಿಎ/2023–24
ಸಹಿ/– ತಹಶೀಲ್ದಾರ್ ಚನ್ನಗಿರಿ ತಾಲ್ಲೂಕು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಿಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ಪಾರ್ಟ್ ಟೈಮ್ ಕೆಲಸಕ್ಕೆ**
(ಕೇವಲ 6 ಗಂಟೆ ಕೆಲಸ ಮಧ್ಯಾಹ್ನ 12 ರಿಂದ ಸಂಜೆ 6 ರವರೆಗೆ) ಸೇಲ್ಸ್ ಗರ್ಲ್ಸ್, ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ.
ಮೆಟ್ರಿಕ್ಸ್ ಹೋಮ್ ಅಪ್ಲೈಯನ್ಸ್
ಚೌಕಿಪೇಟೆ, ಜೈನ್ ದೇವಸ್ಥಾನದ ಹತ್ತಿರ, ದಾವಣಗೆರೆ
91642 91800

**ಮನೆ ಮಾರಾಟಕ್ಕಿದೆ**
ಸ್ವಾಮಿ ವಿವೇಕಾನಂದ ಬಡಾವಣೆ, 5ನೇ ಕ್ರಾಸ್, 60x50 ಅಂದರೆ 3000 ಚದುರ ಅಡಿ ವಿಸ್ತೀರ್ಣದ 4 ಬೆಡ್‌ರೂಮ್ ಹಾಗೂ ಡುಪ್ಲೆಕ್ಸ್ ವಿಲ್ಲಾ ಮನೆ ಮಾರಾಟಕ್ಕಿದೆ. ಆಸಕ್ತರು ಕೂಡಲೇ ನೇರವಾಗಿ ಸಂಪರ್ಕಿಸಿ :
98804 36414

**ವಧು ಬೇಕಾಗಿದೆ**
31 ವರ್ಷ ಜಂಗಮ, ಮೆಡಿಕಲ್ ರೆಪ್ರಿಸೆಂಟೇಟಿವ್ ವರನಿಗೆ ಜಂಗಮ, ಅಥವಾ ಪಂಚಮಸಾಲಿ/ ಲಿಂಗಾಯತ ಜಾತಿಯ ವಧು ಬೇಕಾಗಿದೆ.
99644 34359

**ತಕ್ಷಣ ಬೇಕಾಗಿದ್ದರೆ**
ದಾವಣಗೆರೆಯಲ್ಲಿ ಹೋಟೆಲ್‌ನಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಊಟ, ವಸತಿ, ಆಕರ್ಷಕ ಸಂಬಳವಿರುತ್ತದೆ
GN ಸೆಕ್ಯೂರಿಟಿ ಸರ್ವೀಸ್
89047 67479

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಹೆಸರು ಬದಲಾವಣೆ**
ಗಣೇಶ ಕೆ.ಬಿನ್ ಕರಿಬಸಪ್ಪ ವಯಸ್ಸು 32 ವರ್ಷ, ಕತ್ತಲಗೆರೆ ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ ವಾಸಿಯಾದ ನಾನು ಹೇಳುವುದೇನೆಂದರೆ ನನ್ನ ಮಗಳಾದ ಕುಮಾರಿ ವರ್ಷಿಣಿ ಜಿ.ಕೆ. ವಯಸ್ಸು 5 ವರ್ಷ ಇವಳ ಹೆಸರನ್ನು ವರ್ಷಿಣಿ ಜಿ.ಕೆ. ಎಂದು ನಾಮಕರಣ ಮಾಡಿರುತ್ತೇನೆ. ಆದರೆ ಇತ್ತೀಚೆಗೆ ಅವಳಿಗೆ ಸದರಿ ಹೆಸರು ಬಲ ಬಾರದೇ ಇರುವುದರಿಂದ ದಿನಾಂಕ 04.03.2024ರಂದು ದಾವಣಗೆರೆ ನೋಟರಿಯವರ ಸಮ್ಮುಖದಲ್ಲಿ ಮನಸ್ವಿನಿ ಜಿ.ಕೆ. ಎಂದು ಹೆಸರನ್ನು ಬದಲಾಯಿಸಿಕೊಂಡಿರುತ್ತೇನೆ. ಇನ್ನೂ ಮುಂದೆ ಎಲ್ಲಾ ದಾಖಲೆಗಳು ವಿದ್ಯಾಭ್ಯಾಸ ಹಾಗು ಎಲ್ಲಾ ವ್ಯವಹಾರಗಳು ಮನಸ್ವಿನಿ ಜಿ.ಕೆ. ಹೆಸರಿನಲ್ಲಿ ವ್ಯವಹರಿಸುತ್ತೇನೆ. - ಮನಸ್ವಿನಿ ಜಿ.ಕೆ.

**ಮನೆ ಲೀಸ್‌ಗೆ ಬೇಕಾಗಿದೆ**
ಪೂರ್ವ ಪ್ರಾಥಮಿಕ ಶಾಲೆಯನ್ನು ನಡೆಸಲು ಸಿದ್ದವೀರಪ್ಪ ಬಡಾವಣೆ, ಆಂಜನೇಯ ಬಡಾವಣೆ, ಎಂಸಿಸಿ ಬಿ ಬ್ಲಾಕ್, ವಿದ್ಯಾನಗರದಲ್ಲಿ ಡ್ಯೂಪ್ಲೆಕ್ಸ್ (3 ಬೆಡ್ ರೂಂ) ಇಂಡಿಪೆಂಡೆಂಟ್, ಗಾರ್ಡನ್ ಮನೆ ಲೀಸ್‌ಗೆ ಬೇಕಾಗಿದೆ. ಲೇಡಿ ಟೀಚರ್ಸ್ ಬೇಕಾಗಿದ್ದಾರೆ. ಬಿ.ಎ., ಬಿಎಸ್ಸಿ., ಬಿ.ಕಾಂ., PUC ಆಗಿರುವವರು ಬೇಕಾಗಿದ್ದಾರೆ.
97433 62802

**ಕೂಡಲೇ ಬೇಕಾಗಿದ್ದಾರೆ**
ಬಾಯ್ಸ್ ವಾರ್ಡನ್ MSc,B.Ed, ಅಥವಾ M.Ed ಕಾಲೇಜಿನಲ್ಲಿ ಸೈನ್ಸ್ ಹಾಗೂ ಕಲಾ ವಿಭಾಗದ ಉಪನ್ಯಾಸಕರು ವಾರ್ಡನ್ ಪೋಸ್ಟ್ ಹಾಗೂ ಪದವಿ ಪೂರ್ವ ಉಪನ್ಯಾಸಕರಾಗಿ ನೇಮಕ ಮಾಡಿಕೊಳ್ಳುತ್ತಿದ್ದೇವೆ. ಕೂಡಲೇ ಸಂಪರ್ಕಿಸಿ MES ಪದವಿ ಪೂರ್ವ ಕಾಲೇಜ್ ಆಂಜನೇಯ ಬಡಾವಣೆ, ದಾವಣಗೆರೆ.
98804 36414

**REQUIRED**
Sales executive, sales manager, A1 financial solutions is corporate loan DSA candidate should have knowledge about loans all loans Requirement PUC, Any Degree.
81978 66327, 70191 48466

**ಶ್ರೀ ಗುರು ಕರಿಸಿದ್ದೇಶ್ವರ ಸ್ವಾಮಿ ಮಠದ ಅಭಿವೃದ್ಧಿ ಸೇವಾ ಸಮಿತಿ (ರಿ) ಶ್ಯಾಗಲೆ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ**
ನೋಂದಣಿ ಸಂಖ್ಯೆ : ಡಿವಿಜಿ / ಎಸ್.ಓ.ಆರ್ / 103 / 2009-10
ಈ ಮೂಲಕ ಸಾರ್ವಜನಿಕರು ಮತ್ತು ಈ ನಮ್ಮ ಸಂಘದ ಎಲ್ಲಾ ಸದಸ್ಯರುಗಳಿಗೆ ತಿಳಿಯಪಡಿಸುವುದೇನೆಂದರೆ, ಈ ಮೇಲ್ಕಂಡ ನಮ್ಮ ಸಂಘವು 2009-10ನೇ ಸಾಲಿನಲ್ಲಿ ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳವರ ಕಛೇರಿಯಲ್ಲಿ ಎಸ್.ಓ.ಆರ್. ನಂ. 103 / 2009-10ರ ಪ್ರಕಾರ ನೋಂದಣಿಯಾಗಿರುತ್ತದೆ. ನಮ್ಮ ಸಂಘದ 2016-17 ರಿಂದ 2022-23ನೇ ಸಾಲುಗಳವರೆಗಿನ ವಾರ್ಷಿಕ ದಾಖಲೆಗಳನ್ನು ಅಂದರೆ ಸರ್ವ ಸದಸ್ಯರ ಸಭೆಯ ಸಭಾ ಸೂಚನೆಗಳು, ಸಭಾ ನಡಾವಳಿಕೆಗಳು, ಕಾರ್ಯಕಾರಿ ಸಮಿತಿ ಪಟ್ಟಿಗಳು ಮತ್ತು ಲೆಕ್ಕಪರಿಶೋಧನಾ ವರದಿಗಳು ಹಾಗೂ ಹಣಕಾಸು ತಃಖ್ತೆಗಳನ್ನು ಕಾರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960 ಕಲಂ 13ರಲ್ಲಿನ ನಿಯಮಗಳಂತೆ ದಾಖಲಿಸಲು ಸಹಕಾರ ಸಂಘಗಳ ಉಪ ನಿಬಂಧಕರು/ಸಂಘಗಳ ನೋಂದಣಾಧಿಕಾರಿಗಳು, ಕೊಠಡಿ ಸಂಖ್ಯೆ : 52 ಜಿಲ್ಲಾಡಳಿತ ಸಂಕೀರ್ಣ, ಕರೂರು ಇಂಡಸ್ಟ್ರೀಯಲ್ ಏರಿಯಾ, ಪಿ.ಬಿ. ರಸ್ತೆ, ದಾವಣಗೆರೆ ಇವರಿಗೆ ಸಲ್ಲಿಸಿರುತ್ತೇವೆ. ಈ ಲೆಕ್ಕಪತ್ರಗಳ ದಾಖಲೆಗಳ ಪ್ರತಿಗಳನ್ನು ಸರ್ವ ಸದಸ್ಯರ ಅವಗಾಹನೆಗೆ ಸಂಸ್ಥೆಯ ಕಛೇರಿಯಲ್ಲಿ ಇಡಲಾಗಿದೆ. ಕಛೇರಿಯ ಸಮಯದಲ್ಲಿ ಮಾನ್ಯ ಸದಸ್ಯರುಗಳು ಅವಲೋಕಿಸಬಹುದಾಗಿದೆ. ಈ ವಿಷಯದ ಬಗ್ಗೆ ತಮ್ಮಗಳ ಯಾವುದೇ ತಕರಾರು ಅಥವಾ ಆಕ್ಷೇಪಣೆಗಳು ಇದ್ದಲ್ಲಿ, ಈ ಪ್ರಕಟನೆಯ ದಿನಾಂಕದಿಂದ ಏಳು ದಿನಗಳ ಒಳಗಾಗಿ ಈ ನಮ್ಮ ಸಂಘದ ಕಛೇರಿಗೆ ಆಗಲೀ ಅಥವಾ ಸಹಕಾರ ಸಂಘಗಳ ಉಪ ನಿಬಂಧಕರು / ಸಂಘಗಳ ನೋಂದಣಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರಿಗೆ ಮೇಲ್ಕಂಡ ಅವರ ಕಛೇರಿಯಲ್ಲಿ ಲಿಖಿತ ಮೂಲಕ ಸಲ್ಲಿಸಬೇಕೆಂದು ಕೋರಲಾಗಿದೆ.
ಶ್ರೀ ಗುರು ಕರಿಸಿದ್ದೇಶ್ವರ ಸ್ವಾಮಿ ಮಠದ ಅಭಿವೃದ್ಧಿ ಸೇವಾ ಸಮಿತಿ (ರಿ)
ಪರವಾಗಿ, ಷಣ್ಮುಖಪ್ಪ, ಎ.
ಕಾರ್ಯದರ್ಶಿ , ಮೊ : 97435 91443

**ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ**
ನಂ.1 ವಶೀಕರಣ ಸ್ಪೆಷಲಿಸ್ಟ್
ನೀವು ಇಷ್ಟಪಟ್ಟವರು ನಿಮ್ಮಂತಾಗಲು ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ , ನಿಮ್ಮ ಯಾವುದೇ ಸಮಸ್ಯೆಗಳನ್ನು 100% ಪರಿಹಾರ ಮಾಡುತ್ತಾರೆ. ಗಾಂಧಿ ಸರ್ಕಲ್, ಆಹಾರ 2000, ದಾವಣಗೆರೆ.
89716 99826

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.6.3.2024ರ ಬುಧವಾರ
ದಿ.7.3.2024ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**TUITIONS**
IGCSE, ICSE, CBSE and State Board from class 5th to 12th MCC A Block
98444 92888

**ಮನೆ ಬಾಡಿಗೆಗಿದೆ**
ಗ್ರೌಂಡ್ ಫ್ಲೋರ್, 2 BHK, ಫುಲ್ ಫರ್ನಿಶ್ಡ್, ಪೂರ್ವ ದಿಕ್ಕಿನ ಬಾಗಿಲು, ಸೋಲಾರ್ ಸೌಲಭ್ಯವಿದೆ. 4ನೇ ಮೇನ್, 6ನೇ ಕ್ರಾಸ್, ಜೆ.ಸಿ. ಬಡಾವಣೆ, ಹರಿಹರ.
80501 63846

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**Use Summer Holidays Effectively**
Kids Summer Computer Education
Learn Computer Basics, MS-Office & Internet
IATM Computers
2nd main, Akkamahadevi Samaja Complex, PJ Exten, 6th Cross, Ram & Co. Circle, Davangere.
Call for more Information
98867 63469, 90367 19573

# ನಾಡಿನ ಯುವ ಶಿವಾಚಾರ್ಯರಿಗೆ ಮಾರ್ಗದರ್ಶಕರಾಗಿದ್ದ ಸದ್ಯೋಜಾತ ಶ್ರೀ

## ಶ್ರೀ ಸದ್ಯೋಜಾತ ಶಿವಾಚಾರ್ಯರ ಸ್ಮರಣೋತ್ಸವದಲ್ಲಿ ಹೊನ್ನಾಳಿ ಹಿರೇಕಲ್ಮಠದ ಶ್ರೀ ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಮೆಚ್ಚುಗೆ

ದಾವಣಗೆರೆ, ಮಾ. 4- ಸರಳ, ಸಜ್ಜನಿಕೆಯ ಸಾಕಾರಮೂರ್ತಿಯಾಗಿದ್ದ ನಗರದ ಹಿರೇಮಠದ ಲಿಂ. ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿಯವರು ನಾಡಿನ ಯುವ ಶಿವಾಚಾರ್ಯರಿಗೆ ಉತ್ಸಾಹ, ಪ್ರೋತ್ಸಾಹ ತುಂಬುವ ಮೂಲಕ ಶಿವಾಚಾರ್ಯರು ಹೇಗಿರಬೇಕೆಂಬುದರ ಬಗ್ಗೆ ಸದಾ ಮಾರ್ಗದರ್ಶನ ನೀಡುತ್ತಾ ಬಂದವರಾಗಿದ್ದರು ಎಂದು ಹೊನ್ನಾಳಿ ಹಿರೇಕಲ್ಮಠದ ಶ್ರೀ ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.



ನಗರದ ಡಾ. ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿ ಹಿರೇಮಠದ ಆವರಣದಲ್ಲಿ ಹಿರೇಮಠದ ವಂಶಸ್ಥರು ಇಂದು ಸಂಜೆ ಹಮ್ಮಿಕೊಂಡಿದ್ದ ಅಖಿಲ ಭಾರತ ಶಿವಾಚಾರ್ಯ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷರೂ, ದಾವಣಗೆರೆ ಹಿರೇಮಠದ ಪೀಠಾಧ್ಯಕ್ಷರೂ ಆಗಿದ್ದ ಡಾ. ಶ್ರೀ ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿಯವರ 16 ನೇ ಸಂಸ್ಮರಣೋತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಸದ್ಯೋಜಾತ ಶ್ರೀಗಳು ಭಕ್ತರಿಗೆ ಧರ್ಮ ಪ್ರಚಾರಕರಾಗಿ, ಉತ್ತಮ ವಿದ್ಯಾ ಗುರುಗಳಾಗಿ, ಶಿವಾಚಾರ್ಯರಿಗೆ ಸನ್ಮತಿಯ ಮಾರ್ಗದರ್ಶಕರಾಗಿದ್ದರು. ಬದುಕಿನ ಪಯಣದಲ್ಲಿ ಪ್ರಗತಿಪರ ಚಿಂತನೆ ಮಾಡಿಕೊಂಡು ಬಂದಿದ್ದರು ಎಂದು ಶ್ರೀಗಳ ಗುಣಗಾನ ಮಾಡಿದರು.

ಅಖಿಲ ಭಾರತ ಶಿವಾಚಾರ್ಯ ಸಂಸ್ಥೆ ಸ್ಥಾಪನೆ ಮಾಡುವ ಮೂಲಕ ದಾವಣಗೆರೆಯಲ್ಲಿ ಪ್ರಥಮ ಬಾರಿಗೆ ನಾಡಿನ ಎಲ್ಲಾ ಪ್ರಾಂತದ ಶಿವಾಚಾರ್ಯರನ್ನು ಆಮಂತ್ರಿಸಿ, ಬೃಹತ್ ಅಧಿವೇಶನ ಮಾಡಿದ ಕೀರ್ತಿ ಸದ್ಯೋಜಾತ ಶ್ರೀಗಳಿಗೆ ಸಲ್ಲುತ್ತದೆ ಎಂದರು.

ಸಮಾಜಕ್ಕೆ ಏನು ಬೇಕಾಗಿತ್ತೋ ಅದನ್ನು ಕೊಡುವುದರ ಜೊತೆಗೆ ಬದುಕನ್ನು ಬಂದ ಹಾಗೆಯೇ ಸ್ವೀಕರಿಸಿದ ಗುರುಗಳು. ಎಲ್ಲಾ ರೀತಿಯ ವಿಚಾರಧಾರೆಗಳನ್ನು ಭಕ್ತರೊಂದಿಗೆ ಹಂಚಿಕೊಂಡವರು ಸದ್ಯೋಜಾತ ಶ್ರೀಗಳು. ಇಂತಹ ಪೂಜ್ಯರ ಸ್ಮರಣೆ ಅತ್ಯವಶ್ಯ ಎಂದು ಹೇಳಿದರು.

ಮಹಾತ್ಮರ ಸ್ಮರಣೆ ಮಾಡುವುದರಿಂದ ಮನುಷ್ಯನ ಜೀವನದಲ್ಲಿ ಆಯುಷ್ಯ, ಕೀರ್ತಿ, ಯಶಸ್ಸು, ಬಲ ಎಂಬ ನಾಲ್ಕು ರೀತಿಯ ಫಲಗಳು ಲಭಿಸುತ್ತವೆ. ಅದರಂತೆ ಸಮಾಜದಲ್ಲಿ ಗುರು-ಹಿರಿಯರನ್ನು, ತಂದೆ-ತಾಯಿಗಳನ್ನು ಸ್ಮರಿಸುವ ಸಂಪ್ರದಾಯ ನಡೆದುಕೊಂಡು ಬಂದಿದೆ ಎಂದರು.

ಜವಳಿ ವರ್ತಕ ಬಿ.ಸಿ. ಉಮಾಪತಿ ಮಾತನಾಡಿ, ಸದ್ಯೋಜಾತ ಸ್ವಾಮೀಜಿಯವರು ಕೇವಲ ಸ್ವಾಮಿಗಳಾಗಿರದೇ, ಕಾಯಕ ಜೀವಿಯಾಗಿ, ಉತ್ತಮ ಬೋಧಕರಾಗಿ, ಧಾರ್ಮಿಕ ಪ್ರಚಾರಕರಾಗಿ ಜೀವನದುದ್ದಕ್ಕೂ ಸೇವಾ ಕಾರ್ಯಗಳನ್ನು ಮಾಡುತ್ತಾ ಬಂದಿದ್ದಾರೆಂದು ಹೇಳಿದರು.

ಶ್ರೀಗಳ ಧರ್ಮ ಕಾರ್ಯಗಳನ್ನು ಪಾಲಿಸುತ್ತಾ ಬಂದಿದ್ದ ನಾಡಿನ ಶಿವಾಚಾರ್ಯರಿಗೆ ದಾವಣಗೆರೆ ಹಿರೇಮಠ ತವರು ಮನೆಯಂತಿತ್ತು. ಯುವ ಜನರಿಗೆ ಧರ್ಮ ಬೋಧನೆ ಮಾಡುತ್ತಾ ಬಂದವರು. ಸಮಾಜ ಸೇವಾ ಕಾರ್ಯಗಳು ಶ್ಲಾಘನೀಯ ಎಂದರು.

ಇಂದಿನ ಯುವ ಜನತೆ ಧಾರ್ಮಿಕ ವಿಚಾರಗಳಿಂದ ದೂರ ಉಳಿಯುತ್ತಿರುವುದು ಬೇಸರದ ಸಂಗತಿಯಾಗಿದೆ. ಯುವಕರಿಂದ ಸ್ಮರಿಸುವಂತಹ ಕೆಲಸಗಳು ಆಗುತ್ತಿಲ್ಲ. ಕೇವಲ ಓದಿಗೆ ಸೀಮಿತರಾಗಿದ್ದಾರೆ. ನಾನು ಡಾಕ್ಟರ್, ಇಂಜಿನಿಯರ್ ಆಗಬೇಕೆಂಬ ಕನಸು ಕಾಣುತ್ತಾರೆ. ಸಂಸ್ಕಾರವನ್ನು ಮರೆಯುತ್ತಾರೆ. ಮನೆಯಲ್ಲಿ ಮೊದಲು ಮಕ್ಕಳಿಗೆ ಓದಿನ ಜೊತೆಗೆ ಸಂಸ್ಕಾರವನ್ನು ಕಲಿಸಬೇಕಾಗಿದೆ ಎಂದು ಕರೆ ನೀಡಿದರು.

ಎಡೆಯೂರು ಕ್ಷೇತ್ರದ ಶ್ರೀ ರೇಣುಕ ಶಿವಾಚಾರ್ಯ ಸ್ವಾಮೀಜಿ, ರಟ್ಟಿಹಳ್ಳಿ ಕಂಬಿಣಕಂಥಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ದಾವಣಗೆರೆ ವಿವಿ ಕನ್ನಡ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಹೆಚ್.ಜಿ. ವಿಜಯಕುಮಾರ್ 'ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು' ಕುರಿತು ಉಪನ್ಯಾಸ ನೀಡಿದರು.

ಹರಿಹರದ ಕೆ.ವೈ. ಸೃಷ್ಠಿ, ನಮಿತ, ಮಲ್ಲಿಕಾರ್ಜುನ್ ಇವರು ಮನೋಜ್ಞವಾದ ಯೋಗ ನೃತ್ಯ ಪ್ರದರ್ಶಿಸಿ ಪ್ರೇಕ್ಷಕರ ಗಮನ ಸೆಳೆದರು. ಎಸ್. ಅರ್ಚನಾ ನಿರೂಪಿಸಿದರು. ಡಾ. ಸ್ವಾಮಿ ತ್ರಿಭುವಾನಂದ ಸ್ವಾಗತಿಸಿದರು.

ಶ್ರೀಮತಿ ವಿಜಯ ಹಿರೇಮಠ, ವಾಸವಿ ಯುವತಿಯರ ಭಜನಾ ಮಂಡಳಿಯ ಡಿ.ಆರ್. ಕೃಷ್ಣವೇಣಿ ಸಂಗಡಿಗರು ಹಾಗೂ ಶ್ರೀ ಗುರು ಪಂಚಾಕ್ಷರ ಸಂಗೀತ ವಿದ್ಯಾಲಯದ ವಿದ್ಯಾರ್ಥಿ ವೃಂದದವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

# ರಾಮಲಿಂಗೇಶ್ವರ ಮಹಾಸ್ವಾಮಿಗಳ ಮುಳ್ಳುಗದ್ದಿಗೆ, ಅಡ್ಡ ಪಲ್ಲಕ್ಕಿ ಉತ್ಸವ

ಚನ್ನಗಿರಿ ತಾಲ್ಲೂಕಿನ ತ್ಯಾವಣಿಗೆ ಸಮೀಪದ ಹರನಹಳ್ಳಿ - ಕೆಂಗಾಪುರ ಶ್ರೀ ರಾಮಲಿಂಗೇಶ್ವರ ಮಠದಲ್ಲಿ ಇಂದಿನಿಂದ ಇದೇ ದಿನಾಂಕ 10 ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ.

ಇಂದು ಬೆಳಿಗ್ಗೆ 10 ಗಂಟೆಗೆ ದಾಸೋಹದ ಅಕ್ಕಿ ರಾಶಿ ಪೂಜೆ, ರಾತ್ರಿ 10 ಕ್ಕೆ ಡೊಳ್ಳು ಕುಣಿತ, ಕೀಲು ಕುದುರೆ ಕುಣಿತ, ಭಜನೆ, ಕೋಲು ಮೇಳ, ಸಕಲ ಭಕ್ತಾದಿಗಳೊಂದಿಗೆ ವಿಜೃಂಭಣೆಯಿಂದ ಶ್ರೀ ರಾಮಲಿಂಗೇಶ್ವರ ಮಹಾಸ್ವಾಮಿಯ ಒಳಮಠದಿಂದ ಹೊರ ಮಠಕ್ಕೆ ಉತ್ಸವ ಹೊರಡುವುದು ಹಾಗೂ ಕುಂಭಾಭಿಷೇಕ ನಡೆಯಲಿದೆ .

ದಿನಾಂಕ 8 ರಂದು ಶುಕ್ರವಾರ ಬೆಳಗ್ಗೆ 8 ಗಂಟೆಗೆ ಬ್ರಹ್ಮಮಾಲೆ ಗುರು ದೀಕ್ಷೆ, ಸಂಜೆ 5 ಗಂಟೆಗೆ ನಾಗದುಗ್ಗಳ ಕಾರ್ಯಕ್ರಮ, ಅಥಣಿ ತಾಲ್ಲೂಕಿನ ಶ್ರೀ ರಾಮಲಿಂಗೇಶ್ವರ ಕಲಾ ತಂಡದಿಂದ ಸಂಗೀತ ಕಾರ್ಯಕ್ರಮ ಹಾಗೂ ಶ್ರೀ ರಾಮಲಿಂಗೇಶ್ವರ ವಿದ್ಯಾ ಸಂಸ್ಥೆಯ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ದಿನಾಂಕ 9 ರ ಶನಿವಾರ ಬೆಳಿಗ್ಗೆ 6 ಗಂಟೆಗೆ ಶ್ರೀ ಸಮರ್ಥ ಸದ್ಗುರು ಶ್ರೀ ರಾಮಲಿಂಗೇಶ್ವರ ಮಹಾಸ್ವಾಮಿಗಳ 48 ನೇ ವರ್ಷದ ಮುಳ್ಳು ಗದ್ದಿಗೆ ಉತ್ಸವ, ಉಚಿತ ಸಾಮೂಹಿಕ ವಿವಾಹ, ಜವಳ, ಸಂಜೆ 7 ಗಂಟೆಗೆ ಶ್ರೀಗಳ ಅಡ್ಡ ಪಲ್ಲಕ್ಕಿ ಉತ್ಸವ ನೆರವೇರಲಿವೆ. ಅಂದಿನ ಕಾರ್ಯಕ್ರಮವನ್ನು ಮಾಜಿ ಲೋಕಸಭಾ ಸದಸ್ಯ ವಿ ಎಸ್ ಉಗ್ರಪ್ಪ ಉದ್ಘಾಟಿಸುವರು.

ದಿನಾಂಕ 10 ರ ಭಾನುವಾರ ಬೆಳಿಗ್ಗೆ 8 ಗಂಟೆಗೆ ಶ್ರೀಗಳ ಆಶೀರ್ವಚನ, 9 ಗಂಟೆಗೆ ಅಮಾವಾಸ್ಯೆ ಪ್ರಯುಕ್ತ ಅಗ್ನಿಹೋಮ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 9606297544 ಅಥವಾ 9845409510.

# ಚಂಡೀಘಡ : ಉಪ ಮೇಯರ್ ಚುನಾವಣೆಯಲ್ಲಿ ಬಿಜೆಪಿಗೆ ಗೆಲುವು

ಚಂಡೀಘಡ, ಮಾ. 4 - ಚಂಡೀಘಡದ ನಗರ ಪಾಲಿಕೆಯ ಹಿರಿಯ ಉಪ ಮೇಯರ್ ಹಾಗೂ ಉಪ ಮೇಯರ್ ಸ್ಥಾನಗಳಿಗೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ.

ಹಿರಿಯ ಉಪ ಮೇಯರ್ ಸ್ಥಾನಕ್ಕೆ ಬಿಜೆಪಿಯ ಕುಲ್ಜೀತ್ ಸಂಧು ಆಯ್ಕೆಯಾಗಿದ್ದಾರೆ. ಸಂಧು ಪರವಾಗಿ 19 ಹಾಗೂ ಅವರ ವಿರುದ್ಧ ಸ್ಪರ್ಧಿಸಿದ್ದ ಕಾಂಗ್ರೆಸ್‌ನ ಗುರ್‌ಪ್ರೀತ್ ಗಬಿ ಅವರಿಗೆ 16 ಮತಗಳು ದೊರೆತಿವೆ. ಒಂದು ಮತ ಅಸಿಂಧುವಾಗಿದೆ.

ಉಪ ಮೇಯರ್ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಿಜೆಪಿಯ ರಾಜಿಂದರ್ ಶರ್ಮ ಅವರು ಕಾಂಗ್ರೆಸ್ ನಿರ್ಮಲಾ ದೇವಿ ಅವರನ್ನು ಪರಾಭವಗೊಳಿಸಿದ್ದಾರೆ.

35 ಸದಸ್ಯರ ಪಾಲಿಕೆಯಲ್ಲಿ ಬಿಜೆಪಿ 17 ಸದಸ್ಯರನ್ನು ಹೊಂದಿದೆ. ಆಮ್ ಆದ್ಮಿ ಪಾರ್ಟಿಯ ಮೂವರು ಕೌನ್ಸಿಲರ್‌ಗಳು ಫೆಬ್ರವರಿ 19ರಂದು ಪಕ್ಷಾಂತರ ಮಾಡಿದ್ದರು. ಆಮ್ ಆದ್ಮಿ ಪಾರ್ಟಿ 10, ಕಾಂಗ್ರೆಸ್ ಏಳು, ಶಿರೋಮಣಿ ಅಕಾಲಿ ದಳ ಒಬ್ಬರು ಕೌನ್ಸಿಲರ್‌ಗಳನ್ನು ಹೊಂದಿದೆ.

ಈ ಹಿಂದೆ ಮೇಯರ್ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವು ಸಾಧಿಸಿದ್ದರು. ಚುನಾವಣಾ ಅಧಿಕಾರಿ ಲೋಪ ಎಸಗಿದ್ದಾರೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ನಂತರ ಆಮ್ ಆದ್ಮಿ ಪಾರ್ಟಿಯ ಕುಲ್ದೀಪ್ ಕುಮಾರ್ ನೂತನ ಮೇಯರ್ ಆಗಿ ಆಯ್ಕೆಯಾಗಿದ್ದರು.

ಉಪ ಮೇಯರ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಆಮ್ ಆದ್ಮಿ ಪಾರ್ಟಿ ಬೆಂಬಲ ನೀಡಿತ್ತು.

# ಹೆಚ್ಚುತ್ತಿರುವ ಧರ್ಮ ಕಲಹ : ಲೋಕೇಶ್ ಒಡೆಯರ್ ವಿಷಾದ

## ಜಿಲ್ಲಾ ಶರಣ ಸಾಹಿತ್ಯ ಪರಿಷತ್ ವತಿಯಿಂದ ಎಂ. ಎಂ. ಶಿಕ್ಷಣ ಮಹಾವಿದ್ಯಾಲಯದಲ್ಲಿ ದತ್ತಿ ಕಾರ್ಯಕ್ರಮ

ದಾವಣಗೆರೆ, ಮಾ. 4 - ಜಿಲ್ಲಾ ಶರಣ ಸಾಹಿತ್ಯ ಪರಿಷತ್ ವತಿಯಿಂದ ಲಿಂ. ಚಂದ್ರಮ್ಮ ಮತ್ತು ಲಿಂ. ಮಠದ ಗುರುಸಿದ್ಧಯ್ಯ ಮಲ್ಲಿಗೆರೆ, ಲಿಂ. ಮಠದ ಗೌರಮ್ಮ ಮತ್ತು ಲಿಂ. ಮಠದ ಸಿದ್ದಬಸಯ್ಯ ದಾಸಿ ಕಟ್ಟೆ, ಲಿಂ. ಪಾರ್ವತಮ್ಮ, ಲಿಂ. ಚೆನ್ನಮ್ಮ, ಲಿಂ. ಶಂಕರಮ್ಮ ಮತ್ತು ಲಿಂ. ಮಠದ ಪಂಚಾಕ್ಷರಯ್ಯ ಇವರ ದತ್ತಿ ಕಾರ್ಯಕ್ರಮವನ್ನು ಎಂ.ಎಂ. ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಎಂಎಂ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಕೆ.ಟಿ. ನಾಗರಾಜ ನಾಯ್ಕ್ ನೆರವೇರಿಸಿದರು.



'ಶರಣರ ದೃಷ್ಟಿಯಲ್ಲಿ ಜೀವನ ಮೌಲ್ಯಗಳು' ವಿಷಯದ ಮೇಲೆ ಅನುಭಾವ ನೀಡಿದ ಸಿರಿಗೆರೆಯ ಎಂಬಿಆರ್ ಕಾಲೇಜಿನ ನಿವೃತ್ತ ಪ್ರಾಚಾರ್ಯ ಡಾ. ನಾ.ಲೋಕೇಶ್ ಒಡೆಯರ್, ಪ್ರಸ್ತುತ ದೇಶದಲ್ಲಿ ಧರ್ಮ ಕಲಹಗಳು ಹೆಚ್ಚಾಗಿವೆ. ಆದರೆ ಶರಣರು ಅಂದೇ ಜಾತಿ ಪದ್ಧತಿಯನ್ನು ವಿರೋಧಿಸಿದ್ದರು ಎಂದರು.

ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಶರಣರ ವಚನಗಳ ತಿರುಳನ್ನು ಅಳವಡಿಸಿಕೊಳ್ಳುವ ಮೂಲಕ ಉತ್ತಮ ಪ್ರಜೆಗಳಾಗಬೇಕು ಎಂದು ಕರೆ ಕೊಟ್ಟರು.

ಜಿ.ಎಂ. ಕುಮಾರಸ್ವಾಮಿ ಅವರು ದತ್ತಿದಾನಿಗಳ ಪರಿಚಯ ಮಾಡಿಕೊಟ್ಟರು. ದತ್ತಿದಾನಿಗಳಾದ ಎಂ. ಈಶ್ವರ್ ಶರ್ಮ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ವಹಿಸಿಕೊಂಡಿದ್ದರು.

ಪ್ರಮೀಳಾ ನಟರಾಜ್, ಎಂ. ಪರಮೇಶ್ವರಪ್ಪ ಸಿರಿಗೆರೆ, ಎಸ್ .ಬಿ. ರುದ್ರಗೌಡ ಗೋಪನಾಳ್ ಉಪಸ್ಥಿತರಿದ್ದರು.

ಬಿ.ಟಿ. ಪ್ರಕಾಶ್ ವಚನ ಪ್ರಾರ್ಥನೆ ಮಾಡಿದರು. ಡಾ. ಟಿ. ಹಾಲೇಶಪ್ಪ ಸ್ವಾಗತಿಸಿದರೆ, ಪ್ರಶಿಕ್ಷಣಾರ್ಥಿ ಜೆ. ಅಂಜಲಿ ವಂದಿಸಿದರು. ಪ್ರಶಿಕ್ಷಣಾರ್ಥಿ ಸಂಗೀತ ಹುಳಗುಂಡಿ ನಿರೂಪಿಸಿದರು.

# ವೊಡ್ಡಿನಹಳ್ಳಿಯಲ್ಲಿ ಶಾಲಾ ಕೊಠಡಿ ಸಂಸದ ಸಿದ್ದೇಶ್ವರರಿಂದ ಲೋಕಾರ್ಪಣೆ



ಹರಪನಹಳ್ಳಿ, ಮಾ. 4- ತಾಲ್ಲೂಕಿನ ವೊಡ್ಡಿನಹಳ್ಳಿ ಗ್ರಾಮದಲ್ಲಿ ಸಂಸದರ ಪ್ರ ದೇ ಶಾ ಭಿ ವೃ ದ್ಧಿ ಯೋಜನೆಯಡಿಯಲ್ಲಿ 10 ಲಕ್ಷ ರೂ. ಅನುದಾನದಲ್ಲಿ ನಿರ್ಮಿಸಲಾದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕೊಠಡಿಯನ್ನು ಸಂಸದ ಜಿ.ಎಂ. ಸಿದ್ದೇಶ್ವರ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಪ್ರತಿಭಾ, ಉಪಾಧ್ಯಕ್ಷೆ ರೇಖಾ, ಮುಖಂಡರಾದ ಮಹಾಬಲೇಶ್ವರಗೌಡ್ರು, ಗ್ರಾ.ಪಂ. ಮಾಜಿ ಅಧ್ಯಕ್ಷೆ ಉಮಾ ಎಸ್.ಎಸ್. ಮಂಜುನಾಥ್ ವೊಡ್ಡಿನಹಳ್ಳಿ, ಪಿ. ಲಿಂಗೇಶ್, ಡಿ. ಕರಿಬಸಪ್ಪ, ಅಂಗಡಿ ಪ್ರಕಾಶ್, ಪರಶುರಾಮ್, ತಿಮ್ಮಣ್ಣ, ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ವಿಜಯ್ ಕುಮಾರ್, ಸದಸ್ಯರು, ಶಾಲಾ ಸಿಬ್ಬಂದಿ ಉಪಸ್ಥಿತರಿದ್ದರು.

# ಮೈಲಾರಲಿಂಗೇಶ್ವರ ಸ್ವಾಮಿಯ ಪರವು



ಮಲೇಬೆನ್ನೂರು, ಮಾ. 4- ಪಟ್ಟಣದ ಜಿಗಳಿ ರಸ್ತೆಯಲ್ಲಿರುವ ಮೈಲಾರ ಲಿಂಗೇಶ್ವರ ಶಿಬಾರಕಟ್ಟೆ ಸೇವಾ ಸಮಿತಿ ಆಶ್ರಯದಲ್ಲಿ ಮೈಲಾರಲಿಂಗೇಶ್ವರ ಸ್ವಾಮಿ ಹಾಗೂ ಗಂಗಮಾಳಮ್ಮ ದೇವರುಗಳ ಪ್ರಾಣ ಪ್ರತಿಷ್ಠಾಪನೆಯಾಗಿ 14 ವರ್ಷಗಳು ತುಂಬಿದ ಪ್ರಯುಕ್ತ ಮೈಲಾರಲಿಂಗೇಶ್ವರ ಸ್ವಾಮಿಯ ಪರವು ಭಾನುವಾರ ಸಂಭ್ರಮದಿಂದ ಜರುಗಿತು. ಬೆಳಗ್ಗೆ ಗಂಗಾಪೂಜೆ, ಭಂಡಾರ ಅರ್ಚನೆ, ಅಭಿಷೇಕ, ಮಹಾ ಮಂಗಳಾರತಿ, ಚಾಟಿ ಸೇವೆ, ಪವಾಡ, ಗೊರವಯ್ಯ ಮತ್ತು ಗೊರವಮ್ಮನವರಿಗೆ ಪಡ್ಲಿಗೆ ತುಂಬಿಸುವ ಕಾರ್ಯ ನೆರವೇರಿತು. ಚಾಟಿ ಗೊರವಯ್ಯನವರಿಂದ ಚಾಟಿ ಸೇವೆ ನಡೆಯಿತು. ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

# ವಿಠಲ ರುಖುಮಾಯಿ ಶಿಲಾ ಮೂರ್ತಿಗಳ ಪ್ರತಿಷ್ಠಾಪನೆಯ 46ನೇ ವಾರ್ಷಿಕೋತ್ಸವ

ಶ್ರೀ ಭಾವಸಾರ ಕ್ಷತ್ರಿಯ ದೈವ ಮಂಡಳಿ (ರಿ.ನಂ.7) ಯ ಭಜನಾ ಮಂಡಳಿ ವತಿಯಿಂದ ಮಹಾರಾಜ ಪೇಟೆಯ ಶ್ರೀ ವಿಟ್ಠಲ ಮಂದಿರದಲ್ಲಿ ಶ್ರೀ ವಿಟ್ಠಲ ರುಖುಮಾಯಿ ಶಿಲಾ ಮೂರ್ತಿಗಳ ಪ್ರತಿಷ್ಠಾಪನೆಯ 46ನೇ ವಾರ್ಷಿಕೋತ್ಸವ ಕಾರ್ಯಕ್ರಮ ಆರಂಭವಾಗಿದೆ.

ಇದೇ ಸಂದರ್ಭದಲ್ಲಿ ಶಿವರಾತ್ರಿ ಮಹೋತ್ಸವ ಮತ್ತು ಶ್ರೀ ಗೀತ ಜ್ಞಾನೇಶ್ವರಿ ಗ್ರಂಥ ಪಾರಾಯಣ ಸಪ್ತಾಹ ಕೂಡಾ ಏರ್ಪಾಡಾಗಿದೆ ಎಂದು ದೈವ ಮಂಡಳಿ ಅಧ್ಯಕ್ಷ ಎಂ.ಎನ್. ರಘು ಮುಸಳೆ ತಿಳಿಸಿದ್ದಾರೆ. ಈ ಕಾರ್ಯಕ್ರಮ ಗಳು ಈಗಾಗಲೇ ಮೊನ್ನೆ ದಿನಾಂಕ 1 ರಿಂದ ಆರಂಭವಾಗಿದ್ದು, ಇದೇ ದಿನಾಂಕ 9 ರವರೆಗೆ ಜರುಗಲಿದೆ. ಪ್ರತಿದಿನ ಮುಂಜಾನೆ 5.30ಕ್ಕೆ ಕಾಕಡಾರತಿ, ಭಜನೆ, ಬೆಳಿಗ್ಗೆ 7ಕ್ಕೆ ಶ್ರೀ ಜ್ಞಾನೇಶ್ವರಿ ಸಾಮೂಹಿಕ ಪಾರಾಯಣ, ಬೆಳಿಗ್ಗೆ 9ಕ್ಕೆ ನಾಮಜಪ, ರಾತ್ರಿ 8.30ಕ್ಕೆ ದುರ್ಗಾ ಮಹಿಳಾ ಮಂಡಳಿಯಿಂದ ನೃತ್ಯ, ರಾತ್ರಿ 10ಕ್ಕೆ ಹ.ಭ.ಪ. ಮನು ಮಹಾರಾಜ್ ಶಿವೂರಕರ್ ಪಂಡರಾಪುರ ಇವರಿಂದ ಕೀರ್ತನೆ ಆಯೋಜನೆ ಗೊಂಡಿದೆ.



ದಿನಾಂಕ 8ರ ಶುಕ್ರವಾರ ಶಿವರಾತ್ರಿಯ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯಲಿದ್ದು, ಸಂಜೆ 5ಕ್ಕೆ ರುಖುಮಾಯಿ ಮಹಿಳಾ ಮಂಡಳಿಯಿಂದ ಭಜನೆ, ಸಂಜೆ 6ಕ್ಕೆ ಕಲಾವತಿ ಮಹಿಳಾ ಮಂಡಳಿಯಿಂದ ಶಿವನಾಮ ಸ್ತೋತ್ರ, ರಾತ್ರಿ 8ಕ್ಕೆ ತರುಣಾ ಮಂಡಳ ಯೋಗ ಕೇಂದ್ರದಿಂದ ಮಕ್ಕಳ ಮನೋರಂಜನೆಯ ಕಾರ್ಯಕ್ರಮಗಳು ಜರುಗಲಿವೆ.

ದಿನಾಂಕ 9ರ ಶನಿವಾರ ಬೆಳಿಗ್ಗೆ 8ಕ್ಕೆ ಜ್ಞಾನೇಶ್ವರಿ ಪಾರಾಯಣ ಮುಕ್ತಾಯ ಸಮಾರಂಭ, ಬೆಳಿಗ್ಗೆ 9.30ಕ್ಕೆ ಶ್ರೀ ವಿಠಲ ರುಕ್ಮಾಯಿ ದೇವರ ರಥೋತ್ಸವ, ಮಹಿಳಾ ಮಂಡಳಿಯಿಂದ ಕುಂಭಾಭಿಷೇಕ, ಭಜನೆಯೊಂದಿಗೆ ರಾಜಬೀದಿಗಳಲ್ಲಿ ಉತ್ಸವ ನಡೆಯಲಿದೆ.

ಮಧ್ಯಾಹ್ನ 1ಕ್ಕೆ ಶ್ರೀ ಸಂತ ಪೂಜೆ, ಮಧ್ಯಾಹ್ನ 1.15ಕ್ಕೆ ವಿಶೇಷ ಪಾವುಲ ಭಜನೆ, ಮಧ್ಯಾಹ್ನ 2ಕ್ಕೆ ಶ್ರೀ ಸಂತ ಸಮಾರಾಧನೆಯೊಂದಿಗೆ ಕಾರ್ಯಕ್ರಮ ಸಮಾರೋಪಗೊಳ್ಳಲಿದೆ.

# ನಗರ ದೇವತೆಗಳ ಜಾತ್ರೆ : ಇಂದು ಜಿಲ್ಲಾಧಿಕಾರಿ ಸಭೆ

ನಗರ ದೇವತೆ ಶ್ರೀದುರ್ಗಾಂಬಿಕಾ ದೇವಿ ಮತ್ತು ವಿನೋಬನಗರದ ಶ್ರೀ ಚೌಡೇಶ್ವರಿ ದೇವಿ ಜಾತ್ರೆಯ ಪ್ರಯುಕ್ತ ಜಾತ್ರೆಯ ಅವಧಿಯಲ್ಲಿ ಆಗಮಿಸುವ ಭಕ್ತಾಧಿಗಳಿಗೆ ಒದಗಿಸಬೇಕಾದ ಸೌಲಭ್ಯಗಳು ಮತ್ತು ತೆಗೆದುಕೊಳ್ಳಬೇಕಾದ ಮುಂಜಾಗ್ರತ ಸಿದ್ದತೆಗಳ ಬಗ್ಗೆ ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಅವರ ಅಧ್ಯಕ್ಷತೆಯಲ್ಲಿ ಇಂದು ಸಂಜೆ 6 ಗಂಟೆಗೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದ ಆವರಣದಲ್ಲಿ ಸಭೆ ನಡೆಯಲಿದೆ.

# ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘಕ್ಕೆ 21 ಸದಸ್ಯರ ಅವಿರೋಧ ಆಯ್ಕೆ

ದಾವಣಗೆರೆ, ಮಾ. 4- ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘಕ್ಕೆ ಮುಂದಿನ ಮೂರು ವರ್ಷಗಳ ಅವಧಿಗೆ 21 ಸದಸ್ಯರನ್ನು ಸಮಾಜದ ಮುಖಂಡರುಗಳ ನೇತೃತ್ವದಲ್ಲಿ ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ಚುನಾವಣೆಗೆ ಸ್ಪರ್ಧಿಸಿದ್ದ ಎಲ್ಲಾ ಅಭ್ಯರ್ಥಿಗಳು ನಾಮಪತ್ರಗಳನ್ನು ವಾಪಸ್ ತೆಗೆದುಕೊಂಡ ಹಿನ್ನೆಲೆಯಲ್ಲಿ ಉಳಿಕೆ ಅಭ್ಯರ್ಥಿಗಳ 21 ಸದಸ್ಯರುಗಳನ್ನು ಚುನಾವಣಾಧಿಕಾರಿಗಳಾದ ಬಸವರಾಜ್ ರಾಮಗೊಂಡನಹಳ್ಳಿ ತಿಳಿಸಿದ್ದಾರೆ.

ಎಂ.ಬಿ. ದ್ಯಾಮಣ್ಣ ಯಕ್ಕನಹಳ್ಳಿ. ದೇವಿಕುಮಾರ್ ತಿಮ್ಮೇನಹಳ್ಳಿ, ಜಗನ್ನಾಥ್ ಡಿ.ಜೆ. ತಣಿಗೆರೆ, ರವಿ ಕೆ.ಬಿ. ಬಸವಾಪಟ್ಟಣ, ಜಿ.ಕೆ. ಸುರೇಶ್ ಹರಿಹರ, ರೇವಣಸಿದ್ದಪ್ಪ ಗಂಗನರಸಿ, ಬಿ. ಮಲ್ಲೇಶಪ್ಪ ಕಮಲಾಪುರ, ಎಲ್.ಬಿ. ಭೈರೇಶ್ ಜಗಳೂರು, ಎ. ಮಂಜುನಾಥ ಕೊಕ್ಕನೂರು, ಭಗತ್ ಸಿಂಹ ಚಿಕ್ಕಬೂದಿಹಾಳ, ಎಸ್. ವೆಂಕಟೇಶ್ ಮಾಯಕೊಂಡ, ಬಿ. ಷಣ್ಮುಖಪ್ಪ ಮಳಲ್ಕೆರೆ,

ಟಿ.ಬಿ. ಮೂರ್ತಿ ಲೋಕಿಕೆರೆ, ವೈ. ವಿರೂಪಾಕ್ಷಪ್ಪ ಜಡಗನಹಳ್ಳಿ, ಜಿ.ವಿ. ಮಾಲತೇಶ್ ಹದಡಿ, ಟಿ.ಟಿ. ಅವಿನಾಶ್ ದಾವಣಗೆರೆ ನಗರ, ಎಚ್.ಜಿ. ಗಣೇಶಪ್ಪ ಹೊಸ ಕುಂದುವಾಡ, ಆರ್. ರಮೇಶ್ ದಾವಣಗೆರೆ, ಎಂ.ಸಿ. ರವಿ ದಾವಣಗೆರೆ, ವೈ. ಮಂಜುನಾಥ್ ದಾವಣಗೆರೆ, ದೀಪಕ್ ಬಿ. ಜೋಗಪ್ಪನವರ್ ದಾವಣಗೆರೆ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ಇದೇ ದಿನಾಂಕ 15 ರಂದು ಚುನಾವಣೆ ನಡೆಯಬೇಕಾಗಿತ್ತು. ಚುನಾವಣೆ ದಿನಾಂಕ ಪ್ರಕಟವಾಗಿದ್ದ ಹಿನ್ನೆಲೆಯಲ್ಲಿ ಸಮಾಜದ ಹಿರಿಯರ ನೇತೃತ್ವದಲ್ಲಿ ಚುನಾವಣೆ ಇಲ್ಲದೇ ಅವಿರತವಾಗಿ 21 ಸದಸ್ಯರುಗಳ ಮುಂದಿನ ಮೂರು ವರ್ಷದ ಅವಧಿಗೆ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

# ಹೆಬ್ಬಾಳ್ ಗ್ರಾಮದಲ್ಲಿ ಇಂದು 10ನೇ ಕನ್ನಡ ಸಾಹಿತ್ಯ ಸಮ್ಮೇಳನ

ದಾವಣಗೆರೆ, ಮಾ. 4 - ಇಲ್ಲಿಗೆ ಸಮೀಪದ ಹೆಬ್ಬಾಳು ಗ್ರಾಮದ ಶ್ರೀ ರುದ್ರೇಶ್ವರ ವಿರಕ್ತ ಮಠದ ಸಮುದಾಯ ಭವನದಲ್ಲಿ ನಾಳೆ ದಿನಾಂಕ 5ರ ಮಂಗಳವಾರ ನಡೆಯಲಿರುವ ದಾವಣಗೆರೆ ತಾಲ್ಲೂಕು 10ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಕಲ ಸಿದ್ಧತೆಯನ್ನು ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ, ತಾಲ್ಲೂಕು ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ಅವರುಗಳು ಇಂದು ಸಂಜೆ ಪರಿಶೀಲಿಸಿದರು.



ಕಸಾಪ ಜಿಲ್ಲಾ ಪದಾಧಿಕಾರಿಗಳಾದ ಬಿ. ದಿಳ್ಯಪ್ಪ, ಪ್ರಕಾಶ್, ಶ್ರೀಮತಿ ಹೆಚ್.ಕೆ. ಸತ್ಯಭಾಮ ಮಂಜುನಾಥ್, ರೇವಣಸಿದ್ದಪ್ಪ ಅಂಗಡಿ, ಜಗದೀಶ್ ಕೂಲಂಬಿ, ಜಿಗಳಿ ತಾಲ್ಲೂಕು ಪದಾಧಿಕಾರಿಗಳಾದ ಎಂ. ಷಡಕ್ಷರಪ್ಪ ಬೇತೂರು, ದಾಗಿನಕಟ್ಟೆ ಪರಮೇಶ್ವರಪ್ಪ, ಆರ್. ಶಿವಕುಮಾರ್, ಎಂ. ಬಸವಂತಪ್ಪ ಬೇತೂರು, ಹರಿಹರದ ಡಿ.ಎಂ. ಮಂಜುನಾಥಯ್ಯ, ರಿಯಾಜ್ ಅಹಮದ್ ಮತ್ತಿತರರು ಉಪಸ್ಥಿತರಿದ್ದರು.

ಸಮ್ಮೇಳನದಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಖಾಸಗಿ ಅನುದಾನಿತ, ಅನುದಾನ ರಹಿತ ಹಾಗೂ ಸರ್ಕಾರಿ ಪ್ರಾಥಮಿಕ ಪ್ರೌಢ ಶಾಲೆಗಳ ಶಿಕ್ಷಕರುಗಳಿಗೆ ಅನ್ಯ ಕಾರ್ಯ ನಿಮಿತ್ತ (ಓಓಡಿ) ಸೌಲಭ್ಯ ಕಲ್ಪಿಸಿ ಜಿಲ್ಲಾ ಸಾಕ್ಷರತಾ ಇಲಾಖೆಯ ಉಪನಿರ್ದೇಶಕರು ಆದೇಶಿಸಿದ್ದಾರೆ.

# ಸ್ಪರ್ಧೆ ಅವಧಿ ವಿಸ್ತರಣೆ

ದಾವಣಗೆರೆ, ಮಾ.4- ನಗರದ ಕಲಾಕುಂಚ ಮಹಿಳಾ ವಿಭಾಗದಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ 'ದಾವಣಗೆರೆ ಗೃಹಿಣಿ ಸ್ಪರ್ಧೆ-2024' ಪ್ರವೇಶಕ್ಕೆ ಅವಧಿ ವಿಸ್ತರಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷೆ ಹೇಮಾ ಶಾಂತಪ್ಪ ಪೂಜಾರಿ ತಿಳಿಸಿದ್ದಾರೆ. ಆಸಕ್ತ ಮಹಿಳೆಯರು ಇದೇ ದಿನಾಂಕ 10ರೊಳಗೆ 9538732777ಕ್ಕೆ ಸಂಪರ್ಕಿಸಿ, ಹೆಸರು ನೋಂದಾಯಿಸಬಹುದು.

ACCOMMODATION AVAILABLE
FOR LEASE/RENT
SHOPS-2&5 (BOTH-234 SFT) are available for Rent in Binny Company Road, (UCO Bank building)
Interested Parties may Contact At :
Sree Kodandarama Devaru Temple Association
# 56/1,2, Hanumanthappa Buildings
Poona-Bangalore Road, Davangere-2.
Ph. : 94498 28834

# ಸಾಮಾಜಿಕ ಭದ್ರತಾ ಯೋಜನೆ, ಅಂಚೆಯಿಂದ ಸಕಾಲದಲ್ಲಿ ಮಾಸಾಶನ ತಲುಪಿಸಲು ಜಿಲ್ಲಾಧಿಕಾರಿಗಳ ನಿರ್ದೇಶನ

ದಾವಣಗೆರೆ, ಮಾ. 4 - ಸಾಮಾಜಿಕ ಭದ್ರತಾ ಯೋಜನೆಗಳಾದ ಸಂಧ್ಯಾಸುರಕ್ಷಾ, ವೃದ್ದಾಪ್ಯ, ವಿಧವಾ, ಅಂಗವಿಕಲರ ಮಾಸಾಶನ ಸೇರಿದಂತೆ, ಇನ್ನಿತರೆ ಮಾಸಾಶನಗಳನ್ನು ಅಂಚೆ ಇಲಾಖೆಯಿಂದ ನಿಗದಿತ ಸಮಯಕ್ಕೆ ತಲುಪಿಸಬೇಕೆಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ಏರ್ಪಾಡಾಗಿದ್ದ ಜಿಲ್ಲೆಯ ಅಂಚೆ ಇಲಾಖೆ ಅಧಿಕಾರಿಗಳು ಹಾಗೂ ಸಾಮಾಜಿಕ ಭದ್ರತಾ ಯೋಜನೆ ಅನುಷ್ಠಾನಾಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಪ್ರತಿ ತಿಂಗಳು ಸಾಮಾಜಿಕ ಭದ್ರತಾ ಯೋಜನೆ ಮಾಸಾಶನ ಸಕಾಲದಲ್ಲಿ ತಲುಪದ ಕಾರಣ ವಯೋವೃದ್ದರಿಗೆ ಜೀವನ ನಿರ್ವಹಣೆ ಹಾಗೂ ದಿನನಿತ್ಯದ ಖರ್ಚು-ವೆಚ್ಚಗಳಿಗೆ ಸಮಸ್ಯೆಯಾಗಿದೆ ಎಂದು ಹಲವು ಮಾಸಾಶನ ಫಲಾನುಭವಿಗಳು ದೂರು ನೀಡಿದ್ದರು.

ಅಂಚೆ ಇಲಾಖೆಯಿಂದ ಮಾಸಾಶನಗಳು ಸಕಾಲದಲ್ಲಿ ವಿತರಣೆಯಾಗಿದೆಯೇ ಇಲ್ಲವೇ ಎಂಬ ಬಗ್ಗೆ ಪರಿಶೀಲನೆ ನಡೆಸಬೇಕು. ಮಾಸಾಶನದ ಮಾಹಿತಿ ಕೇಳಲು ಬರುವವರಿಗೆ ಅಂಚೆ ಕಚೇರಿಯಲ್ಲಿ ಸೌಜನ್ಯತೆಯಿಂದ ವರ್ತನೆ ಮಾಡುವ ಜೊತೆಗೆ ಅವರ ಖಾತೆಯಲ್ಲಿ ಹಣ ಜಮಾ ಆಗಿರುವ ಬಗ್ಗೆ ನಿಖರ ಮಾಹಿತಿಯನ್ನು ನೀಡಬೇಕು.

ಕೆಲವೊಂದು ವೇಳೆ ಅಂಚೆ ಇಲಾಖೆ ನೌಕರರು ವಿತರಣೆಯ ವೇಳೆ ವಿಳಂಬ ಮಾಡುವ ಸಂಭವವಿದ್ದು ಇದನ್ನು ಪೋಸ್ಟ್ ಮಾಸ್ಟರ್ ಪ್ರತಿನಿತ್ಯ ಪರಿಶೀಲನೆ ಮಾಡಿಕೊಳ್ಳಬೇಕೆಂದು ತಿಳಿಸಿ ಮುಂದಿನ ದಿನಗಳಲ್ಲಿ ಸರ್ಕಾರದಿಂದ ಜಮಾ ಮಾಡಿದ್ದರೂ ಮಾಸಾಶನ ತಲುಪದಿದ್ದಲ್ಲಿ ಅಂತಹ ಸಿಬ್ಬಂದಿಯ ಮೇಲೆ ಶಿಸ್ತುಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದರು.

ಮಾಸಾಶನ ಪಾವತಿಯ ಹಂತಗಳು; ಅಂಚೆ ಮೂಲಕ ಪಡೆಯುತ್ತಿರುವ ಸಾಮಾಜಿಕ ಭದ್ರತಾ ಮಾಸಾಶನವು ಆಧಾರ್ ಬೇಸ್ಡ್ ಡಿಬಿಟಿ ಮೂಲಕ ನೇರವಾಗಿ ಅವರ ಖಾತೆಗೆ ಜಮಾ ಮಾಡಲಾಗುತ್ತದೆ.

ಅಂಚೆ ಕಚೇರಿಯಲ್ಲಿ ಉಳಿತಾಯ ಖಾತೆ ಮತ್ತು ಇಂಡಿಯಾ ಪೋಸ್ಟ್ ಪೇಮೆಂಟ್ ಬ್ಯಾಂಕ್ ಖಾತೆ ಇರುತ್ತದೆ.

ಅಂಚೆ ಎಸ್.ಬಿ.ಖಾತೆಯಿಂದ ಮಾಸಾಶನ ಪಾವತಿಗೆ ಅವರ ಮನೆ ಬಾಗಿಲಲ್ಲಿ ಪಾವತಿಸಲು ಹಿಂಪಡೆಯುವ ನಮೂನೆಗೆ ಸಹಿ ಮತ್ತು ಇದಕ್ಕೆ ಗೆಜೆಟೆಡ್ ಅಧಿಕಾರಿಗಳ ಸಹಿ, ಸಾಕ್ಷಿಗಳ ಸಹಿ ಪಡೆದು ಮನೆ ಬಾಗಿಲಲ್ಲಿ ವಿತರಣೆ ಮಾಡಲಾಗುತ್ತದೆ. ಮತ್ತು ಇಂಡಿಯಾ ಪೋಸ್ಟ್ ಪೇಮೆಂಟ್ ವ್ಯವಸ್ಥೆಯಡಿ ಅಂಚೆ ಕಚೇರಿಯಲ್ಲಿ ಹಾಗೂ ಮನೆ ಬಾಗಿಲಲ್ಲಿ ಬಯೋಮೆಟ್ರಿಕ್ ಮೂಲಕ ಅಂಚೆಯಣ್ಣ ಪಾವತಿಸುವರು. ಮಾಸಾಶನ ಸರ್ಕಾರದಿಂದ ಅವರ ಖಾತೆಗೆ ಜಮೆಯಾದ ಬಗ್ಗೆ ಅವರು ನೀಡಿರುವ ಮೊಬೈಲ್‌ಗೆ ಮೆಸೇಜ್ ಹೋಗುತ್ತದೆ. ಫಲಾನುಭವಿಗಳು ಬಯೋಮೆಟ್ರಿಕ್ ನೀಡುವಾಗ ಮತ್ತು ವಿತ್‌ಡ್ರಾ ನಮೂನೆಗೆ ಸಹಿ ಮಾಡುವಾಗ ಖಾತರಿ ಮಾಡಿಕೊಳ್ಳಬೇಕಾಗುತ್ತದೆ.

ಸಭೆಯಲ್ಲಿ ಅಂಚೆ ಅಧೀಕ್ಷಕರಾದ ಚಂದ್ರಶೇಖರ್, ಸಾಮಾಜಿಕ ಭದ್ರತಾ ಯೋಜನೆ ಸಹಾಯಕ ನಿರ್ದೇಶಕರಾದ ಪುಷ್ಪಾ ಹಾಗೂ ಅಂಚೆ ಇಲಾಖೆಯ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.




# ಸಂವಿಧಾನ ಇಲ್ಲದ ದೇಶ ಊಹಿಸಲೂ ಸಾಧ್ಯವಿಲ್ಲ : ನ್ಯಾ. ರಾಜೇಶ್ವರಿ

## ಸಂವಿಧಾನ ಜಾಗೃತಿ ರಥಯಾತ್ರೆಗೆ ನಗರದಲ್ಲಿ ಸ್ವಾಗತ



ದಾವಣಗೆರೆ, ಮಾ.4- ಸಂವಿಧಾನದಿಂದ ಇಂದು ಪ್ರತಿಯೊಬ್ಬ ನಾಗರಿಕರೂ ತಮ್ಮ ಹಕ್ಕು ಚಲಾಯಿಸಲು ಸಾಧ್ಯವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಹೇಳಿದರು.

ನಗರದ ದೇವರಾಜ ಅರಸು ಬಡಾವಣೆಯಲ್ಲಿರುವ ಜಿಲ್ಲಾ ನ್ಯಾಯಾಲಯದ ಆವರಣಕ್ಕೆ ಇಂದು ಮಧ್ಯಾಹ್ನ ಆಗಮಿಸಿದ ಸಂವಿಧಾನ ಜಾಗೃತಿ ರಥಯಾತ್ರೆಗೆ ಸ್ವಾಗತ ಕೋರಿ ನಂತರ ಅವರು ಮಾತನಾಡಿದರು.

ಜನ ಜಾಗೃತಿ ರಥಯಾತ್ರೆ ಆಯೋಜಿಸಿರು ವುದು ಶ್ಲಾಘನೀಯ. ಈ ರಥಯಾತ್ರೆ ಪ್ರತಿಯೊಂದು ಗ್ರಾಮಗಳಿಗೂ ಭೇಟಿ ನೀಡಿ ಅರಿವು ಮೂಡಿಸುತ್ತಿದೆ. ನಾವೆಲ್ಲಾ ಸಂವಿಧಾನದ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕು ಎಂದರು.

ಜನ ಸಾಮಾನ್ಯರಿಗೆ ಸಂವಿಧಾನದ ಅರಿವು ಕಡಿಮೆ. ಆದ್ದರಿಂದ ಈ ಬಗ್ಗೆ ಜಾಗೃತಿ ಯೋಜನೆಯಡಿ ಜಾಗೃತಿ ಮೂಡಿಸಲಾಗುತ್ತಿದೆ. ಸಂವಿಧಾನ ಎಂದರೆ ಒಂದು ಪುಸ್ತಕ ಎಂದು ತಿಳಿದುಕೊಳ್ಳುತ್ತೇವೆ. ಈ ಪುಸ್ತಕ ಇಲ್ಲದೇ ಹೋಗಿದ್ದರೆ, ನಾವು ಹೇಗೆ ಆಡಳಿತ ಮಾಡುವುದು ಎಂಬುದೇ ಗೊತ್ತಾಗುತ್ತಿರಲಿಲ್ಲ ಹಾಗೂ ಎಲ್ಲಾ ಕಡೆ ಗಲಭೆ, ಗೊಂದಲಗಳು ಉಂಟಾಗುತ್ತಿದ್ದವು.ಸಂವಿಧಾನ ಇರುವ ಕಾರಣ ಇಂದು ಪ್ರಜಾಪ್ರಭುತ್ವ ಇದೆ. ಜೊತೆಗೆ ನಾವೆಲ್ಲಾ ನಾಗರಿಕರಾಗಿ ಜೀವನ ನಡೆಸಲು ಅವಕಾಶ ದೊರೆತಿದೆ. ಸಂವಿಧಾನ ಇಲ್ಲದ ದೇಶವನ್ನು ಊಹೆ ಮಾಡಲು ಸಾಧ್ಯವಿಲ್ಲ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್. ಅರುಣ್ ಕುಮಾರ್ ಮಾತನಾಡಿ, ಬಸವಣ್ಣನವರು ಸಮಾನತೆ ಕನಸಿನೊಂದಿಗೆ ಸಮ ಸಮಾಜ ನಿರ್ಮಾಣ ಮಾಡಲು ಶ್ರಮಿಸಿದರು. ಬುದ್ಧ ಹಾಗೂ ಬಸವಣ್ಣನವರ ಆಶಯಗಳು ಸಂವಿಧಾನದಲ್ಲಿ ಅಡಕವಾಗಿವೆ. ಈ ಆಶಯಗಳನ್ನು ಕಾಪಾಡಿಕೊಂಡು ಹೋಗುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ಹೇಳಿದರು.

ಹಿರಿಯ ವಕೀಲರಾದ ರಾಮಚಂದ್ರ ಕಲಾಲ್, ಬಿ. ಎಂ.ಹನುಮಂತಪ್ಪ ಮಾತನಾಡಿದರು. ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ವಿಜಯಾನಂದ್ ಸಂವಿಧಾನದ ಪೀಠಿಕೆ ಬೋಧಿಸಿದರು. ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಕೆ. ನಾಗರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಜಿಲ್ಲಾ ನ್ಯಾಯಾಧೀಶರಾದ ಶ್ರೀಪಾದ್ ಎನ್., ದಶರಥ್ ಬಿ., ಪ್ರವೀಣ್‌ಕುಮಾರ್ ಕೆ.ಆರ್., ಸಿವಿಲ್ ನ್ಯಾಯಾಧೀಶ ರಾದ ಎಸ್.ಜಿ.ಸಲಗೆರೆ, ನಿವೇದಿತಾ, ರೇಷ್ಮಾ ಹೆಚ್.ಡಿ. ಗಾಯತ್ರಿ, ಪ್ರಶಾಂತ್, ಮಲ್ಲಿಕಾರ್ಜುನ್, ಸಿದ್ದರಾಜು, ನಾಜಿಯಾ ಕೌಸರ್, ಜಿಲ್ಲಾ ನ್ಯಾಯಾಂಗದ ಆಡಳಿತಾಧಿಕಾರಿ ಬಿ.ಶ್ರೀನಿವಾಸ್, ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಪ್ರಕಾಶ್ ನಾಯಕ್, ಸಂಘದ ಕಾರ್ಯದರ್ಶಿ ಎಸ್.ಬಸವರಾಜ್, ಸಹ ಕಾರ್ಯದರ್ಶಿ ಎ.ಎಸ್.ಮಂಜುನಾಥ್ ಹಾಗೂ ಇತರರು ಈ ಸಂದರ್ಭದಲ್ಲಿದ್ದರು.

# ಪುಟ್ಟರಾಜ ಗವಾಯಿಗಳವರ ಜನ್ಮ ದಿನೋತ್ಸವ ಆಚರಣೆ



ದಾವಣಗೆರೆ, ಮಾ. 5 - ಪಂಡಿತ್ ಪುಟ್ಟರಾಜ ಸೇವಾ ಸಮಿತಿ (ಗದಗ)ಯ ದಾವಣಗೆರೆ ಜಿಲ್ಲಾ ಘಟಕ ಮತ್ತು ಮಹಿಳಾ ಘಟಕಗಳಿಂದ ಡಾ. ಪಂಡಿತ್ ಪುಟ್ಟರಾಜ ಗವಾಯಿಗಳವರ ಜನ್ಮ ದಿನೋತ್ಸವವನ್ನು ಅರ್ಥ ಪೂರ್ಣವಾಗಿ ನಗರದ ಪಿ.ಬಿ. ರಸ್ತೆಯಲ್ಲಿರುವ ಹೋಟೆಲ್ ಶ್ರೀಗಂಧ ರೆಸಿಡೆನ್ಸಿಯಲ್ಲಿ ನಿನ್ನೆ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪಂಡಿತ್ ಪುಟ್ಟರಾಜ ಸೇವಾ ಸಮಿತಿ ಜಿಲ್ಲಾಧ್ಯಕ್ಷ ಪಿ.ಬಿ. ವಿನಾಯಕ ಮಾತನಾಡಿ, ಪೂಜ್ಯರ ಯಾವುದೇ ಕಾರ್ಯಕ್ರಮಗಳನ್ನು ನಾವು ಮಾಡಬೇಕೆಂದುಕೊಂಡರೆ ಗುರುಗಳು ನಮಗೆ ಆ ಶಕ್ತಿಯನ್ನು ನೀಡುತ್ತಾರೆ. ಅವರ ಆಶೀರ್ವಾದ ಒಂದಿದ್ದರೆ ಎಲ್ಲಾ ಕಾರ್ಯಕ್ರಮಗಳು ಸುಸೂತ್ರವಾಗಿ ನೆರವೇರುತ್ತದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ಘಟಕದ ಅಧ್ಯಕ್ಷರಾದ ಸೌಮ್ಯ ಸತೀಶ್ (ಧಾರವಾಡ), ಆನಂದ್ ಪಾಟೀಲ್, ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಪರಮೇಶ್ವರಪ್ಪ ಸಿರಿಗೆರೆ ಅವರುಗಳು ಮಾತನಾಡಿ, ಪುಟ್ಟರಾಜ ಗವಾಯಿಗಳು ನಡೆದು ಬಂದ ದಾರಿ, ಅವರು ಸಂಗೀತ ಕ್ಷೇತ್ರಕ್ಕೆ ಕೊಟ್ಟಿರುವ ಕೊಡುಗೆ, ಸಾವಿರಾರು ಅಂಧರಿಗೆ ದಾರಿ ದೀಪವಾಗಿರುವ ಜೀವನವನ್ನು ತಮ್ಮದೇ ಶೈಲಿಯಲ್ಲಿ ನೆರೆದಿದ್ದ ಎಲ್ಲ ಭಕ್ತರಿಗೂ ಉಣಬಡಿಸಿದರು.

ಸಂಗೀತಗಾರ ಆನಂದ್ ಪಾಟೀಲ್ ಮತ್ತು ಸಂಗಡಿಗರಿಂದ ಶಾಸ್ತ್ರೀಯ ಸಂಗೀತ ಮತ್ತು ಘಟಕದ ಉಪಾಧ್ಯಕ್ಷ ರೇವಣಸಿದ್ದಪ್ಪ ಅವರ ಶಿಷ್ಯಂದಿರಿಂದ ಸಂಗೀತ ಕಾರ್ಯಕ್ರಮ ಮತ್ತು ನಂದೀಶ್ ಅವರಿಂದ ಕೊಳಲು ವಾದನ ನಡೆಯಿತು

ಜ್ಯೂನಿಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಜಿಲ್ಲಾ ಘಟಕದ ಅಧ್ಯಕ್ಷ ವಿನಾಯಕ ಪಿ.ಬಿ. ಮತ್ತು ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ಸೌಮ್ಯ ಸತೀಶ್ ಧಾರವಾಡ ಪ್ರಶಸ್ತಿ ವಿತರಿಸಿ ಗೌರವಿಸಿದರು. ಮಮತಾ ನಾಗರಾಜ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಘಟಕದ ರೇವಣ ಸಿದ್ಧಪ್ಪ, ವನಜ ಮಹಾಲಿಂಗಯ್ಯ, ವಿಕ್ರಂ ಜೋಶಿ, ಅಭಿಷೇಕ್ ಎಸ್.ಆರ್. ಶ್ರೀನಿವಾಸ್ ಕುಂದೂರ್, ಮಮತಾ ನಾಗರಾಜ, ಪುಷ್ಪ ಎನ್.ಎಚ್, ಹಾಲೇಶ್, ಅನುಷಾ, ಮಂಜುಳಾ, ಮಂಜುಳಾ ಹುಂಡೇಕರ್, ಪುಷ್ಪ ವೀರೇಶ್, ಶಾಂತ ಶಿವಶಂಕರ, ಲತಾ ಕಪಾಲಿ, ರಾಜಶ್ರೀ, ಸುಜಾತ, ಜ್ಯೋತಿ, ಸುಭಾಷಿನಿ, ಪೂರ್ಣಿಮಾ, ಚೈತ್ರ, ಮಮತಾ, ಸುಮಾ, ವಿದ್ಯಾ, ಶೋಭಾ ಉಪಸ್ಥಿತರಿದ್ದರು.


# ದ್ವಿತೀಯ ಪಿಯು: ಗಣಿತಕ್ಕೆ 113 ಗೈರು

ದಾವಣಗೆರೆ, ಮಾ.4- ಜಿಲ್ಲೆಯಲ್ಲಿ ಸೋಮವಾರ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯ ಗಣಿತ ವಿಷಯಕ್ಕೆ 113 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ. ನೋಂದಾಯಿಸಿಕೊಂಡಿದ್ದ 11313 ವಿದ್ಯಾರ್ಥಿಗಳ ಪೈಕಿ 11200 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಶಿಕ್ಷಣ ವಿಷಯಕ್ಕೆ ನೋಂದಾಯಿಸಿಕೊಂಡಿದ್ದ 636 ವಿದ್ಯಾರ್ಥಿಗಳ ಪೈಕಿ 569 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 67 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ.

# ರಿವೈಂಡಿಂಗ್, ರಿಪೇರಿ ತರಬೇತಿ

ದಾವಣಗೆರೆ, ಮಾ. 5 - ರುಡ್ ಸೆಟ್ ಸಂಸ್ಥೆಯ ವತಿಯಿಂದ ರಿವೈಂಡಿಂಗ್ ಮತ್ತು ರಿಪೇರಿ ಕುರಿತ ತರಬೇತಿಯನ್ನು ಮಾ. 15 ರಿಂದ 30 ದಿನಗಳ ಕಾಲ ಉಚಿತ ವಾಗಿ ನೀಡಲು ಆರ್ಜಿ ಆಹ್ವಾನಿಸ ಲಾಗಿದೆ. ಅರ್ಜಿ ಸಲ್ಲಿಸಲು ಮಾ.10 ಕೊನೆಯ ದಿನ. ಹೆಚ್ಚಿನ ಮಾಹಿತಿ ಗಾಗಿ ದೂ.ಸಂಖ್ಯೆ: 97409 82585, 93801 62042, 91138 80324 ಗೆ ಸಂಪರ್ಕಿಸ ಬಹುದೆಂದು ರುಡ್‌ಸೆಟ್ ಸಂಸ್ಥೆಯ ನಿರ್ದೇಶಕ ರವಿಕುಮಾರ ತಿಳಿಸಿದ್ದಾರೆ.


MAHA TVS WANTED



Sales Executives Qualification : Diploma in Automobile or Mechanical, ITI Candidates

Experience in 2 wheeler sales, good in communication

CONTACT : MAHA AUTOMOBILE

#5961, Opp. Vani Rice Mill, Shivakumara, Swamy Layout, Hadadi Road, Davanagere.

M. : 9902021392, 9663672021, 7026862220


## ಕೈಲಾಸ ಶಿವಗಣಾರಾಧನೆ ಮುಂದೂಡಿಕೆ



ದಾವಣಗೆರೆ - ಆನೆಕೊಂಡ ಗ್ರಾಮದ ಹಿರಿಯ ಮುಖಂಡರಾಗಿದ್ದ

**ಶ್ರೀ ಕುರುಡಿ ಬಣಕಾರ ಚನ್ನಬಸಪ್ಪನವರು**

ದಿನಾಂಕ 01.03.2024ರ ಬೆಳಗಿನ ಜಾವ 4.45 ಕ್ಕೆ ನಿಧನರಾಗಿದ್ದು. ಇವರ ಕೈಲಾಸ ಶಿವಗಣಾರಾಧನೆಯನ್ನು ದಿ. 05.03.2024ರ ಮಂಗಳವಾರ ಏರ್ಪಡಿಸಲಾಗಿತ್ತು. ಆದರೆ, ಕಾರಣಾಂತರಗಳಿಂದ ಮುಂದೂಡಲಾಗಿದೆ.

**ದುಃಖತಪ್ತ ಕುಟುಂಬ ವರ್ಗದವರು**

ಹಿರಿಯ ನ್ಯಾಯವಾದಿಗಳಾಗಿದ್ದ

## ಶ್ರೀ ಕೆ.ಎನ್. ನಾರಪ್ಪ ನಿಧನ



ದಾವಣಗೆರೆ ನಗರದ ಸರಸ್ವತಿ ಬಡಾವಣೆ ವಾಸಿಗಳಾಗಿದ್ದ ಹಿರಿಯ ನ್ಯಾಯವಾದಿ

**ಶ್ರೀ ಕೆ.ಎನ್. ನಾರಪ್ಪ**

ಇವರು ದಿನಾಂಕ : 04.03.2024ನೇ ಸೋಮವಾರ ಮಧ್ಯಾಹ್ನ 2.30ಕ್ಕೆ ನಿಧನರಾಗಿರುತ್ತಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 67 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಮತ್ತು ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು 06.03.2024ನೇ ಬುಧವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1.00ರವರೆಗೆ ಸರಸ್ವತಿ ಬಡಾವಣೆಯಲ್ಲಿರುವ ಮೃತರ ಸ್ವಗೃಹದಲ್ಲಿ ಇರಿಸಲಾಗುವುದು. ನಂತರ ಶಾಮನೂರಿನ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗದವರು.**

|| ಶ್ರೀ ಬಸವೇಶ್ವರ ಸ್ವಾಮಿ ಪ್ರಸನ್ನ || || ಶ್ರೀ ಗುರು ಬಕ್ಕೇಶ್ವರಸ್ವಾಮಿ ಪ್ರಸನ್ನ ||

## ಕೈಲಾಸ ಸಮಾರಾರಾಧನೆ ಆಹ್ವಾನ



ದಾವಣಗೆರೆ ಜಿ|| ಜಗಳೂರು ತಾಲ್ಲೂಕು ಉದ್ದಗಟ್ಟ ಗ್ರಾಮದ ವಾಸಿಗಳಾದ ದಿ. ಶ್ರೀಮತಿ ವನಜಾಕ್ಷಮ್ಮ ಶ್ರೀ ಕಿತ್ತೂರು ಜಯ್ಯಣ್ಣ ದಾವಣಗೆರೆ ಇವರ ಮಕ್ಕಳಾದ ಶ್ರೀಮತಿ ಕೆ.ಜೆ. ಶ್ವೇತಾ ಜಿ.ಎಂ. ಶಶಿಕುಮಾರ್ ಮತ್ತು ಶ್ರೀಮತಿ ಕೆ.ಜೆ. ಸುಧಾ ಚಂದ್ರಶೇಖರಗೌಡ ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 01.03.2024ನೇ ಶುಕ್ರವಾರ ಬೆಳಿಗ್ಗೆ 7.10ಕ್ಕೆ ನನ್ನ ಪೂಜ್ಯ ತಂದೆಯವರಾದ

**ಶ್ರೀ ಕಿತ್ತೂರು ಜಯ್ಯಣ್ಣನವರು**

ಇವರು, ಧೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಸಮಾರಾಧನೆಯನ್ನು** ದಿನಾಂಕ 06.03.2024ನೇ ಬುಧವಾರ ಬೆಳಿಗ್ಗೆ 10.30ಕ್ಕೆ ಉದ್ದಗಟ್ಟ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ದುಃಖತಪ್ತ ಕುಟುಂಬ ವರ್ಗ : ದಿ. ಶ್ರೀಮತಿ ವನಜಾಕ್ಷಮ್ಮ ಮತ್ತು ಮಕ್ಕಳು, ಅಳಿಯಂದಿರು ಕಿತ್ತೂರು ವಂಶಸ್ಥರು ಮತ್ತು ಉದ್ದಗಟ್ಟ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.**

**ಮೊ : 94484 39662, 96630 69951**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.




ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ

ರಾಜ್ಯ ಸರ್ಕಾರದ ವಿಶೇಷ ಅನುದಾನದಲ್ಲಿ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ರೂ.25 ಕೋಟಿ ಅನುದಾನದಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಇಂದು ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪನವರು ಚಾಲನೆ ನೀಡಲಿದ್ದಾರೆ.

| ಕಾಮಗಾರಿಗಳ ವಿವರ | ಸಮಯ ಮತ್ತು ಸ್ಥಳ |
|---|---|
| ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ದಾವಣಗೆರೆ ನಗರದ ಹಳೆಪೇಟೆ ವೀರಭದ್ರೇಶ್ವರ ದೇವಸ್ಥಾನದ ಸಮುದಾಯ ಭವನ ನಿರ್ಮಾಣ ಕಾಮಗಾರಿ | 12.30 ಗಂಟೆಗೆ - ಹಳೆಪೇಟೆ ವೀರಭದ್ರೇಶ್ವರ ದೇವಸ್ಥಾನದ ಎದುರು. |
| ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಬಸರಾಜಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ವೀರೇಶ್ವರ ಸಮುದಾಯ ಭವನ ನಿರ್ಮಾಣ ಕಾಮಗಾರಿ | 12.45 ಗಂಟೆಗೆ - ಬಸರಾಜಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ವೀರೇಶ್ವರ ಪಕ್ಕ. |
| ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ದಾವಣಗೆರೆ 4 ನೇ ವಾರ್ಡಿನ ಭಾಷಾ ನಗರದ ಸಮುದಾಯ ಭವನ ನಿರ್ಮಾಣ ಕಾಮಗಾರಿ. | 1.00 ಗಂಟೆಗೆ 4ನೇ ವಾರ್ಡಿನ ಭಾಷಾ ನಗರದಲ್ಲಿ |
| ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ದಾವಣಗೆರೆ ಹೆಗಡೆ ನಗರದ ಸ್ಥಳಾಂತರದ ಪ್ರದೇಶ ಶಾಮನೂರು ಶಿವಶಂಕರಪ್ಪ ಬಡಾವಣೆಯ ಸಿಸಿ ರಸ್ತೆ ಕಾಮಗಾರಿ | 1.30 ಗಂಟೆಗೆ ಶಾಮನೂರು ಶಿವಶಂಕರಪ್ಪ ಬಡಾವಣೆ |
| ಶಾಲಾ ಶಿಕ್ಷಣ ಇಲಾಖೆ ವತಿಯಿಂದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 51 ಕೊಠಡಿಗಳ ನಿರ್ಮಾಣ ಕಾಮಗಾರಿ. | 2.00 ಗಂಟೆಗೆ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹದಡಿ |

05.03.2024 ಮಂಗಳವಾರದಂದು

ಈ ಕಾಮಗಾರಿಯ ಭೂಮಿ ಪೂಜೆಗೆ ಆಗಮಿಸುತ್ತಿರುವ ದಾವಣಗೆರೆ ಜಿಲ್ಲಾಧಿಕಾರಿಗಳಿಗೂ, ದಾವಣಗೆರೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೂ, ಶಿಕ್ಷಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳೂ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿಗಳೂ ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರುಗಳಿಗೂ, ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ ಹೃದಯಪೂರ್ವಕ ಸ್ವಾಗತ ಸುಸ್ವಾಗತ

ಪ್ರಕಟಣೆ : ದಾವಣಗೆರೆ ಜಿಲ್ಲಾ ಕಾಂಗ್ರೆಸ್